## 12.15 ಪಿ.ಎಂ.

## 1992-93 ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ

ಶ್ರೀ ಬಿ. ಎಂ. ಇದಿನಬ್ಬ: (ಉಳ್ಳಾಳ): ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಸದನದಲ್ಲಿ ಮಂಡಿಸಿರತಕ್ಕಂಥ ಆಯವ್ಯಯವನ್ನು ನಾನು ಸ್ವಾಗತ ಮಾಡಿ ಕೆಲವು ವಿಷಯಗಳನ್ನು ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ಈ ಬಾರಿಯ ಆಯವ್ಯಯ ಪತ್ರ ಅನೇಕ ವೈಶಿಷ್ಟ್ಯಗಳಿಂದ ಕೂಡಿದೆ ಎಂದು ನಾವು ಧಾರಾಳವಾಗಿ ಹೇಳಬಹುದು. ಏಕೆಂದರೆ, ಈ ಆಯವ್ಯಯ ಪಟ್ಟಿಯನ್ನು ತಯಾರು ಮಾಡುವಾಗ ಅನೇಕ ಸೂಕ್ಷ್ಮ ವಿಚಾರಗಳನ್ನು ಇದರಲ್ಲಿ ಅಳವಡಿಸಿಕೊಂಡಿರುವುದು ಕಾಣುತ್ತದೆ. ಅಷ್ಟು ಮಾತ್ರವಲ್ಲ, ಈ ಆಯವ್ಯಯ ಪಟ್ಟಿಯನ್ನು ಸಾಧಾರಣವಾಗಿ ನಾವು ಅನೇಕ ವರ್ಷಗಳಿಂದ ನೋಡುತ್ತಿದ್ದೇವೆ. ಆದರೆ ಈ ಬಾರಿಯ ಬಜೆಟ್ ಭಾಷಣ ದೀರ್ಘವಾಗಿ ಸುಮಾರು 125 ಪುಟಗಳ ಒಂದು ಪುಸ್ತಕವಾಗಿ ಹೊರಗೆ ಬಂದಿದೆ. ಇದರ ಎಲ್ಲಾ ವಿಚಾರಗಳನ್ನು ಹೇಳುವುದಕ್ಕೆ ಬಹಳ ಕಾಲ ಬೇಕಾಗಬಹುದು. ಆದರೆ, ಕೆಲವೇ ಸೂಕ್ಷ್ಮ ವಿಚಾರಗಳನ್ನು ನಾನು ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ಸಾಧಾರಣವಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಇನ್ನಿತರ ಅನೇಕ ಕಡೆಗಳಲ್ಲಿ ಪ್ರವಾಹದ ತೊಂದರೆ ಯಾವಾಗಲೂ ಇದ್ದದ್ದೇ. ಪ್ರತಿ ವರ್ಷ ಪ್ರವಾಹ ಬರುವುದು, ಅತಿವೃಷ್ಟಿಯಾಗುವುದು ಅದರಿಂದ ಬೇಸಾಯ ಮಾಡತಕ್ಕಂಥ ಕೃಷಿಕರಿಗೆ, ರೈತರಿಗೆ ಹಾನಿಯಾಗುವುದು ಇಂಥಾ ಅನೇಕ ತೊಂದರೆಗಳನ್ನು ನಾವು ಅನುಭವಿಸುತ್ತಿದ್ದೇವೆ. ಬೇರೆ ಕಡೆಯೂ ಇದೇ ರೀತಿಯ ಪ್ರವಾಹದಿಂದ ತೊಂದರೆಯಾಗುವುದನ್ನೂ ನಾವು ಕಂಡಿದ್ದೇವೆ. ಈ ರೀತಿ ಪ್ರವಾಹದ ತೊಂದರೆಗೆ ಈಡಾಗುವ ರೈತರಿಗೆ, ಕೃಷಿಕರಿಗೆ ಉಪಕಾರವಾಗುವ ಹಾಗೆ ಈ ಬಜೆಟ್‌ನಲ್ಲಿ ಬಹಳವಾದಂಥ ಒಂದು ಸೂಕ್ಷ್ಮ ನಿರ್ಣಯವನ್ನು ಕೊಟ್ಟಿರುವುದನ್ನು ನಾವು ಕಾಣುತ್ತೇವೆ. ಪ್ರವಾಹದಿಂದ ಮನೆಗಳನ್ನು ಕಳೆದುಕೊಂಡಿರುವವರಿಗೆ ಹಣ ಒದಗಿಸುವ ಬದಲಾಗಿ ಆ ಮನೆಗಳನ್ನು ಪುನರ್ ನಿರ್ಮಾಣ ಮಾಡುವುದಕ್ಕಾಗಿ ಪ್ರತಿ ಮನೆಗೆ 15 ಸಾವಿರ ರೂಪಾಯಿಗಳನ್ನು ಒದಗಿಸಲು ಸರ್ಕಾರ ನಿರ್ಧರಿಸಿದೆ. ಈ ಪರಿಹಾರ ಕಾರ್ಯಕ್ರಮಗಳು 'ಆಶ್ರಯ' ಯೋಜನೆಯಡಿಯಲ್ಲಿ ಮಾಡಲಾಗುತ್ತದೆಂದು ಬಜೆಟ್‌ನಲ್ಲಿ ಹೇಳಲಾಗಿದೆ. ಪ್ರವಾಹ ಬರತಕ್ಕಂಥ ಪ್ರದೇಶದಲ್ಲಿ ಮತ್ತು ಪ್ರವಾಹಕ್ಕೆ ಒಳಗಾಗಿ ತೊಂದರೆಗೆ ಒಳಗಾಗುವವರಿಗೆ ಮತ್ತು ಕೃಷಿಕರಿಗೆ ಇದು ಬಹಳ ದೊಡ್ಡ ಕಾರ್ಯಕ್ರಮ ಎಂದು ಹೇಳುವುದಕ್ಕೆ ಸಂತೋಷವಾಗುತ್ತದೆ. ಪ್ರವಾಹದಿಂದ ತೊಂದರೆಗೆ ಈಡಾದವರಿಗೆ 15 ಸಾವಿರ ರೂಪಾಯಿ ವೆಚ್ಚದಲ್ಲಿ ಕಟ್ಟತಕ್ಕಂಥ ಮನೆಯಲ್ಲಿ ಅವರು ವಾಸ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ನನಗೆ ಕಾಣುತ್ತದೆ. ಇನ್ನು ಬಹಳ ಮುಖ್ಯವಾಗಿ, ಬಜೆಟ್‌ನಲ್ಲಿ ಹೇಳಿರತಕ್ಕಂಥ ವಿಚಾರಗಳು, ಈ ಮೊದಲು ರಾಜ್ಯಪಾಲರ ಭಾಷಣದಲ್ಲಿ ಹೇಳಿರತಕ್ಕಂಥ ಪಂಚ ವಿಚಾರಗಳು ಎಂದರೆ 'ವಿಶ್ವ' 'ಆರಾಧನ' "ಶುಶ್ರೂಷಾ" 'ಅಕ್ಷಯ' ಈ ರೀತಿಯಲ್ಲಿರತಕ್ಕಂಥ ಈ ಕಾರ್ಯಕ್ರಮಗಳ ಬಗ್ಗೆಯೂ ಕೂಡಾ ವಿಸ್ತಾರವಾಗಿ ಈ ಬಜೆಟ್‌ನಲ್ಲಿ ಹೇಳಿದೆ. "ವಿಶ್ವ" ಎನ್ನತಕ್ಕಂಥ ಕಾರ್ಯಕ್ರಮ ಅತ್ಯಂತ ಪ್ರಾಮುಖ್ಯವಾದುದೆಂದು ಬಜೆಟ್‌ನಲ್ಲಿ ಒಳ್ಳೆಯ ರೀತಿಯಲ್ಲಿ ವಿವರಿಸಿದ್ದಾರೆ. ಈ ವಿಶ್ವ ಯೋಜನೆಯು ಆರಂಭವಾಗಿ ಆರೇಳು ತಿಂಗಳುಗಳು ಮಾತ್ರ ಆಗಿದೆ. ಇದರ ಪರಿಪೂರ್ಣವಾದ ಫಲ ಸಿಗಬೇಕಾದರೆ 3 ವರ್ಷ ಅಥವಾ 2 ವರ್ಷ ಕಳೆದ ಮೇಲೆ ಈ ವಿಶ್ವ ಕಾರ್ಯಕ್ರಮದ ಪರಿಣಾಮ, ಪ್ರತಿಫಲ, ಲಾಭವನ್ನು ನೋಡಲಿಕ್ಕೆ ಸಾಧ್ಯವೆಂದು ನಾವು ಮನಗಾಣಬೇಕು. ಇದರಲ್ಲಿ ಹಲವಾರು ಬೇರೆ ಬೇರೆ ಕೃಷಿ ಕೆಲಸಗಳನ್ನು ಮಾಡುವಂಥ ಕಾರ್ಯಕ್ರಮ ಮಾಡಿದ್ದಾರೆ, ಹುರಿ ಹಗ್ಗ ಮಾಡುವುದು, ಪಾದ ರಕ್ಷೆ ಮಾಡುವುದು, ಸಾಬೂನು ಮಾಡುವಂಥಾದ್ದು ಈ ರೀತಿ ಅನೇಕ ಕಾರ್ಯಕ್ರಮಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಮಾಡಿ ಅಲ್ಲಿ ಕೆಲಸ ಮಾಡಿಸುತ್ತಿದ್ದಾರೆ. ಈ ಗುಡಿ ಕೈಗಾರಿಕೆ ಮಾಡತಕ್ಕಂಥ ಜನಕ್ಕೆ ದೊಡ್ಡ ಪ್ರೋತ್ಸಾಹ ಕೊಟ್ಟಿದ್ದಾರೆ. ನನಗೆ ಗೊತ್ತಿದ್ದ ಹಾಗೆ ಮೊದಲೂ ಕೆಲವಾರು ಗ್ರಾಮಗಳಲ್ಲಿ ಗುಡಿ ಕೆಲಸಗಳನ್ನು ಮಾಡುತ್ತಿದ್ದರು. ಆದರೆ ಅವರಿಗೆ ಮಾಡಿರತಕ್ಕಂಥ ವಸ್ತುಗಳನ್ನು ಮಾರಾಟ ಮಾಡುವುದಕ್ಕೆ ಅವಕಾಶ ಇರಲಿಲ್ಲ. ಈ ವಿಶ್ವ ಕಾರ್ಯಕ್ರಮ ಯೋಜನೆ ಬಂದ ಮೇಲೆ ತಯಾರು ಮಾಡಿರತಕ್ಕಂಥ ವಸ್ತುಗಳನ್ನು ಮಾರಾಟ ಮಾಡತಕ್ಕಂಥ ವ್ಯವಸ್ಥೆಯನ್ನು ಈ ಕಾರ್ಯಕ್ರಮದ ಅಡಿಯಲ್ಲಿ ಬರುತ್ತದೆ. ಆ ರೀತಿಯಲ್ಲಿ ಗುಡಿ ಕೈಗಾರಿಕೆ ಮಾಡತಕ್ಕಂಥ ಗ್ರಾಮಾಂತರ ಪ್ರದೇಶದ ಜನರಿಗೆ ತುಂಬಾ ಉಪಕಾರವಾಗಿದೆ. ಮಾರಾಟ ವ್ಯವಸ್ಥೆಯನ್ನು ಮಾಡಿರುವುದರಿಂದ ಇವರು ಹುರಿ ಹಗ್ಗ ಮಾಡುವುದಾಗಲೀ ಅಥವಾ ಸಾಬೂನು ಮಾಡುವುದಾಗಲಿ, ಚರ್ಮದ ಸಾಮಾನಾಗಲೀ ಅಥವಾ ಚಿಪ್ಪಿನಿಂದ ಸುಣ್ಣ ಮಾಡತಕ್ಕಂಥ ಕೆಲಸವಾಗಲೀ ಗ್ರಾಮಾಂತರ ಪ್ರದೇಶಗಳಲ್ಲಿ ಈ ಕೈಗಾರಿಕೆಗಳನ್ನು ಮಾಡಲಿಕ್ಕೆ ಜನರು ಹೊರಟಿದ್ದಾರೆ. ಅವರಲ್ಲಿ ಕಸುಬುಗಾರರು ಕೆಲಸ ಮಾಡುತ್ತಿದ್ದಾರೆ. ಅವರು ತಯಾರು ಮಾಡುವ ಎಲ್ಲಾ ವಸ್ತುಗಳನ್ನು ಮಾರಾಟ ಮಾಡತಕ್ಕಂಥ ವ್ಯವಸ್ಥೆಯನ್ನು ಈ ವಿಶ್ವ ಕಾರ್ಯಕ್ರಮದಲ್ಲಿ ರೂಪಿಸುವುದು, ಇದರ ಬಗ್ಗೆ ಬಜೆಟ್‌ನಲ್ಲಿ ಕೂಡಾ ವಿಸ್ತಾರವಾಗಿ ಹೇಳಿದ್ದಾರೆ.

ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಅನೇಕ ರೀತಿಯ ನೈಪುಣ್ಯತೆ ಇರತಕ್ಕಂಥ ಜನರಿದ್ದಾರೆ. ಅಂಥವರಿಗೆ ಕೈಗಾರಿಕೆಯಲ್ಲಿ ಕೆಲಸ ಮಾಡಲಿಕ್ಕೆ ಇದರಿಂದ ಅವಕಾಶ ಸಿಕ್ಕಿದೆ. ಈ ವಿಶ್ವ ಕಾರ್ಯಕ್ರಮದಲ್ಲಿ ಎಲ್ಲಾ ಗ್ರಾಮಾಂತರ ಪ್ರದೇಶಗಳವರೂ ಕೂಡ ಆ ರೀತಿಯಲ್ಲಿ ಮುಂದೆ ಬರತಕ್ಕಂಥವರಿಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಅವರ ಜೀವನ ನಿರ್ವಹಣೆಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಈ ಯೋಜನೆಯನ್ನು ಈ ವಿಶ್ವ ಕಾರ್ಯಕ್ರಮದಲ್ಲಿ ಅಳವಡಿಸಿದ್ದಾರೆ. ಅನೇಕರು ವಿಶ್ವ ಕಾರ್ಯಕ್ರಮವನ್ನು ಟೀಕಿಸುವವರು ಇರಬಹುದು. ರಾಜ್ಯಪಾಲರ ಭಾಷಣದಲ್ಲಿ ಅನೇಕರ ಟೀಕೆಗಳನ್ನು ಕೇಳಿದ್ದೇವೆ. ಟೀಕೆಯನ್ನು ಮಾಡುವುದು ಬಹಳ ಸುಲಭ ಆದರೆ ಆ ಕಾರ್ಯಕ್ರಮ ಆಗಿ ಮುಗಿಯುವವರೆಗೆ ಕಾಯುವುದು ಬಹಳ ಮುಖ್ಯವಾದುದು. ನಮ್ಮ ಈ ಯೋಜನೆಯ ಪ್ರಾರಂಭದ ಹಂತದಲ್ಲಿಯೇ ಟೀಕೆ ಮಾಡಿದರೆ ಅದಕ್ಕೆ ಅರ್ಥವಿರುವುದಿಲ್ಲ. ನಾವು ಒಂದು ಬೀಜವನ್ನು ಬಿತ್ತಿದಾಗಲೇ ಅದು ಸಸಿಯಾಗುವುದಿಲ್ಲ. ಅದು ಒಂದು ಕಲ್ಪವೃಕ್ಷವಾಗಬೇಕಾದರೆ 3-4-5 ವರ್ಷಗಳ ಕಾಲ ಕಾಯಬೇಕು. ಒಂದು ತೆಂಗಿನ ಮರವನ್ನು ನಾವು ನೆಟ್ಟು ಅದಕ್ಕೆ ಒಳ್ಳೆಯ ರೀತಿಯಲ್ಲಿ ನೀರು ಹಾಕಿ, ಅದಕ್ಕೆ ಒಳ್ಳೆಯ ರೀತಿಯಲ್ಲಿ ಗೊಬ್ಬರ ಕೊಟ್ಟು, ಒಳ್ಳೆಯ ರೀತಿಯಲ್ಲಿ ಕಾಪಾಡಿ, ಒಳ್ಳೆಯ ಬೇಲಿಯನ್ನು ಹಾಕಿ, ಹಸುಗಳು ಬಂದು ಉಪದ್ರವ ಮಾಡದಹಾಗೆ ನೋಡಿಕೊಂಡು ಒಳ್ಳೆಯ ರೀತಿಯಲ್ಲಿ ಕಾಪಾಡಿಕೊಂಡು ಬಂದರೆ, ಮಾತ್ರ ಅದು ಬೆಳೆದು ನಾಲ್ಕೈದು ವರ್ಷಗಳಲ್ಲಿ ಫಲನೀಡುತ್ತದೆ. ಅಲ್ಲಿಂದ ಅದು ಮುಂದಕ್ಕೆ 60-70 ವರ್ಷಗಳವರೆಗೆ ಫಲವನ್ನು ಕೊಡುತ್ತದೆ. ಗೊನೆಗಳಲ್ಲಿನ ತೆಂಗಿನಕಾಯಿಯನ್ನು ತೆಗೆಯುವ ಒಂದು ಶಕ್ತಿ ನಾಲ್ಕೈದು ವರ್ಷಗಳಲ್ಲಿ ಬರುತ್ತದೆ. ಅದೇ ರೀತಿಯಲ್ಲಿ ಇವೊತ್ತು ಯಾವುದೇ ಒಂದು ಕಾರ್ಯಕ್ರಮವನ್ನು ಸರಕಾರದವರು ತೆಗೆದುಕೊಂಡರೆ, ಆರಂಭದಲ್ಲಿ ತೊಡಗಿದ ಒಂದೆರಡು ತಿಂಗಳಲ್ಲೊ ಮೂರು ತಿಂಗಳಲ್ಲೊ ನಾವು ಅದರ ಟೀಕೆಗೆ ಹೊರಟರೆ ಅದರ ನಿಜಗುಣಸ್ಥಿತಿಯನ್ನು ನಮಗೆ ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲ. ಅದೇ ರೀತಿಯಲ್ಲಿ ವಿಶ್ವದ ಕೈಗಾರಿಕಾ ಕಾರ್ಯಕ್ರಮ ಇದೊಂದು ಗ್ರಾಮಾಂತರ ಪ್ರದೇಶದ ಜನರಿಗೆ ಒಂದು ಒಳ್ಳೆಯ ಅವಕಾಶ ಮತ್ತು ಸಂದರ್ಭವನ್ನು ಒದಗಿಸಿಕೊಟ್ಟು, ಅವರ ಜೀವನದಲ್ಲಿ ಒಂದು ರೀತಿಯ ಸೋಮಾರಿತನವು ಹೋಗಿ ಅವರು ಈ ಕೈಗಾರಿಕೆಯಲ್ಲಿ ಕೆಲಸ ಮಾಡಿ ತಮ್ಮ ಜೀವನ ನಿರ್ವಹಣೆ ಮಾಡತಕ್ಕಂಥ ಕಸುಬು ಮತ್ತು ವ್ಯವಸ್ಥೆ ಇದರಲ್ಲಿ ಆಗುವುದನ್ನು ಈ ಬಜೆಟ್‌ನಲ್ಲಿ ಕೂಲಂಕಷವಾಗಿ ವಿಸ್ತಾರವಾಗಿ ಹೇಳಿದ್ದಾರೆ. ಅದಕ್ಕೆ ಬೇಕಾದಷ್ಟು ಹಣವನ್ನು ಕೂಡ ತೆಗೆದಿಟ್ಟಿದ್ದಾರೆ. ಬರಿ "ವಿಶ್ವ" ಎಂದು ಹೇಳಿ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಅದಕ್ಕೆ ಬೇಕಾದಷ್ಟು ಹಣವನ್ನು ವರ್ಷವರ್ಷವೂ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ಆದ್ದರಿಂದ ಇದೊಂದು ಆಶಾದಾಯಕವಾದ ಕಾರ್ಯಕ್ರಮ ಎಂದು ನಾನು ಹೇಳುವುದಕ್ಕೆ ಅಪೇಕ್ಷೆ ಪಡುತ್ತಾ ಇದ್ದೇನೆ. ಅದೇ ರೀತಿಯಲ್ಲಿ ಆಶ್ರಯ ಯೋಜನೆ ಬಗ್ಗೆ ಕೂಡ ಬಹಳ ವಿಸ್ತಾರವಾಗಿ ಹೇಳಿದ್ದಾರೆ. ಈ ಕಾರ್ಯಕ್ರಮವು ಇವತ್ತಲ್ಲ ನಾಳೆ ಒಂದು ಎರಡು-ಮೂರು ವರ್ಷಗಳ ನಂತರವಾದರೂ ಇದರ ಶಕ್ತಿಯ ಅರಿವು ಎಲ್ಲರಿಗೂ ಆಗುತ್ತದೆ. ನಿಜವಾಗಿಯೂ ಒಂದು ಸೆಂಟ್ಸ್ ಜಾಗವಿಲ್ಲದವರು ಕೂಡ ಎಷ್ಟೋ ಜನರು ಗ್ರಾಮಾಂತರ ಪ್ರದೇಶದಲ್ಲಿ ಇದ್ದಾರೆ, ಮರದ ಬುಡಗಳಲ್ಲಿ ಜೀವನ ಮಾಡತಕ್ಕಂಥವರು ಸಾವಿರಾರು ಜನರಿದ್ದಾರೆ, ಯಾರ್ಯಾರ ಮನೆಯಲ್ಲಿ ಬಾಡಿಗೆಗೆ ಇರತಕ್ಕಂಥವರು ಇದ್ದಾರೆ, ಅಂಗಡಿಗಳ ಬಾಗಿಲಲ್ಲಿ ಜೀವನ ಮಾಡತಕ್ಕಂಥವರು ಇದ್ದಾರೆ, ಬರೀ ಡೇರೆ ಹಾಕಿಕೊಂಡು ಜೀವನ ಮಾಡತಕ್ಕಂಥವರು ಇದ್ದಾರೆ. ಬರೀ ಡೇರೆ ಹಾಕಿಕೊಂಡು ಜೀವನ ಮಾಡತಕ್ಕಂಥವರು ಇದ್ದಾರೆ, ಅಂಥವರಿಗೆ ಜಾಗ ಇಲ್ಲ ಮನೆ ಇಲ್ಲ, ಅಂಥವರು ಸಾವಿರಾರು ಸಂಖ್ಯೆಯಲ್ಲಿ ಇದ್ದಾರೆ.

ಇದನ್ನೆಲ್ಲಾ ಚಿಂತನೆ ಮಾಡಿ ಪರಿಶೀಲನೆ ಮಾಡಿ, ಸೂಕ್ಷ್ಮವಾಗಿ ನೋಡಿದರೆ ಮಾತ್ರ ಗೊತ್ತಾಗುತ್ತದೆ. ನಗರ ಪ್ರದೇಶದಲ್ಲಿರತಕ್ಕಂಥ ಜನರು ಭೋಗವಿಲಾಸದಲ್ಲಿರತಕ್ಕಂಥ ಜನರು, ಈ ವಿಚಾರವನ್ನು ಅರ್ಥಮಾಡಿಕೊಳ್ಳದೇ ಇರಬಹುದು. ಅದು ಸರಿಯಲ್ಲ, ಗ್ರಾಮಾಂತರ ಪ್ರದೇಶಗಳಲ್ಲಿ ನಿಜವಾಗಿಯೂ ಜಾಗ ಇಲ್ಲದೆ, ಸ್ಥಳ ಇಲ್ಲದೆ ಇರತಕ್ಕಂಥ ಜನರು ಬಹಳ ಇದ್ದಾರೆ. ಅಂಥವರಿಗೆ 3-4 ಸೆಂಟ್ಸ್ ಜಾಗ ಕೊಟ್ಟು ಹಕ್ಕು ಪತ್ರವನ್ನು ಕೊಟ್ಟು ಜಾಗದ ಮಾಲೀಕರಾಗಿ ಮಾಡತಕ್ಕಂಥಾದ್ದು ಬಹಳ ದೊಡ್ಡ ಕೆಲಸವಾಗಿದೆ. ನಮ್ಮ ಎದುರು ಪಕ್ಷದ ಸದಸ್ಯರುಗಳು ಕಳೆದ ಬಾರಿ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚಿಸುತ್ತಾ ಬಹಳ ಒಳ್ಳೆಯದು ಇದೆ ಎಂದು ಹೇಳಿದ್ದಾರೆ, ಮತ್ತೆ ಒಳ್ಳೆಯದು ಇಲ್ಲ ಎಂದು ಕೂಡ ಹೇಳಿದ್ದಾರೆ. ಈ ಆಶ್ರಯ ಯೋಜನೆಯಲ್ಲಿ ಬರೀ ಜಾಗ ಕೊಡುವುದು ಮಾತ್ರವಲ್ಲ, ಅವರಿಗೆ ಜಾಗ ಕೊಟ್ಟು ಮನೆಯನ್ನು ಕೂಡ ಕಟ್ಟಿ ಕೊಡಬೇಕೆಂಬ ವ್ಯವಸ್ಥೆಯನ್ನು ಮಾಡಿದ್ದಾರೆ. ಅದನ್ನು ಕೂಡ ವಿಸ್ತಾರವಾಗಿ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಬೇಕಾದಷ್ಟು ಹಣವನ್ನು ಕೂಡ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ಗೃಹಮಂಡಳಿಯವರಿಗೆ ಮನೆಗಳನ್ನು ಕಟ್ಟಿಸಿ ಕೊಡತಕ್ಕಂಥ ವ್ಯವಸ್ಥೆಯ ಬಗ್ಗೆ ಹೇಳಿದ್ದಾರೆ. ಈ ಮಾರ್ಚ್ ತಿಂಗಳು ಮುಗಿಯುವದರೊಳಗಾಗಿ ಈ ಕಾರ್ಯಕ್ರಮವನ್ನೂ ಮಾಡಬೇಕು, ಫಲಾನುಭವಿಗಳನ್ನು ಗುರುತಿಸಿ ಅವರ ಹೆಸರನ್ನು ಕೊಡಬೇಕು ಎಂದು ಮೇಲಿಂದ ಮೇಲೆ ಗೃಹಮಂಡಳಿಗೆ ಮತ್ತು ವಸತಿ ಇಲಾಖೆಗೆ ಹಾಗೂ ಸಂಬಂಧಪಟ್ಟ ಕ್ಷೇತ್ರದ

ಮುಖಂಡರುಗಳಿಗೆ ಮತ್ತು ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದಾರೆ. ಆದ್ದರಿಂದ ಈ ಆಶ್ರಯದ ವತಿಯಲ್ಲಿ ಮನೆಯನ್ನು ಕಟ್ಟಿ ಕೊಡತಕ್ಕಂಥ ಕಾರ್ಯಕ್ರಮವು ಬಿರುಸಿನಿಂದ ಮತ್ತು ವೇಗದಿಂದ ಆಗುವಂಥ ಕಾರ್ಯಕ್ರಮ. ಇದನ್ನು ಬಜೆಟ್‌ನಲ್ಲಿ ಬಹಳ ಒಳ್ಳೆಯ ರೀತಿಯಲ್ಲಿ ಹೇಳಿದ್ದಾರೆ. ಹಣವನ್ನು ಕೂಡ ತೆಗೆದಿಟ್ಟಿದ್ದಾರೆ. ಇವೊತ್ತು ಮಾನ್ಯ ಮುಖ್ಯ ಮಂತ್ರಿಯವರು ತಂದಿರತಕ್ಕಂಥ ಬಜೆಟ್‌ನಲ್ಲಿ ವಿಶ್ವ ಮತ್ತು ಆಶ್ರಯ ಕಾರ್ಯಕ್ರಮಗಳಿಗೆ ತೆಗೆದಿಟ್ಟಿರತಕ್ಕಂಥ ಹಣ ಮಾಡಿರತಕ್ಕಂಥ ಉಪಕಾರವು ಗ್ರಾಮಾಂತರ ಪ್ರದೇಶಗಳ ಜನರಿಗೆ ಮಾಡಿದಂಥ ದೊಡ್ಡ ಉಪಕಾರ ಎಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ನಾವು ಹೃದಯಪೂರ್ವಕವಾಗಿ ಮನಗಾಣಬೇಕು. ಅದೇ ರೀತಿಯಲ್ಲಿ ಆಶ್ರಯ ಯೋಜನೆಯಡಿ ಜಾಗ ಸಿಕ್ಕುವಂಥಾದ್ದು ಮಾತ್ರವಲ್ಲ ಮನೆ ಕೂಡ ಸಿಗುವಂಥ ಸಂದರ್ಭ ಬರುವಾಗ ಮರದ ಬುಡದಲ್ಲಿ ಯಾರ್‍ಯಾರ ಅಂಗಡಿ ಬಾಗಿಲಲ್ಲಿ ಯಾರ್‍ಯಾರ ಮನೆಬಾಗಿಲಲ್ಲಿ ಇದ್ದಂಥ ಜನ ಇಂದು ಸಂತೋಷವನ್ನು ವ್ಯಕ್ತಮಾಡುತ್ತಾ ಇದ್ದಾರೆ. ನಾವು ಇಂದು ಗ್ರಾಮಾಂತರ ಪ್ರದೇಶಕ್ಕೆ ಹೋದರೆ ಅಲ್ಲಿಯ ಜನ ಹೇಳುತ್ತಾರೆ. ನಮಗೆ ಆಶ್ರಯ ಕಾರ್ಯಕ್ರಮದಿಂದ ಬಹಳ ಒಳ್ಳೆಯದಾಗಿದೆ ಎಂದು ಗ್ರಾಮಾಂತರ ಪ್ರದೇಶಗಳಿಗೆ ಹೋದರೆ ಮಾತ್ರ ಅದು ತಮಗೆ ಗೊತ್ತಾಗುತ್ತದೆ. ಅದೇ ರೀತಿಯಲ್ಲಿ ಇನ್ನು "ಅಕ್ಷಯ" ಕಾರ್ಯಕ್ರಮ. ಇದಕ್ಕೆ ಬೇಕಾದ ಹಣವನ್ನು ಬಜೆಟ್‌ನಲ್ಲಿ ತೆಗೆದಿಟ್ಟಿದ್ದಾರೆ. ಬರೇ ಬಾಯಿಯಲ್ಲಿ ಹೇಳುವುದು ಮಾತ್ರವಲ್ಲ, ಈ ಅಕ್ಷಯ ಕಾರ್ಯಕ್ರಮ ಯಾವುದು ಎಂದರೆ ಮೊದಲು ಮಧ್ಯಾಹ್ನದ ಊಟ ಕೊಡುವ ವ್ಯವಸ್ಥೆ ಶಾಲೆಗೆ ಹೋಗುವ ಮಕ್ಕಳಿಗೆ ಅಂತ ಇತ್ತು. ಹಾಗೆ ಆರಂಭದಲ್ಲಿ ನಮ್ಮ ಈ ಸರ್ಕಾರ ಮಧ್ಯಾಹ್ನದ ಹೊತ್ತು ಊಟ ಕೊಡಬೇಕೆಂಬ ಕಾರ್ಯಕ್ರಮ ಮಾಡಿತು. ಆಗ ಬಹಳ ಟೀಕೆ ಬಂತು. ಈ ಊಟವನ್ನು ಮಾಡಿಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಅಧ್ಯಾಪಕರಿಗೆ ಇದರಿಂದ ಬಹಳ ಕಷ್ಟವಾಗುತ್ತದೆ. ಅವರು ಸಾಮಗ್ರಿ ತರಲಿಕ್ಕೆ ಹೋಗಬೇಕು, ಅಕ್ಕಿ ತರಲಿಕ್ಕೆ ಗೋಧಿ ತರಲಿಕ್ಕೆ ಹೋಗಬೇಕು. ಕಟ್ಟಿಗೆ, ಪಾತ್ರೆ ತರಲಿಕ್ಕೆ ಹೋಗಬೇಕು. ಅದನ್ನು ತರುವುದು ಮಾತ್ರವಲ್ಲ, ಅವರ ಅಡಿಗೆ ಕೂಡ ಅವರೇ ಮಾಡಬೇಕು. ಅವರೇ ಊಟ ಬಡಿಸಬೇಕು, ಇದು ಅಧ್ಯಾಪಕರಿಗೆ ಬಹಳ ದೊಡ್ಡ ಹೊರೆ, ಇದು ಎಷ್ಟಕ್ಕೂ ಕೂಡದು ಎಂದು ಹಾಹಾಕಾರ ಶುರುವಾಯಿತು. ಪತ್ರಿಕೆಯಲ್ಲಿ ಬಂದಿದೆ, ವಿಧಾನಸಭೆಯಲ್ಲಿ ಕೂಡ ಅನೇಕರು ಇದನ್ನು ಟೀಕೆ ಮಾಡಿದ್ದಾರೆ. ಎಂದು ಇದರಲ್ಲಿ ಭ್ರಷ್ಟಾಚಾರ ಕೂಡ ಆಗುತ್ತದೆ, ಸರಿಯಾದ ಆಹಾರ ಸಿಕ್ಕೋದಿಲ್ಲ, ಒಳ್ಳೆಯ ಅಕ್ಕಿ ಗೋಧಿ ತರೋದಿಲ್ಲ, ಸಜ್ಜಿಗೆ ತರೋದಿಲ್ಲ, ಅದನ್ನು ಒಳ್ಳೆಯ ರೀತಿಯಲ್ಲಿ ಮಾಡಿ ಮಕ್ಕಳಿಗೆ ಕೊಡೋದಿಲ್ಲ ಎಂದು ಕೆಲವರು ಟೀಕೆ ಮಾಡಿದರು. ಮಕ್ಕಳ ಆರೋಗ್ಯ, ಅವರ ಜೀವನ ಹಾಳಾಗುತ್ತದೆ ಎಂದು ಹೇಳುವ ಟೀಕೆಯನ್ನು ನಾವು ಬೇಕಾದಷ್ಟು ಕೇಳಿದ್ದೇವೆ. ಇದನ್ನು ಮನಗಂಡು ಸರ್ಕಾರ ಆಯಿತು, ಮಧ್ಯಾಹ್ನ ಊಟ ಒಳ್ಳೆಯ ಒಂದು ಕಾರ್ಯಕ್ರಮ, ಕೊಡೋಣ ಅಂತ ನಾವು ಮಾಡಿದರೂ ಕೂಡ ಇದಕ್ಕೆ ಈ ರೀತಿಯಾಗಿ ಟೀಕೆ ಬರುತ್ತಿದೆ. ಅಧ್ಯಾಪಕರಿಗೆ ಬಹಳ ಹೊರೆಯಾಗುತ್ತದೆ.

ಅವರು ಈ ಕೆಲಸ ಮಾಡುವಂಥದ್ದು ಸರಿಯಲ್ಲ, ಆದ್ದರಿಂದ ಅವರಿಗೆ ಪಾಠ ಕಲಿಸಿಕೊಡುವುದರಲ್ಲಿ ವ್ಯತ್ಯಯ ಬರುತ್ತದೆ. ಅಂತ ಹೇಳಿ ಅದನ್ನು ರದ್ದು ಮಾಡಿ ಅಕ್ಷಯ ಎಂಬ ಕಾರ್ಯಕ್ರಮ ತಂದದ್ದು. ಇದನ್ನು ನಾವು ಮನಗಾಣಬೇಕು. ಅಕ್ಷಯ ಅಂದ ಕೂಡಲೇ ಅದು ಪ್ರಯೋಜನವಿಲ್ಲ, ಇದು ಪ್ರಯೋಜನವಿಲ್ಲ ಅಂತ ಟೀಕೆ ಮಾಡುವುದು ಸುಲಭ. ಆದರೆ ಈ ಉತ್ತಮವಾದ ಕಾರ್ಯಕ್ರಮಗಳ ಶಕ್ತಿಯ ಬಗ್ಗೆ ಯೋಚನೆ ಮಾಡುವಂಥದ್ದು, ಚಿಂತನೆ ಮಾಡುವಂಥಾ ಗುಣ ಇರಬೇಕು. ಅಕ್ಷಯದಲ್ಲಿ ಏನು ಅಂದರೆ ಶಾಲೆಗೆ ಹೋಗುವ ಪ್ರತಿಯೊಬ್ಬ ಮಗುವಿಗೂ ಒಂದು ರೂ. ಕೊಡುವುದು ಅವರ ಪೋಷಕರಿಗೆ ಇದರಿಂದ ಏನಾಗಿದೆ ಎಂದರೆ ಗ್ರಾಮಾಂತರ ಪ್ರದೇಶದಲ್ಲಿ ಹೋಗಿ ಕೇಳಿದರೆ ಗೊತ್ತಾಗುತ್ತದೆ. ಇಂದು ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಬಹಳ ಹೆಚ್ಚಿದೆ ಮನೆಯಲ್ಲಿ ಮಕ್ಕಳು ಕೂತುಕೊಳ್ಳುವುದಿಲ್ಲ, ರಕ್ಷಕರು ಕೂತುಕೊಳ್ಳುವುದಕ್ಕೆ ಬಿಡೋದಿಲ್ಲ, ಮಕ್ಕಳನ್ನು ಶಾಲೆಗೆ ಕಳಿಸುವ ವ್ಯವಸ್ಥೆ ಮಾಡ್ತಾಯಿದ್ದಾರೆ. ಆದ್ದರಿಂದ ಪ್ರತಿ ಮಗುವಿಗೂ ಒಂದು ರೂ. ಸಿಗುವ ಈ ಕಾರ್ಯಕ್ರಮಕ್ಕೆ ರಕ್ಷಕರು ಪ್ರೋತ್ಸಾಹ ಕೊಡುತ್ತಿದ್ದಾರೆ. ಜನ ಹೇಳುವುದು ಈಗ ಬ್ಯಾಂಕಿನಲ್ಲಿ ಲೆಕ್ಕ ಓಪನ್ ಮಾಡಲಿಕ್ಕೆ ಬಹಳ ಕಷ್ಟವಾಗುತ್ತದೆ ಅಂತ. ಆದರೆ ಅದನ್ನು ನಿಧಾನವಾಗಿ ಸರಿಪಡಿಸಬಹುದು. ಒಮ್ಮೆಗೇ ಎಲ್ಲ ರಕ್ಷಕರ ಹೆಸರನ್ನು ಬ್ಯಾಂಕಿನವರು ಮಾಡುವಾಗ ಸ್ವಲ್ಪ ಕಷ್ಟವಾದರೂ ಕೂಡ ಈ ಕಾರ್ಯಕ್ರಮವನ್ನು ರಕ್ಷಕರಿಗೆ ಕೊಡುವ ವ್ಯವಸ್ಥೆ ಮಾಡಿದ್ದರಿಂದ ಅದನ್ನು ಒಳ್ಳೆಯ ರೀತಿಯಲ್ಲಿ ಬ್ಯಾಂಕಿನವರೂ ಮಾಡಬಹುದು. ಮತ್ತು ಇನ್ನಿತರ ಬೇರೆ ದಾರಿಗಳಿಂದ ಕೂಡ ರಕ್ಷಕರಿಗೆ ಮುಟ್ಟುವಂತಹ ಈ ಕಾರ್ಯಕ್ರಮವುಂಟಲ್ಲ ಇದು ನಿಜವಾಗೂ ಮೆಚ್ಚತಕ್ಕ ಕಾರ್ಯಕ್ರಮ ಎಲ್ಲ ಕಾಲ ಮನೆಯಲ್ಲಿ ಕುಳಿತುಕೊಳ್ಳುವ ಚಿಕ್ಕ ಮಕ್ಕಳು, ಮನೆಯಲ್ಲಿ ಕುಳಿತು ಸೋಮಾರಿಗಳಾಗದೆ ಶಾಲೆಗೆ ಹೋಗುವ ವ್ಯವಸ್ಥೆ ಕೂಡ ಇದರಿಂದ ಆಗುವುದನ್ನು ನಾವು ಕಾಣ್ತಾ ಇದ್ದೇವೆ. ಇನ್ನು "ಶುಶ್ರೂಷ" ಕಾರ್ಯಕ್ರಮ ಇದು ಕೂಡ ಬಜೆಟ್‌ನಲ್ಲಿ ಬಹಳ ಒಳ್ಳೆಯ ರೀತಿಯಲ್ಲಿ ಮಂಡನೆ ಮಾಡಿದ್ದಾರೆ. ಇದಕ್ಕೆ ಬೇಕಾದ ವ್ಯವಸ್ಥೆ ಯಾವ ರೂಪದಲ್ಲಿ ಮಾಡಬೇಕು, ಚಿಕಿತ್ಸೆಗೆ ಯಾವ ರೂಪದಲ್ಲಿ ಹಣವನ್ನು ಉಪಯೋಗಿಸಬಹುದು ಎಂದು ಕೂಡ ಹೇಳಿದ್ದಾರೆ. ಇದನ್ನು ಕೂಡ ನಮ್ಮ ಎದುರುಪಕ್ಷದವರು ಟೀಕೆ ಮಾಡಿದ್ದಾರೆ. ಶುಶ್ರೂಷ ಎಂದರೆ ಪ್ರತಿಯೊಬ್ಬರನ್ನೂ ಪರೀಕ್ಷೆ ಮಾಡಿ ಯಾರಿಗೆ ರೋಗವುಂಟೋ ಅವರ ರೋಗವನ್ನು ಪರಿಶೀಲನೆ ಮಾಡಿ ರೋಗವಿದ್ದವರಿಗೆ ಔಷಧಿ ಕೊಡುವ ವ್ಯವಸ್ಥೆ; ದೊಡ್ಡ ರೋಗವಾಗಿದ್ದರೆ ಅದಕ್ಕೆ ಬೇಕಾದ್ದನ್ನು

ಸರ್ಕಾರಿ ಆಸ್ಪತ್ರೆಗಳಲ್ಲಿ ಮಾಡುವ ವ್ಯವಸ್ಥೆ ಇದನ್ನು ಒಳ್ಳೆಯ ರೀತಿಯಲ್ಲಿ ಮಾಡಬೇಕೆಂದು ಬಜೆಟ್‌ನಲ್ಲಿ ಸೂಕ್ತವಾಗಿ ತೆಗೆದುಕೊಂಡಿದ್ದಾರೆ.

ನಮ್ಮ ಜಿಲ್ಲೆಯಲ್ಲಿ ಎಲ್ಲಾ ಮಂಡಲಗಳಲ್ಲಿ ಶುಶ್ರೂಷ ಕಾರ್ಯಕ್ರಮಗಾಗಿದೆ. ನನ್ನ ಕ್ಷೇತ್ರದಲ್ಲಿ 6 ಮಂಡಲವುಂಟು, ಅವುಗಳಲ್ಲಿ ಕೂಡ ಆಗಿದೆ. 200, 300, 400 ಜನ ಬಂದಿದ್ದಾರೆ. ಇವರನ್ನೆಲ್ಲ, ಡಾಕ್ಟರುಗಳು ಪರೀಕ್ಷೆ ಮಾಡಿದ್ದಾರೆ. ಅಲ್ಲಿಯ ಪ್ರಾಥಮಿಕ ಆರೋಗ್ಯ ಕೇಂದ್ರದವರು ಅದೇ ರೀತೀಲಿ ನಗರದ ಡಾಕ್ಟರಗಳೂ ಬಂದು ಪರೀಕ್ಷೆ ಮಾಡಿ ಅವರಿಗೆ ಬೇಕಾದ ಏನು ಔಷಧಿ ಕೊಡಬೇಕೋ ಅದನ್ನು ಹೇಳಿದ್ದಾರೆ. ಹೀಗಿರುವಾಗ ನನ್ನ ಕ್ಷೇತ್ರದ 6 ಮಂಡಲಗಳಲ್ಲಿ ಈ ಕೆಲಸ ಆಗಿದೆ ಎಂದು ಹೇಳುವಾಗ. ಜಿಲ್ಲೆಯಲ್ಲೂ ಆಗಿದೆ, ಕರ್ನಾಟಕದಲ್ಲೂ ಆಗಿದೆ. ಇನ್ನು ಮುಂದೆ ಈ ಕಾರ್ಯವನ್ನು ಮಾತ್ರ ಮಾಡುವಂಥದ್ದು ಉಳಿದಿದೆ. ಅದಕ್ಕೆ ಬೇಕಾದಂಥ ಹಣವನ್ನು ಕೂಡ ಈ ಬಜೆಟ್‌ನಲ್ಲಿ ಇಟ್ಟಿದ್ದಾರೆ ಎಂದು ಹೇಳುವಾಗ, ಅದನ್ನು ಗೇಲಿ ಮಾಡತಕ್ಕಂಥದ್ದು ಸರಿಯಲ್ಲ. ಅದರ ಪ್ರಯೋಜನ ಏನು ಎಂದು ಮುಂದೆ ನೋಡುವಂಥದ್ದು ಬಹಳ ಮುಖ್ಯ. ನಾನು ಆಗಲೇ ಹೇಳಿದ ಹಾಗೆ ಕಲ್ಪವೃಕ್ಷವನ್ನು ನೆಟ್ಟಕೂಡಲೇ ಫಲ ಸಿಗುವುದಿಲ್ಲ. ನಾಲ್ಕೈದು ವರ್ಷ ಕಾಯಬೇಕು. ಬಹಳ ಅಗಾಧವಾದಂಥ ಫಲ ಸಿಗುತ್ತದೆ. ಅದು ಮತ್ತೆ 50 ವರ್ಷಗಳವರೆಗೆ ಸಿಗುತ್ತದೆ ಎಂದು ಹೇಳುವಂಥ ರೀತಿಯಲ್ಲಿ ಕೂಡ ಈ 'ಶುಶ್ರೂಷಾ' ಕಾರ್ಯಕ್ರಮವನ್ನು ನಾವು ನೋಡಬೇಕಾಗಿದೆಯೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಆರಾಧನಾ ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ ಇದು ಹರಿಜನ ಗಿರಿಜನ, ಪರಿಶಿಷ್ಟ ವರ್ಗದವರಿಗೆ ಗುಡಿ ಗೋಪುರಗಳು ಇಲ್ಲದಂಥ ಸಂದರ್ಭದಲ್ಲಿ ಅವರೂ ಸಹ ಧಾರ್ಮಿಕ ವಿಧಾನಗಳಿಂದ ದೇವರನ್ನು ಪೂಜೆ ಮಾಡಬೇಕು, ಆರಾಧನೆ ಮಾಡಬೇಕು ಎಂದು ಹೇಳಿದರೆ ಅವರಿಗೆ ಸರಿಯಾದಂಥ ಕಟ್ಟಡ ಇಲ್ಲ ಎಂದು ಹೇಳುವವರಿಗೆ ಒಂದು ಗುಡಿಯನ್ನು ಕಟ್ಟಿ ಕೊಡಲಿಕ್ಕೆ ಇದರಿಂದ ಆಸ್ಪದವಾಗಿದೆ. ನಮ್ಮ ಜಿಲ್ಲೆಯ ಕಾಪು ಕ್ಷೇತ್ರದಲ್ಲಿ, ಬೇರೆ ಬೇರೆ ಕ್ಷೇತ್ರದಲ್ಲಿ ಒಳ್ಳೆಯ ರೀತಿಯಲ್ಲಿ ಇದಕ್ಕೆ ಜನ ಮನ್ನಣೆಯನ್ನು ಕೊಟ್ಟಿದ್ದಾರೆ. ಆ ಕಾರ್ಯಕ್ರಮವನ್ನು ಮಾಡಬೇಕು ಎಂದು ಅರ್ಜಿಗಳು ಕೂಡ ಬಂದು ಈ ಕಾರ್ಯಕ್ರಮಗಳಾಗುವುದನ್ನು ನಾವು ಕಾಣುತ್ತಿದ್ದೇವೆ. ನನ್ನ ಕ್ಷೇತ್ರದಲ್ಲಿಯೂ ಕೂಡ ಮೂರು-ನಾಲ್ಕು ಕಡೆಯಿಂದ ಅರ್ಜಿಗಳು ಬಂದು ಅದೂ ಕೂಡ ಹರಿಜನರಿಗೆ, ಪರಿಶಿಷ್ಟ ವರ್ಗದವರಿಗೆ ಈ ರೀತಿಯ ಒಂದು ವ್ಯವಸ್ಥೆಯನ್ನು ಮಾಡುವಂಥದ್ದನ್ನು ನಾವು ಕಾಣುತ್ತಿದ್ದೇವೆ. ಹೀಗಿರುವಾಗ ಇಡೀ ಕರ್ನಾಟಕದಲ್ಲಿ ಅದರ ಪ್ರಯೋಜನ ಸಿಗುತ್ತದೆ ಎಂದು ಹೇಳುವುದರಲ್ಲಿ ಯಾವ ಅನುಮಾನವೂ ಇಲ್ಲ. ಅದನ್ನೂ ಕೂಡ ಬಜೆಟ್‌ನಲ್ಲಿ ಒಳ್ಳೆಯ ರೀತಿಯಲ್ಲಿ ಹೇಳಿದ್ದಾರೆ. ನಾನು ಐದು ವಿಷಯಗಳನ್ನು ಏತಕ್ಕೆ ಹೇಳಿದೆ ಎಂದರೆ ರಾಜ್ಯಪಾಲರ ಭಾಷಣ ಮಾಡತಕ್ಕಂಥ ಕಾಲದಲ್ಲಿ ಎದುರು ಪಕ್ಷದವರು ಬೇಕಾದಷ್ಟು ಟೀಕೆಯನ್ನು ಮಾಡಿದಾಗ ಇವತ್ತು ಈ ಬಜೆಟ್ ಮಂಡನೆ ಆದಾಗ ಕೂಡ ಅದರ ಬಗ್ಗೆ ಬಹಳ ವಿಸ್ತಾರವಾಗಿ, ಬಹಳ ವಿವರವಾಗಿ ಹೇಳಿದ್ದಾರೆ, ಮತ್ತು ಅದಕ್ಕೆ ತೆಗೆದಿಟ್ಟ ಹಣವನ್ನು ಕೂಡ ನಮೂದು ಮಾಡಿದ್ದಾರೆ ಎಂದು ಹೇಳುವಾಗ ಇದು ಬರೀ ಬಾಯಿ ಮಾತಿನಲ್ಲಿ ಹೋಗತಕ್ಕಂಥ ಕಾರ್ಯಕ್ರಮಗಳಲ್ಲ. 'ವಿಶ್ವ' ಆಗಲಿ, 'ಆರಾಧನಾ' ಆಗಲಿ, 'ಅಕ್ಷಯ' ವಾಗಲಿ, 'ಶುಶ್ರೂಷಾ' ಆಗಲಿ, ಇವುಗಳ ಬಾಯಿ ಮಾತಿನಲ್ಲಿ ಹೋಗತಕ್ಕಂಥ ಕೆಲಸವಲ್ಲ. ಇದು ಖಾಯಂ ಆಗಿ ಜನರಿಗೆ, ಜನತೆಗೆ ಗ್ರಾಮಾಂತರ ಪ್ರದೇಶದ ರೈತರಿಗೆ, ಬಡವರಿಗೆ ಒದಗಿಸಿಕೊಡತಕ್ಕಂಥ ಒಂದು ಖಾಯಂ ಕೆಲಸ, ಖಾಯಂ ವ್ಯವಸ್ಥೆ ಎಂಬುದು ನಮಗೆ ಈ ಬಜೆಟ್‌ನ ವಿವರಣೆಯಿಂದ ಮನವರಿಕೆಯಾಗುತ್ತದೆ. ಇನ್ನು ಅದೇ ರೀತಿಯಲ್ಲಿ ಎಲ್ಲದಕ್ಕಿಂತಲೂ ಮುಖ್ಯವಾಗಿ ಅನೇಕ ವಿಚಾರಗಳ ಕಡೆಗೆ ಗಮನವನ್ನು ಕೊಟ್ಟಿದ್ದಾರೆ. ಇವತ್ತು ಖರ್ಚು ಮಾಡತಕ್ಕಂಥದ್ದು, ದುಂದು ವೆಚ್ಚವನ್ನು ಮಾಡತಕ್ಕಂಥದ್ದು ಸರಿಯಲ್ಲ. ಇದನ್ನು ಕಡಿಮೆ ಮಾಡಬೇಕು ಎಂದು ಹೇಳತಕ್ಕಂಥ ವಿಷಯದಲ್ಲಿ ನಾವು ಬಹಳವಾಗಿ ಹೇಳುತ್ತಿದ್ದೇನೆ. ಏತಕ್ಕೆಂದರ ಇವತ್ತು ಆಫೀಸ್‌ಗಳು ಜಾಸ್ತಿಯಾಗಿವೆ.

ಕುರ್ಚಿಗಳಲ್ಲಿ ಸಿಬ್ಬಂದಿಗಳನ್ನು ಹಾಕಿ ಅವರು ಏನು ಮಾಡುತ್ತಾರೆ, ಅವರಿಗೆ ಏನು ಕೆಲಸ ಇದೆ ಎಂದು ಅವರಿಗೇ ಗೊತ್ತಿರುವುದಿಲ್ಲ, ಆದುದರಿಂದ ಇದನ್ನೆಲ್ಲಾ ಕಡಿಮೆ ಮಾಡಿದರೆ ನಮ್ಮ ಕರ್ನಾಟಕದ ಈ ಒಂದು ಸಂಪನ್ಮೂಲದ ಕ್ರೋಢೀಕರಣಕ್ಕೆ ಬಹಳ ಉಪಕಾರವಾಗಬಹುದು ಎಂದು ನಾವೆಲ್ಲಾ ಹೇಳಿದ್ದೇವೆ. ನಾವು ಹತ್ತು-ಹನ್ನೆರಡು ವರ್ಷಗಳಿಂದಲೂ ಹೇಳುತ್ತಿದ್ದೇವೆ. ಈ ಒಂದು ಆಫೀಸನ್ನು ರದ್ದು ಮಾಡಬೇಕು. ಅದೇ ರೀತಿಯಲ್ಲಿ ತಹಶೀಲ್ದಾರ್, ಅಸಿಸ್ಟಂಟ್ ಕಮೀಷನರ್, ಡಿ. ಸಿ. ಎಂದು ಇದೆ. ಅದರಲ್ಲಿ ಅಸಿಸ್ಟಂಟ್ ಕಮೀಷನರ್ ಎಂದು ಹೇಳತಕ್ಕಂಥ ಮಾಧ್ಯಮವನ್ನು ರದ್ದು ಮಾಡಬೇಕು ಎಂದು ನಾವು ಹೇಳುತ್ತಲೇ ಬಂದಿದ್ದೇವೆ. ಆದರೆ ಯಾವ ಕಾರ್ಯಕ್ರಮಗಳೇ ಆಗಿರಲಿ, ಇದಕ್ಕೆ ಮೊದಲು ಅನೇಕರು ಹೇಳಿದ್ದಾರೆ. ಈ ದುಡ್ಡಿನ ಕೊರತೆಯನ್ನು ನೀಗಿಸುವುದಕ್ಕೆ ಯಾವ ರೀತಿಯಲ್ಲಿ ಸಂಪನ್ಮೂಲವನ್ನು ಕೂಡಿಸುವುದಕ್ಕೆ ಸುಲಭವಾದಂಥ ಒಳ್ಳೆಯ ದಾರಿಗಳುಂಟು. ದುಂದು ವೆಚ್ಚಗಳನ್ನು ಎಲ್ಲಿ ಕಡಿಮೆ ಮಾಡಬಹುದು ಎಂಬುದನ್ನು ತೋರಿಸಿಕೊಡತಕ್ಕಂಥ ಕಾರ್ಯಕ್ರಮಗಳನ್ನು ನಾವು ಮಾಡಿ ಎಂದು ಹೇಳಿದ್ದೇವೆ. ಆದರೆ ಇವತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳು, ಅರ್ಥಮಂತ್ರಿಗಳು ಬಹಳ ದೊಡ್ಡ

ಕೆಲಸವನ್ನು ಮಾಡಿದ್ದಾರೆ. ಈಗ ವಿಭಾಗಾಧಿಕಾರಿಗಳ ಹುದ್ದೆಯನ್ನು ರದ್ದುಮಾಡಿದ್ದಾರೆ. ಎ. ಸಿ. ಹುದ್ದೆಯನ್ನು ರದ್ದು ಮಾಡಿ ಎಂದು ಈ ನಲವತ್ತು ವರ್ಷಗಳಲ್ಲಿ, ಹೇಳುತ್ತಲೇ ಬಂದಿದ್ದರೂ ಸಹ ಮಾಡಿರಲಿಲ್ಲ ಆದರೆ ಇಂದು ಈ ಕೆಲಸವನ್ನು ಮಾಡಿ ಆ ಒಂದು ದುಂದು ವೆಚ್ಚಕ್ಕೆ ಕಡಿವಾಣ ಹಾಕತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ ಅದೇ ರೀತಿಯಲ್ಲಿ ವಿಭಾಗಾಧಿಕಾರಿಗಲು ಕಛೇರಿಯಲ್ಲಿ ಎಷ್ಟು ಸಿಬ್ಬಂದಿ ಇದ್ದಾರೆ, ಎಷ್ಟು ಖರ್ಚಾಗುತ್ತಿದೆ ಎಂಬುದನ್ನು ಆಲೋಚನೆ ಮಾಡಿದರೆ ಇವೆಲ್ಲಾ ನಿಲ್ಲುತ್ತವೆ, ಮಾತ್ರವಲ್ಲ ಹಳ್ಳಿಯ ಜನರಿಗೆ ಗ್ರಾಮಾಂತರ ಪ್ರದೇಶದ ಜನರಿಗೆ ಯಾವುದೇ ಒಂದು ಕೆಲಸ ಬೇಗನೆ ಆಗುವುದಕ್ಕೆ ಇದರಿಂದ ಆಸ್ಪದವಾಗುತ್ತದೆ. ಮೊದಲು ಏನು ಆಗುತ್ತಿತ್ತು, ಅಲ್ಲಿ ಮಣಿಗಾರರಿಂದ ವಿಲೇಜ್ ಅಕೌಂಟೆಂಟ್‌ಗೆ ಬರಬೇಕು, ವಿಲೇಜ್ ಅಕೌಂಟೆಂಟ್‌ರವರಿಂದ ತಹಶೀಲ್ದಾರ್‌ರವರಿಗೆ ಹೋಗಬೇಕು. ತಹಶೀಲ್ದಾರ್‌ರವರು ನೋಡಿ ಅಲ್ಲಿಂದ ಎ.ಸಿ. ಆಫೀಸಿಗೆ ಹೋಗಬೇಕು. ಎ.ಸಿ. ಆಫೀಸಿನಿಂದ ಡಿ.ಸಿ. ಆಫೀಸಿಗೆ ಹೋಗಬೇಕು. ಅಲ್ಲಿಂದ ಪುನಃ ಡಿ.ಸಿ. ಆಫೀಸಿನಿಂದ ಎ.ಸಿ. ಆಫೀಸಿಗೆ ಬರಬೇಕು. ಎ.ಸಿ. ಆಫೀಸಿನಿಂದ ತಹಶೀಲ್ದಾರ್ ಆಫೀಸಿಗೆ ಬರಬೇಕು, ಅಲ್ಲಿಂದ ಪುನಃ ಮಣಿಗಾರರನ್ನು ನೋಡಬೇಕು. ಈ ರೀತಿ ಚಕ್ರ ತಿರುಗತಕ್ಕಂಥ ಈ ಕೆಲಸ ಹಳ್ಳಿಯ ಒಬ್ಬ ಬಡ ರೈತನ ಕೆಲಸ ಆರು ತಿಂಗಳಾದರೂ ಅವನ ಒಂದು ಅರ್ಜಿ ಪರೀಶೀಲನೆಯಾಗುವುದಕ್ಕೆ ಸಾಧ್ಯಾವಾಗದೇ ಇರುವುದನ್ನು ನಾವು ಕಂಡಿದ್ದೇವೆ.

ನಮ್ಮ ಕ್ಷೇತ್ರದ ಪಿಚಾರಕ್ಕೆ ಸಂಬಂಧಪಟ್ಟಂತೆ ಹೇಳುವಂಥದ್ದು. ತಮ್ಮ ಕೆಲಸ ಆಗಬೇಕಾಗಿದ್ದರೆ ಅದರ ಬೆನ್ನ ಹಿಂದೆ ಜನ ಹೋಗಬೇಕಾಗುತ್ತದೆ. ಅದಕ್ಕೆ ಎಷ್ಟು ಕಷ್ಟವಾಗುತ್ತದೆಂದು ತಾವು ಆಲೋಚನೆ ಮಾಡಿ. ಸ್ವಲ್ಪ ತಿಳಿದವರು ಮಾತನಾಡಲು ಗೊತ್ತಿರುವಂಥವರು, ಆಫೀಸರನ್ನು ಭೇಟಿಮಾಡಲು ಸಾಧ್ಯವಿರುವವರು ಖುರ್ಚಿಯಲ್ಲಿ ಕುಳಿತುಕೊಳ್ಳಲಿಕ್ಕೆ ಶಕ್ತಿ ಇರುವಂಥವರು ಮಾತ್ರ ವಿಭಾಗಾಧಿಕಾರಿಯವರ ಆಫೀಸಿಗೆ ಹೋಗಿ ಅವರೊಂದಿಗೆ ದೊಡ್ಡ ಹೋರಾಟಮಾಡಿ, ತಮ್ಮ ಕೆಲಸವನ್ನು ಮಾಡಿಸಿಕೊಂಡು ಬರಲಿಕ್ಕೆ ಸಾಧ್ಯವಾಗುತ್ತದೆ. ಅದು ಒಳ್ಳೆಯದೋ ಕೆಟ್ಟದ್ದೋ ಏನೇ ಆಗಲಿ. ಈ ರೀತಿಯಾಗಿರತಕ್ಕಂಥ ಈ ಚಕ್ರ ಏನಿದೆ ತಿರುಗತಕ್ಕಂಥ ವಿಷ ಚಕ್ರವನ್ನು ಒಂದು ರೀತಿಯಲ್ಲಿ ಸುಧಾರಣೆ ಮಾಡಿ ವಿಭಾಗಾಧಿಕಾರಿಯವರ ಕಛೇರಿಯನ್ನು ರದ್ದುಮಾಡುವಂಥದ್ದು, ಎ.ಸಿ. ಹುದ್ದೆಯನ್ನು ರದ್ದುಮಾಡುವಂಥದ್ದು ಇದು ಬಹಳ ಒಳ್ಳೆಯ ಅಮೋಘವಾದಂಥ ಕಾರ್ಯಕ್ರಮವೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಹಳ ಸಂತೋಷ ಪಡುತ್ತಿದ್ದೇನೆ.

ಇನ್ನು ಕೃಷಿ ಅಭಿವೃದ್ಧಿಗೆ ಬಜೆಟ್‌ನಲ್ಲಿ ಬಹಳ ವ್ಯವಸ್ಥೆ ಮಾಡಿದ್ದಾರೆ ಇದಕ್ಕಾಗಿ ಹಣವನ್ನು ಕೂಡ ತೆಗೆದಿಟ್ಟಿದ್ದಾರೆ. ಕೃಷಿ ಉತ್ಪಾದನೆಯನ್ನು ಹೆಚ್ಚು ಮಾಡುವ ದೃಷ್ಟಿಯಿಂದ ರಾಜ್ಯದಲ್ಲಿ ಬೇಸಾಯ ವಿಧಾನಗಳನ್ನು ಸುಧಾರಿಸಲು ಬಹುಮುಖ್ಯವಾದ ಹಾಗೂ ವ್ಯಾಪಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಅದಕ್ಕೆ ಬೇಕಾದಷ್ಟು ನೀರಾವರಿ ಪಂಪ್ಸೆಟ್ಟುಗಳಿಗೆ ವಿದ್ಯುತ್ತನ್ನು ಕೊಡುವಂಥದ್ದು ಈಗಿನ ಅರ್ಥ ಮಂತ್ರಿಗಳಾದ ಮುಖ್ಯ ಮಂತ್ರಿಗಳು ಬರುವ ಕಾಲದಲ್ಲಿ ಪಂಪುಸೆಟ್ಟುಗಳಿಗೆ ವಿದ್ಯತ್ ಇರಲಿಲ್ಲ. ವಿದ್ಯುಚ್ಛಕ್ತಿಗೆ ಹಣವನ್ನು ಕೂಡ ಕೊಡಲಿಕ್ಕೆ ಸಾಧ್ಯಾವಾಗದಂಥ ಸಂದರ್ಭದಲ್ಲಿ ಅದನ್ನು ಕೂಡ ಮನ್ನಾ ಮಾಡಿ ಅರ್ಧಕ್ಕರ್ಧದಷ್ಟು ಹಣವನ್ನು ಸರ್ಕಾರ ಕೊಟ್ಟು 90 ರೂಪಾಯಿ ಇದ್ದದ್ದನ್ನು 50 ರೂಪಾಯಿಗೆ ಇಳಿಸಿ ಇಡೀ ಕರ್ನಾಟಕದಲ್ಲಿ ದೊಡ್ಡ ಕೆಲಸವನ್ನು ಮಾಡಿರುವುದನ್ನು ನಾವು ನೆನೆಯಬೇಕು. ಅದಂಥ ಕೆಲಸವನ್ನು ಮರೆತುಬಿಡುವುದು ಒಳ್ಳೆಯದ್ದಲ್ಲ. ಆಗದ ಕಾರ್ಯಗಳನ್ನು ದೊಡ್ಡ ಪರ್ವತಮಾಡಿ ಹೇಳುವಂಥದ್ದು ಸರಿಯಲ್ಲ. ಆದದ್ದು ಆಗಿದೆ, ಇಂತಹ ಒಳ್ಳೆಯ ಕೆಲಸ ಆಗಿದೆ ಎಂದು ಹೇಳಬೇಕು. ಆಗದ ಕೆಲಸ ಆಗಲಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕು. ಅಂಥ ಬುದ್ಧಿ ಬಂದರೆ ಅದು ಹೃದಯಪೂರ್ವಕವಾದ ಬುದ್ಧಿ, ದೇವರು ಮೆಚ್ಚತಕ್ಕದೆಂದು ಯಾರಾದರೂ ಹೇಳುತ್ತಾರೆ. ಮಾಡಿದ್ದನ್ನು ಇಲ್ಲ ಎಂದು ಹೇಳಿ ಏಕೆ ತಪ್ಪಿಸಿಕೊಳ್ಳುವುದು. ಯಾವುದೇ ಆಗಲಿ ಮಾಡಿದ್ದನ್ನು ಮಾಡಿದೆ ಎಂದು ಹೇಳಬೇಕು. ಒಳ್ಳೆಯದಿದ್ದರೆ ಒಳ್ಳೆಯದು ಎಂದು ಹೇಳಬೇಕು ಇನ್ನೂ ಮಾಡಬೇಕಾದ್ದು ಅಗಾಧವಾದದ್ದು ಉಂಟು. ಬೇಕಾದಷ್ಟು ಉಂಟು ಇನ್ನು ಉಂಟು ಎಂದು ಹೇಳೋಣ. ಅಂಥದ್ದನ್ನು ಹೇಳಬೇಕು ಮಾಡಿಸಿಕೊಳ್ಳಬೇಕು. ಆ ರೀತಿಯಲ್ಲಿ ಆಗಬೇಕು. ಇವತ್ತು ಈ ಪಂಪುಸೆಟ್ಟುಗಳಿಗೆ ಆ ರೀತಿಯಾಗಿ ವಿದ್ಯುತ್ತನ್ನು ಕೊಡತಕ್ಕ ವ್ಯವಸ್ಥೆ ಮಾಡಿ 90 ರೂಪಾಯಿ ಇದ್ದದ್ದನ್ನು 50 ರೂಪಾಯಿಗೆ ಇಳಿಸಿ ಅರ್ಧಕ್ಕರ್ಧ ಕಡಿಮೆ ಮಾಡಿ ಆ ರೀತಿಯಾಗಿ ಎಲ್ಲಾ ಪಂಪುಸೆಟ್ಟುಗಳು ಕೆಲಸಮಾಡುವ ಹಾಗೆ ಹಳ್ಳಿ ಪ್ರದೇಶದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಮಾಡಿರತಕ್ಕ ಈ ವ್ಯವಸ್ಥೆಯನ್ನು ನಾವು ಇವತ್ತು ಮೆಚ್ಚಿಕೊಳ್ಳಬೇಕು. ಇವತ್ತು ಕೃಷಿಯಲ್ಲಿ ಬಹಳ ಒಳ್ಳೆಯ ಕಾರ್ಯಕ್ರಮ ಆಗಬೇಕೆಂದು ಹೇಳತಕ್ಕ ಕಾರ್ಯಕ್ರಮ ನಮ್ಮ ಬಜೆಟ್‌ನಲ್ಲಿ ನಾವು ಇವತ್ತು ಕಾಣುತ್ತಿದ್ದೇವೆ. ಕೃಷಿ ಉಪಕರಣಗಳಿಗೆ ಬೇಕಾದಂಥ ಸಾಲ ಸಹಕಾರ ಮಾತ್ರ ಅಲ್ಲ, ಕೃಷಿಕರಿಗೆ ಇನ್ನು ಹೆಚ್ಚು ಕೃಷಿ ಮಾಡಬೇಕೆಂದು ಹೇಳುವುದಕ್ಕೆ ಅವರಿಗೆ ಪ್ರೋತ್ಸಾಹ ಕೊಡಲಿಕ್ಕೆ ಕೃಷಿ ಪ್ರಶಸ್ತಿ, ಎಂಬುದನ್ನು ಈ ಬಜೆಟ್‌ನಲ್ಲಿ ತೋರಿಸಿಕೊಟ್ಟಿದ್ದಾರೆ. ಕೃಷಿ ಪ್ರಶಸ್ತಿಯಿಂದ ಏನಾಗುತ್ತದೆ ಅಂದರೆ ಕೃಷಿಕರಿಗೆ ಉತ್ಸಾಹ ಬರುತ್ತದೆ ನಾನು ಕಬ್ಬು ಬೆಳೆಯುವವ, ನಾನು ಭತ್ತ ಬೆಳೆಯುವವ, ನಾನು ಗೋಧಿ ಬೆಳೆಯುವವ, ನಾನು ರಾಗಿ ಬೆಳೆಯುವವ,

ನಾನು ಜೋಳ ಬೆಳೆಯುವವ, ಎಂದು ಹೇಳಿ ನಾನು ಹೆಚ್ಚು ಉತ್ಪತ್ತಿ ಮಾಡಬೇಕೆಂಬ ಭಾವನೆ ಅವನಿಗೆ ಬರುತ್ತದೆ. ಈ ಕೃಷಿ ಪ್ರಶಸ್ತಿಯಲ್ಲಿ ತಾಲ್ಲೂಕು ಮಟ್ಟದಲ್ಲಿ ಪ್ರಥಮ ದ್ವಿತೀಯ ಮತ್ತು ತೃತೀಯ ಎಂದು ಮಾಡಿ ಅದಕ್ಕೆ 25 ಸಾವಿರ, 10 ಸಾವಿರ ಹಾಗೂ 5 ಸಾವಿರ ರೂ.ಗಳ ಬಹುಮಾನದ ಪ್ರಶಸ್ತಿಯನ್ನು ಇಟ್ಟಿದ್ದಾರೆ. ಜಿಲ್ಲಾಮಟ್ಟದಲ್ಲಿ 50 ಸಾವಿರ 25 ಸಾವಿರ 10 ಸಾವಿರ ಪ್ರಶಸ್ತಿ, ರಾಜ್ಯಮಟ್ಟದಲ್ಲಿ 1 ಲಕ್ಷ, 50 ಸಾವಿರ 25 ಸಾವಿರ ಹೀಗೆ ಈ ಮೂರು ಪ್ರಶಸ್ತಿಗಳನ್ನು ಇಟ್ಟಿದ್ದಾರೆ. ಈ ಪ್ರಶಸ್ತಿಗಳನ್ನು ಇಟ್ಟಿದ್ದರಿಂದ ಏನಾಯಿತು ಅಂದರೆ ಕೃಷಿ ಮಾಡತಕ್ಕಂತಹ ಜನರಿಗೆ ಉತ್ತೇಜನ ಹುರುಪು ಬರತಕ್ಕಂತಹ ಕಾರ್ಯಕ್ರಮವನ್ನು ಬಜೆಟ್‌ನಲ್ಲಿ ಅಳವಡಿಸಿದ್ದಾರೆ. ನಿಜವಾಗಿಯೂ ಇದು ಬಹಳ ಪ್ರಮುಖ್ಯವಾದಂಥ ವಿಚಾರವಾಗಿದೆ. ಕೃಷಿಕರನ್ನು ಮರೆತು, ರೈತನನ್ನು ಮರೆತು ಯಾರಾದರೂ ಕೆಲಸ ಮಾಡಿದರೆ ಅಂತಹ ಊರಾಗಲಿ, ಅಂತಹ ನಾಡಾಗಲಿ, ಅಂತಹ ದೇಶವಾಗಲಿ ಅಭಿವೃದ್ಧಿಗೆ ಬರಲಿಕ್ಕೆ ಸಾಧ್ಯವಿಲ್ಲವೆಂದು ಹೇಳಿ ಅನೇಕ ತಜ್ಞರು ಹೇಳಿದ್ದಾರೆ. ಕವಿ ಕುವೆಂಪುರವರು ನೀನು ನೇಗಿಲಯೋಗಿಯನ್ನು ಮರೆಯಬೇಡ ರೈತನನ್ನು ಮರೆಯಬೇಡ, ನೇಗಿಲು ಅಂತ ಹೇಳುವಂಥದ್ದೆ ಇವತ್ತು ಈ ದೇಶದಲ್ಲಿ ಜನರಿಗೆ ಅನ್ನ ನೀಡತಕ್ಕ ಒಂದು ಶಕ್ತಿಯಾಗಿದ.

ರಾಜ್ಯಗಳುಳಿಯಲಿ, ರಾಜ್ಯಗಳಳಿಯಲಿ

ಹಾರಲಿ ಗದ್ದುಗೆ ಮಕುಟಗಳು

ಆದರೂ ಆ ರೈತಬಿತ್ತುವುದನವ ಬಿಡುವುದೇ ಇಲ್ಲ,

ಕವಿ ಕುವೆಂಪು ಹೇಳುತ್ತಾರೆ, ರಾಜ್ಯಗಳು ಅಳಿಯಲಿ, ರಾಜ್ಯಗಳು ಉಳಿಯಲಿ, ಮಗುಚಲಿ ಯಾರೇ ಹೆಚ್ಚುಕಡಿಮೆಯಾಗಲಿ, ಲೋಕವೇ ಮುಳುಗಲಿ, ಆದರೂ ಕೂಡ ಆ ಕೃಷಿಕ ತಾನು ಮಾಡತಕ್ಕ ಉಳುಮೆ ಬಿತ್ತುವಂಥ ಬಿತ್ತನೆ ಉಳುವಂಥ ಉಳುಮೆಯನ್ನು ಏನಾದರೂ ಬಿಡುವುದಿಲ್ಲ.

"ಬಾಳಿತು ನಮ್ಮೀ ನಾಗರೀಕತೆಯು

ಮಣ್ಣಲಿ ನೇಗಿಲಿನ ಆಶ್ರಯದಿ

ಬಾಳಿತು ನಮ್ಮಿ ನಾಗರೀಕತೆಯು

ಮಣ್ಣಲಿ ನೇಗಿಲಿನ ಆಶ್ರಯದಿ "

ಇದರ ಅರ್ಥವೇನೆಂದರೆ, ನಮ್ಮ ನಾಗರೀಕತೆ ಏನಾದರೂ ಬೆಳೆದಿದ್ದರೆ ಮಣ್ಣಿನಲ್ಲಿ, ಮಣ್ಣಿನ ಶಕ್ತಿಯಲ್ಲಿ ಉಳುಮೆಯಲ್ಲಿ ಎಂದು ಕವಿ ಹೇಳುತ್ತಾನೆ. ಆದುದರಿಂದ ಏನೇ ಇದ್ದರೂ ಕೊನೆಗೆ 'ನೇಗಿಲ ಮೇಲೆ ನಿಂತಿದೆ ಧರ್ಮ, ನೇಗಿಲ ಮೇಲೆ ನಿಂತಿದೆ ಕರ್ಮ' ಎಂದು ಹೇಳುತ್ತಾನೆ. ಇದರ ಅರ್ಥವೇನೆಂದರೆ, 'ನೇಗಿಲನ್ನು ಹಿಡಿದು ಉಳುವಂಥ ರೈತನನ್ನು ಅವಹೇಳನ ಮಾಡಬೇಡಿ, ಅವನನ್ನು 'ಹಳ್ಳಿ'ಯವನೆಂದು ನೋಡದೆ, ಕೀಳುದರ್ಜೆಯೆಂಬ ಭಾವನೆ ಬೇಡ' ಎಂಬುದಾಗಿದೆ. ಇವತ್ತು ಈ ದೇಶ, ಈ ನಾಡು ಉಳಿದಿದ್ದರೆ ಅದು ನೇಗಿಲ ಮೇಲೆಯೇ ನೇಗಿಲ ಕುಲದೆಡೆ ಅಡಗಿದೆ ಧರ್ಮ. ಆ ಕುಲದಲ್ಲಿ ಧರ್ಮ ಅಡಗಿದೆ. ನೇಗಿಲ ಶಕ್ತಿ ಇನ್ನು ಉಳಿದಿದೆ ಎಂದರೆ ಅರ್ಥಾತ್ ರೈತನಲ್ಲಿ, ಕೃಷಿ ಕಾರ್ಮಿಕನ ಮೇಲೆಯೇ ಈ ದೇಶ ನಿಂತಿದೆ ಎನ್ನುವಂಥದ್ದನ್ನು ಕವಿಗಳು 50 ವರ್ಷಗಳ ಹಿಂದೆಯೇ ಹೇಳಿದ್ದಾರೆ. ಅದನ್ನು ಲೀಲಾಜಾಲವಾಗಿ ನಮ್ಮ ಕಣ್ಮುಂದೆ ಪ್ರತ್ಯಕ್ಷ ಸಾಕ್ಷಿಯಾಗಿ ಕಾಣತಕ್ಕಂಥ ಒಂದು ಕಾರ್ಯಕ್ರಮ ಇದಾಗಿರುವುದರಿಂದ, ರೈತರ ಬಗ್ಗೆ ಈ ಬಜೆಟ್‌ನಲ್ಲಿ ಬಹಳ ಹಣ ಇಟ್ಟಿದ್ದಾರೆ, ನೀರಾವರಿಗೂ ಕೂಡ ಹೆಚ್ಚು ಹಣ ಇಟ್ಟಿದ್ದಾರೆ. ಆ ರೀತಿಯಲ್ಲಿ ಕೆಲಸ ಮಾಡಬೇಕೆಂದು ಬಹಳಷ್ಟಾಗಿ ಮುಂದುವರಿದು ಕೆಲಸ ಮಾಡಿದ್ದಾರೆ. ಇನ್ನು ವಿದ್ಯುಚ್ಛಕ್ತಿ ಬಗ್ಗೆ ಹೇಳಬೇಕೆಂದರೆ, ಹೊಸ ವಿದ್ಯುಚ್ಛಕ್ತಿ ಯೋಜನೆಗಳನ್ನು ತ್ವರಿತಗೊಳಿಸಿ. ವಿದ್ಯುಚ್ಛಕ್ತಿ ಉತ್ಪಾದನೆಯ ಸಾಮರ್ಥ್ಯ ಹೆಚ್ಚಿಸುವ ಸರ್ಕಾರಕ್ಕಿರುವ ಕಳಕಳಿಯನ್ನು ಸ್ಪಷ್ಟಗೊಳಿಸಿದ್ದಾರೆ. ಪ್ರಸಕ್ತ ವರ್ಷದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಕನಿಷ್ಠ ಪಕ್ಷ ಶೇಕಡ 3 ರಷ್ಟು ಆದಾಯ ಬರುವುದನ್ನು ಖಚಿತ ಪಡಿಸಿಕೊಳ್ಳಲು ಮಂಡಳಿಗೆ 89 ಕೋಟಿ ರೂಪಾಯಿಗಳನ್ನು ಒದಗಿಸುವಂಥ ಏರ್ಪಾಟು ಮಾಡಲಾಗಿದೆಯೆಂದು ಬಜೆಟ್‌ನಲ್ಲಿ ಹೇಳಿದ್ದಾರೆ. ಇದು ಬಹಳ ಸಂತೋಷದ ವಿಷಯ. ಏಕೆಂದರೆ, ಇವೊತ್ತಿನ ದಿವಸ ವಿದ್ಯುತ್ ನಮಗೆ ಪ್ರಮುಖವಾಗಿದೆ. ವಿದ್ಯುತ್ ಸೌಕರ್ಯ ಸರಿಯಾಗಿ ಇರುತ್ತದೆಂದು ನಾನು ಹೇಳುವುದಿಲ್ಲ ವಿದ್ಯುತ್ ಕೆಲವು ಕಡೆ ಸರಿಯಾಗಿಲ್ಲದೆ ಅನ್ಯಾಯಗಳಾಗುತ್ತಿವೆ. ಅದಕ್ಕೆ ಬೇರೆ ಬೇರೆ ಕಾರಣಗಳುಂಟು. ಅದೇನೇ ಇದ್ದರೂ ಲೋ ವೋಲ್ಟೇಜ್ ಇರುವುದರಿಂದ ಬಹಳ ತೊಂದರೆಯಾಗಿದೆ. ಕಲಿಯತಕ್ಕಂಥ ಮಕ್ಕಳಿಗೆ ವಿದ್ಯುತ್ತಿನ ಬೆಳಕು ಸಾಕಾಗುವುದಿಲ್ಲ, ವಿದ್ಯುತ್ ಬೆಳಕು ದೀಪದಂತೆ 'ಮಿಣಿ ಮಿಣಿ' ಯಾಗಿ ಕಾಣುತ್ತದೆ. ಆದುದರಿಂದ ಮಕ್ಕಳ ಕಣ್ಣಿಗೆ ರೋಗ ಬರುವಂಥ ಲಕ್ಷಣವುಂಟು. ಆದುದರಿಂದ, ವೋಲ್ಟೇಜ್ ಇಲ್ಲದೆ ಮಿಣಿಮಿಣಿ ಉರಿಯತಕ್ಕಂಥ ವಿದ್ಯುತ್ ಸರಿಯಾಗಿ, ಲೀಲಾಜಾಲವಾಗಿ ಉರಿಯಬೇಕೆಂದು

ನಾವು ಹೇಳುವುದು. ಇವೊತ್ತಿನ ದಿವಸ ಬಜೆಟ್‌ನಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಇಷ್ಟೊಂದು ಹಣ ಇಟ್ಟು ಬೇಕಾದಷ್ಟು ಬುದ್ಧಿವಾದ ಹೇಳಿದರೂ ಕೂಡ ನಾನು ಹೇಳುವಂಥಾದ್ದು ಏನೆಂದರೆ, ವಿದ್ಯುಚ್ಛಕ್ತಿಗಾಗಿ ಬಜೆಟ್‌ನಲ್ಲಿ ಏನು ಹೆಚ್ಚಿಗೆ ಹಣ ಇಟ್ಟಿದ್ದಾರೆ ಅದನ್ನು ಉಪಯೋಗಿಸಿ ವಿದ್ಯುಚ್ಛಕ್ತಿ ಸೌಕರ್ಯ ಒಳ್ಳೆಯ ರೀತಿಯಲ್ಲಿ ನಮ್ಮ ಜನರಿಗೆ ಬರಬೇಕು, ನಮ್ಮ ನಾಡಿನಲ್ಲಿ ವಿದ್ಯುಚ್ಛಕ್ತಿಯ ಕೊರತೆ ಇಲ್ಲದ ಹಾಗೆ ಮಾಡಿ ಜನರಿಂದ 'ಶಹಭಾಶ್‌ಗಿರಿ' ಪಡೆಯಬೇಕೆಂಬ ಭಾವನೆ ಸರ್ಕಾರಕ್ಕಿದೆ. ಆದರೆ, ಅವನ್ನು ನಡೆಸಿಕೊಡತಕ್ಕಂಥ ಅಧಿಕಾರಿಗಳು ಕೂಡ ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಏಕೆಂದರೆ 'ತಲೆಗೆ ಬಂದ ನೀರು, ಕಾಲಿಗೂ ಬರುತ್ತದೆ' ಎಂದು ಹೇಳುವ ಹಾಗೆ ಈಗ ಸರ್ಕಾರ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಬಹುದು. ಆದರೆ, ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಂಥ ಅಧಿಕಾರಿಗಳು ಅದನ್ನು ಒಳ್ಳೆಯ ರೀತಿಯಲ್ಲಿ ಮಾಡದೆ ಹೋದರೆ 'ಎಲ್ಲಾ ಬೆಣ್ಣೆಯನ್ನು ಬೆಕ್ಕು ನುಂಗಿತು' ಎಂದು ಹೇಳತಕ್ಕಂಥ ಭಾವನೆಗೆ ಆಧಾರವಾಗುತ್ತದೆ. ಉದಾಹರಣೆಗೆ ಹೇಳಬೇಕೆಂದರು, ಈಗ ಒಬ್ಬ ಮನುಷ್ಯ ಒಳ್ಳೆಯ ಭಕ್ಷ್ಯ ಭೋಜನ ಮಾಡಬೇಕೆಂದು ಆಲೋಚನೆ ಮಾಡಿದ್ದಾನೆ. ಅದಕ್ಕೆ ಬೇಕಾದಂಥ ಆಹಾರ ಸಾಮಗ್ರಿಗಳಾದ ಸಕ್ಕರೆ, ತುಪ್ಪ ಗೇರುಬೀಜ ಮುಂತಾದವನ್ನೆಲ್ಲಾ ತರುತ್ತಾನೆ. ತಂದು ಎಲ್ಲವನ್ನು ಸಿದ್ಧಪಡಿಸುತ್ತಾನೆ. ಆದರೆ, ಅಡುಗೆ ಮಾಡತಕ್ಕಂಥ, ಭಕ್ಷ್ಯ ಭೋಜನ ಮಾಡತಕ್ಕಂಥ ಜನರು ಇರಬೇಕು. ಅವರು ಸರಿಯಾಗಿ ಅಡುಗೆ ಮಾಡಬೇಕು. ಆಹಾರ ತಯಾರಿಸುವಾಗ ಉಪ್ಪನ್ನು ಜಾಸ್ತಿ ಹಾಕಬಾರದು, ಸಕ್ಕರೆ ಹಾಕಬೇಕು, ಸಕ್ಕರೆ ಕಡಿಮೆಯಾಗಿ ಹಾಕಬಾರದು. ಈ ರೀತಿ ಅಡುಗೆ ಮಾಡತಕ್ಕಂಥ ಜನರಿದ್ದರೆ, ಈ ಮನುಷ್ಯ ಹಣ ಕೊಟ್ಟು ತಂದಿರತಕ್ಕಂಥ ತುಪ್ಪ, ಎಣ್ಣೆ, ಕೇಸರಿ, ಸಕ್ಕರೆ, ಗೋಡಂಬಿ ಇವೆಲ್ಲವೂ ಉಪಯುಕ್ತವಾದರೆ ಒಂದು ಒಳ್ಳೆಯ ಭಕ್ಷ್ಯ ಭೋಜನವಾಗುತ್ತದೆ. ಅದೇ ರೀತಿ ಸರ್ಕಾರವು ಕೂಡ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕುತ್ತದೆ, ನಿಜ, ಒಳ್ಳೆಯ ಕಾರ್ಯಕ್ರಮಗಳನ್ನು ಪ್ರಕಟಿಸುತ್ತದೆ ನಿಜ, ಕಾರ್ಯಕ್ರಮಗಳಿಗೆ ಬೇಕಾದಷ್ಟು ಹಣವನ್ನು ಇಡುತ್ತದೆ. ನಿಜ. ಆದುದರಿಂದ, ಈ ರೀತಿಯಲ್ಲಿ ಸರ್ಕಾರ ಮಾಡಿದರೂ, ಅಡುಗೆ ಮಾಡತಕ್ಕಂಥ ಜನರಿಗೆ ಬಳಸತಕ್ಕಂಥ ಜನರು, ಅಧಿಕಾರಿಗಳು ಸರಿಯಾಗಿ ಬಳಸಿದರೆ, ಸರಿಯಾದಂಥ ರೀತಿಯಲ್ಲಿ ಬಹಳ ರುಚಿಕರವಾಗಿರತಕ್ಕಂಥ ಭೋಜ್ಯ ಅಥವಾ ಪಲ್ಯ ಅಥವಾ ಭಕ್ಷ್ಯ ಅಥವಾ ಭೋಜನ ಯಾವುದನ್ನು ಮಾಡುತ್ತಾರೋ, ಅದೇ ರೀತಿಯಲ್ಲಿ ಸರ್ಕಾರ ಆಲೋಚನೆ ಮಾಡಿದಂಥ ಒಳ್ಳೆಯ ಕಾರ್ಯಕ್ರಮಗಳು ಅಧಿಕಾರಿಗಳು ಒಳ್ಳೆಯ ರೀತಿಯಲ್ಲಿ ಪರಿಪಾಲನೆ ಮಾಡಿದರೆ ಇಡೀ ನಮ್ಮ ರಾಜ್ಯಕ್ಕೂ ಸರ್ಕಾರಕ್ಕೂ ಕೀರ್ತಿ ಬರುವಂಥ ಪರಿಸ್ಥಿತಿ ಉಂಟು. ಆದುದರಿಂದ, ಎಲ್ಲಾ ಅಧಿಕಾರಿಗಳಿಗೆ ಕೂಡ ದೊಡ್ಡ ಜವಾಬ್ದಾರಿ ಉಂಟು. ಅಧಿಕಾರಿಗಳಲ್ಲಿ ಒಳ್ಳೆಯವರಿರಬಹುದು, ಕೆಟ್ಟವರಿರಬಹುದು. ಒಳ್ಳೆಯ ಅಧಿಕಾರಿಗಳು ಇಲ್ಲವೆಂದಲ್ಲ, ಆದರೆ, ನಾವು ತಿಳಿದುಕೊಂಡ ಮಟ್ಟಿಗೆ ಈಗ ಭ್ರಷ್ಟ ಅಧಿಕಾರಿಗಳು ಬಹಳ ಜಾಸ್ತಿಯಿದ್ದಾರೆಂದು ಹೇಳುತ್ತಿದ್ದಾರೆ. ನಾನು ಹೇಳುತ್ತೇನೆ, ಭ್ರಷ್ಟಾಚಾರವನ್ನು ಯಾರು ಮಾಡುತ್ತಾರೋ, ಅದು ನಿಜವಾಗಿಯೂ ಒಂದು ಪಾಪದ ಕೆಲಸ. ಹಾಗೆಂದು ಎಲ್ಲಾ ಧರ್ಮಗ್ರಂಥಗಳು ಹೇಳುತ್ತವೆ. ಏಕೆಂದರೆ ನಿಮಗೆ ಸರ್ಕಾರ ಸರಿಯಾದಂಥ ಸಂಬಳ ಕೊಡುತ್ತದೆ, ಭತ್ಯಗಳನ್ನು ಕೊಡುತ್ತದೆ, ಬೇಕಾದಷ್ಟು ವಾಹನಗಳನ್ನು ಕೊಡುತ್ತದೆ, ನಿಮ್ಮ ಕೈಯಿಂದ ಪೈಸೆ ಹೋಗುವುದಿಲ್ಲ, ಇಷ್ಟೆಲ್ಲಾ ಆಗಿರುವಾಗ ಯಾವುದೇ ಭ್ರಷ್ಟಾಚಾರವಾದರೂ ಈ ದೇಶದ ಜನತೆಯೇ ಅವರನ್ನು ಬಗ್ಗು ಬಡಿಯುವಂಥಾದ್ದು. ಈಗ ಅಧಿಕಾರಿಗಳಾಗಲಿ, ಶಾಸಕರಾಗಲಿ, ಯಾರೇ ಆಗಲಿ, ಎಂತಹದೇ ಆಗಿರಲಿ, ಅವರು ಪಡೆಯುತಕ್ಕಂಥ ವೇತನ ಜನತೆಯ ಹಣ. ಜನರು ಕಟ್ಟುವ ತೆರಿಗೆಯಿಂದ ಬರತಕ್ಕಂಥ ಹಣ, ಜನರ ಬೆವರಿನಿಂದ ಬರತಕ್ಕಂಥ ಹಣ, ಬಡವರ ಬೆವರಿನಿಂದ ಬರತಕ್ಕಂಥ ಹಣ. ಆದುದರಿಂದ ನೀವು ಭ್ರಷ್ಟಾಚಾರ ಮಾಡಬಾರದು. ನೀವು ಭ್ರಷ್ಟಾಚಾರ ಮಾಡುವುದಿದ್ದರೆ ಜನತೆಯಿಂದಲೇ ನೀವು ಮಾಡಬೇಕಾಗುತ್ತದೆ. ಒಂದು ವೇಳೆ 5 ಪರ್ಸೆಂಟ್ ಶಕ್ತಿ ಇರತಕ್ಕಂಥ ಶ್ರೀಮಂತರಿಂದ ನೀವು ಹಣ ಪಡೆದರೆ, ಬಹುಶಃ ಅವರಿಗೆ ಬೆವರಿನ ಶಕ್ತಿ ಗೊತ್ತಿರಲಿಕ್ಕಿಲ್ಲ, ಆದರೆ, ನೂರಕ್ಕೆ ತೊಂಬತ್ತರಷ್ಟು ಬಡವರು ಇರುವುದರಿಂದ, ಒಂದು ಸಣ್ಣ-ಪುಟ್ಟ ಕೆಲಸಕ್ಕಾದರೂ ಅವರು ಭ್ರಷ್ಟಾಚಾರ ಮಾಡಿದರೆ, ಅದು ಶೇಕಡ 90 ರಷ್ಟು ಬಡ ಜನರಿಗೆ ಅನ್ಯಾಯವಾಗುತ್ತದೆ.

ಈ ಭ್ರಷ್ಟಾಚಾರವನ್ನು ತೋರಿಸಿ ಕೊಟ್ಟವರಾರು? ದೊಡ್ಡದೊಡ್ಡ ಶ್ರೀಮಂತರುಗಳು ಕವರ್‌ಗಳಲ್ಲಿ ಹಾಕಿ ಕೊಟ್ಟು ಅಭ್ಯಾಸಮಾಡಿ ಅವರನ್ನು ಮಂಕುಬೂದಿ ಮಾಡಿ ಇಡೀ ವ್ಯವಸ್ಥೆಯನ್ನೇ ಅಡಿಮೇಲು ಮಾಡಿದ್ದರಿಂದ ಇವತ್ತು ಅದು ಕೆಳಗಿನವರೆಗೂ ಕೂಡ ಬಂದಿದೆ. ನೂರಕ್ಕೆ ತೊಂಬತ್ತು ಭಾಗ ಬಡವರ ಕೊರಳಿಗೆ ಪೆಟ್ಟಾಗಿದೆ. ಈ ಭ್ರಷ್ಟಾಚಾರ ಎಂದರೆ ಬರೀ ತೆಗೆದು ಕೊಳ್ಳುವವರ ಮೇಲೆ ಅಲ್ಲ ಅದು ಕೊಡುವವರ ಮೇಲೂ ಬರುತ್ತದೆಂದು ನಾನು ಮೊನ್ನೆ ಹೇಳಿದ್ದೆ. ಕೈ ಚಪ್ಪಾಳೆ ಶಬ್ದಬರಬೇಕಾಗಿದ್ದರೆ ಎರಡು ಕೈಯನ್ನು ಬಡಿಯಬೇಕು ಒಂದೇ ಕೈಯನ್ನು ಬಡಿದರೆ ಆಗುವುದಿಲ್ಲ.

ಹಾಗೆಯೇ ಕೊಡತಕ್ಕಂಥ ಜನ ಇದ್ದರೆ ಮಾತ್ರ ತೆಗೆದುಕೊಳ್ಳುವವರು ಇರುವಂಥದ್ದು, ಕೊಡತಕ್ಕಂಥ ಜನ ನಾವೂ, ಕೂಡ ಅನ್ಯಾಯವನ್ನು ಮಾಡುತ್ತೇವೆ, ಕೊಡತಕ್ಕಂಥ ಜನ ಪ್ರೋತ್ಸಾಹ ಮಾಡಿಕೊಂಡು ಹೋಗಿ ಕೊಟ್ಟು ತಮ್ಮ ಕೆಲಸ ಮಾಡಿಸಿಕೊಂಡು ಬರುವಾಗ ಅದನ್ನೇ ಬೇರೆಯವರು ಪರಿಪಾಲನೆ ಮಾಡುತ್ತಾರೆ. ವರದಕ್ಷಿಣೆ ಇದ

ಹಾಗೆ. ಈ ವರದಕ್ಷಿಣೆ ಯಾವರೀತಿ ಆಗಿದೆ ಎಂದರೆ ಶ್ರೀಮಂತರಾಗಿರತಕ್ಕಂಥವರು ಇದನ್ನು ಪರಿಪಾಟ ಮಾಡಿದರೂ ಬಡವರಲ್ಲೂ ನಮ್ಮ ಮುಸ್ಲಿಮ್ ಬಂಧುಗಳಲ್ಲಿ, ಈ ವರದಕ್ಷಿಣೆ ಬಹಳ ಜೋರು, ಬೇರೆ ಬೇರೆಯವರಲ್ಲಿಯೂ ಇದು ಇರಬಹುದು. ಹುಡುಗಿ ಇದ್ದವನೊಬ್ಬ ನೂರು ಇನ್ನೂರು ಪವನಗಳನ್ನು ಕೊಡಬೇಕಾಗುತ್ತದೆ. ಒಂದು ಕಾರು ಕೊಡಬೇಕು, ಒಂದು ಲಕ್ಷ, ಎರಡು ಲಕ್ಷ ರೂಪಾಯಿಗಳನ್ನು ಕೊಡಬೇಕು. ಹೀಗೆ 5 ಪರ್ಸೆಂಟ್ 10 ಪರ್ಸೆಂಟ್ ಜನ ಈ ರೀತಿ ವರದಕ್ಷಿಣೆ ಹಾಕಿದರೆ ಎಲ್ಲಿಗೆ ಹೋಗಬೇಕು ಅದನ್ನು ಕಡೆಗೆ ಮಧ್ಯಮ ವರ್ಗದವರೂ ಕೂಡ ಪಾಲನೆ ಮಾಡಿದ್ದಾರೆ. ಇವತ್ತು ಒಬ್ಬ ಕಟ್ಟಿ ಹೊರತಕ್ಕವ, ಒಬ್ಬ ಕೂಲಿ 15 ಸಾವಿರ, 15 ಪವನ್ ಎಂದು ಕೇಳುತ್ತಾನೆ. ಇದು ಎಲ್ಲಾ ಜಾತಿ ಪಂಗಡದವರಿಗೂ ಮುಟ್ಟಿದೆ. ಈ ಪಾಪದ ಹೊರೆ ಯಾರು ಮಾಡಿದ್ದಾರೆ ಅವರ ಮೇಲೂ ಬೀಳುತ್ತದೆ. ಆದುದರಿಂದ ಈ ಭ್ರಷ್ಟಾಚಾರಕ್ಕೆ ಮನಸ್ಸು ಮಾಡಬೇಡಿ. ಒಳ್ಳೆಯ ಅಧಿಕಾರಿಗಳು ಇದ್ದಾರೆ ಬಂಗಾರದಂಥ ಅಧಿಕಾರಿಗಳು ಸಹ ಇದ್ದಾರೆ ನಾನು ಇಲ್ಲ ಎಂದು ಹೇಳುವುದಿಲ್ಲ. ಭ್ರಷ್ಟಾಚಾರವನ್ನು ಮಾಡದಂತೆ ಅದನ್ನು ಪರಿಪಾಲನೆ ಮಾಡಿ. ನಾವು ಜನತೆಯ ಬೆವರಿನ ಫಲದ ಹಣದಿಂದಲೆ ಬದುಕುತ್ತಿದ್ದೇವೆ. ಆದುದರಿಂದ ಭ್ರಷ್ಟಾಚಾರಕ್ಕೆ ಎಡೆ ಇಡಬಾರದು ಹಾಗೆಯೇ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿ. ಅಧಿಕಾರಿಗಳು ಈ ರೀತಿ ಮನಸ್ಸು ಮಾಡಿದರೆ ನಿಜವಾಗಿಯೂ ಬಜೆಟ್‌ನಲ್ಲಿ ಹೇಳತಕ್ಕ ಅನೇಕ ಕಾರ್ಯಕ್ರಮಗಳು ಲೀಲಾಜಾಲವಾಗಿ ನಡೆದು ನಮ್ಮ ಹಳ್ಳಿಪ್ರದೇಶಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ಒಳ್ಳೆಯ ಕಾರ್ಯಕ್ರಮಗಳನ್ನು ನಾವು ಕಾಣಲು ಮತ್ತು ಅದರ ಲಾಭವನ್ನು ಪಡೆಯಲು ಸಾಧ್ಯವಾಗುತ್ತದೆ. ಆದುದರಿಂದ ಒಂದುವೇಳೆ ಈ ಭ್ರಷ್ಟಾಚಾರವನ್ನು ಯಾರ ಅಂಜಿಕೆಯೂ ಇಲ್ಲದೆ ಮಾಡತಕ್ಕ ಅಧಿಕಾರಿಗಳಿದ್ದರೆ ಅವರಿಗೆ ಉಗ್ರವಾದಂಥ ಶಿಕ್ಷೆಯನ್ನು ಕೊಡಲು ಸರ್ಕಾರ ಮನಸ್ಸು ಮಾಡಬೇಕು. ಏಕೆಂದರೆ "ಸಾಮ, ದಾನ, ಭೇದ ದಂಡ" ಎಂಬ ಒಂದು ಮಾತುಂಟು. ಮೊದಲು ಒಳ್ಳೆಯ ರೀತಿಯಲ್ಲಿ, ಸಮಾಧಾನದಲ್ಲಿ, ಚಂದದಲ್ಲಿ, ಮತ್ತೆ ಹೇಳಿ ಕೊನೆಗೆ ಯಾವುದನ್ನೂ ಕೇಳದಿದ್ದರೆ 1 ದೊಣ್ಣೆಯನ್ನು ತೆಗೆದುಕೊಂಡು ಬಡಿ ಎಂದು ಒಂದು ಗಾದೆ ಇದೆ. ಪರದೇಶಗಳಲ್ಲಿ ನೋಡಬೇಕು. ಉದಾಹರಣೆಗೆ ಅರಬ್ಬಲ್ಲಿ, ಸೌದಿ ಅರಬ್‌ನಲ್ಲಿ ಅನ್ಯಾಯ ಹೆಚ್ಚಾದರೆ ಕಠಿಣವಾದ ಕಾನೂನು ಇದೆ. ಅಲ್ಲಿ ಯಾರಾದರೂ ಕಳ್ಳತನ ಮಾಡಿದರೆ ಅವನನ್ನು ಮೂರು ರಸ್ತೆಗಳು ಸೇರುವಲ್ಲಿ ಕಡಿಯುವಂಥದು ಇದೆ, ಹೀಗೆ ಒಬ್ಬನನ್ನು ಕಡಿದರೆ ಮತ್ತೆ ಯಾರೂ ಹಾಗೆ ಮಾಡಲಿಕ್ಕೆ ಹೋಗುವುದಿಲ್ಲ. ಅಲ್ಲಿ ಹೀಗೆ ಬಹಳ ಕಠಿಣವಾದ ರೀತಿಯಲ್ಲಿ ಕಠೋರವಾದ ಶಿಕ್ಷೆಯನ್ನು ಕೊಡುತ್ತಾರೆ. ಅಲ್ಲಿನ ಶಿಕ್ಷೆಯನ್ನು ಕಂಡೊಡನೆ ಜನರು ಹೆದರಿ ಇಡೀ ಊರಿಗೆ ಊರೇ ಪ್ರಚಾರವಾಗಿ ಮತ್ತೆ ಕದಿಯುವ ಕೆಲಸಕ್ಕೆ ಯಾರೂ ಕೂಡ ಹೋಗುವುದಿಲ್ಲ. ಅದೇ ರೀತಿಯಲ್ಲಿ ಮದುವೆಯಾದ ಮನುಷ್ಯನೊಬ್ಬ ವ್ಯಭಿಚಾರವನ್ನು ಮಾಡಿದರೆ ಅವನನ್ನು ಕೊಲ್ಲುವುದು, ಆ ಕ್ರಮ ಇವತ್ತೂ ಕೂಡ ಅಲ್ಲಿ ಇದೆ. ಮದುವೆ ಆಗದವನು ವ್ಯಭಿಚಾರವನ್ನು ಮಾಡಿದರೆ ಅವನಿಗೆ 100 ಛಡಿ ಏಟು ಕೊಡುವುದು. ನೀವು ಈ ಕಾನೂನನ್ನು ಬಹಳ ಜೋರಾಗಿ ಮಾಡಿದರೂ ಕಷ್ಟ. ಬಹಳ ಸಡಿಲ ಮಾಡಿದರೂ ಕಷ್ಟ. 86 ಕೋಟಿ ಜನರಿರತಕ್ಕ ಇಷ್ಟು ದೊಡ್ಡ ಭಾರತ ದೇಶದಲ್ಲಿ ನಾವು ಬಹಳ ಸಡಿಲು ಧೋರಣೆಯಿಂದ ಹೋದರೆ ಎಲ್ಲವು ಸಡಿಲ ಸಡಿಲವಾಗಿ ಕಡೆಗೆ ಗೋಜಲು ಗೋಜಲಾಗಿ ಎಲ್ಲವು ಉದುರಿ ಹೋಗತಕ್ಕಂಥ ಕಾಲ ಬರಬಹುದು. ಆದುದರಿಂದ ಎಲ್ಲಿ ಕಠಿಣವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೋ ಅಲ್ಲಿ ಹಾಕಿಕೊಳ್ಳುವುದು ಒಳ್ಳೆಯದು. ನಾನು ಏಕೆ ಈ ಉದಾಹರಣೆಯನ್ನು ಹೇಳಿದೆ ಎಂದರೆ ಅನ್ಯಾಯ ಮಾಡಿ ಜನರಿಗೆ ಮೋಸ ಮಾಡಿ ತೊಂದರೆಯನ್ನು ಕೊಡುತ್ತಾರೆಂದು ಹೇಳತಕ್ಕ ಪರಿಸ್ಥಿತಿಯನ್ನು ಕಂಡಾಗ ನಾವು ಉಗ್ರವಾದಂಥ ಶಿಕ್ಷೆಯನ್ನು ಆ ಅನ್ಯಾಯವನ್ನು ಮಾಡತಕ್ಕ ಜನರಿಗೆ ಕೊಡಬೇಕು, ಒಳ್ಳೆಯ ರೀತಿಯಲ್ಲಿ ಇರತಕ್ಕ ಜನರನ್ನು ಪುರಸ್ಕರಿಸಬೇಕು. ಏಕೆಂದರೆ ಇಷ್ಟೆಲ್ಲಾ ಕಾರ್ಯಕ್ರಮವನ್ನು ಬಜೆಟ್ಟಲ್ಲಿ ಹೇಳಿದ್ದಾರೆ. ನಮ್ಮ ಈ ವಿಧಾನ ಸೌಧದಲ್ಲಿರುವ ಮಂತ್ರಾಲಯದಿಂದ ನಮ್ಮ ಜಿಲ್ಲೆಗಳಿಗೆ ಹೋಗಿ, ಅಲ್ಲಿ ಜಿಲ್ಲಾಧಿಕಾರಿಗಳ ಕಛೇರಿಗೆ ಹೋಗಿ ಮತ್ತು ಕೆಳಗೆ ಬಂದ ಅನಂತರ ಎಲ್ಲವನ್ನು ಮಾಡುವಂಥದ್ದು. ಆದುದರಿಂದ ನಾನು ಇದನ್ನು ಹೇಳುತ್ತಿದ್ದೇನೆ. ಕೆಲಸ ಮಾಡುವವರು ಅವರು, ಜನರಿಗೆ ಕೊಡುವವರು ಅವರು, ನಾವೆಲ್ಲಾ ಕಾರ್ಯಕರ್ತರು ಆಗಾಗ್ಗೆ ಹೋಗಿ ಅವರನ್ನು ನೆನಪು ಮಾಡಬಹುದು, ಎಚ್ಚರಿಕೆ ಮಾಡಬಹುದು, ಹೇಳಬಹುದು. ಆದುದರಿಂದ ಈ ಬಗ್ಗೆ ಕೂಡ ಸರ್ಕಾರ ಅನ್ಯಾಯ ಮಾಡಿದಂಥ ಜನರಿಗೆ ಕೆಲಸ ಮಾಡದಂಥ ಜನರಿಗೆ, ಭ್ರಷ್ಟವಾದಂಥ ಅಧಿಕಾರಿಗಳು ಇದ್ದರೆ ಅಥವಾ ಭ್ರಷ್ಟತೆಗೆ ಚಾಲನೆಯನ್ನು ಕೊಡತಕ್ಕಂಥ ಅಧಿಕಾರಿಗಳಿಗೆ ಉಗ್ರವಾದಂಥ ಶಿಕ್ಷೆಯನ್ನು ಕೊಟ್ಟು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವಂಥ ವ್ಯವಸ್ಥೆಯನ್ನು ಮಾಡಿದರೆ ಕೃಷಿಗೆ ಇಟ್ಟಿರತಕ್ಕಂಥ ಕೋಟಿ ಕೋಟಿ ರೂಪಾಯಿಯು ಫಲಕಾರಿಯಾದೀತು, ಕೃಷಿಕನಿಗೆ ಉಪಕಾರವಾದೀತು ಎಂದು ನಾನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಇನ್ನು ಕೊಡಗು ಜಿಲ್ಲೆಯಲ್ಲಿ, ಒಂದು ಅರಣ್ಯ ಕಾಲೇಜನ್ನು ಮಾಡುವಂತಹ ಯೋಜನೆಯನ್ನು ಬಜೆಟ್ಟಲ್ಲಿ ತೋರಿಸಿದ್ದಾರೆ. ಇದು ಬಹಳ ಒಳ್ಳೆಯದು ಏಕೆಂದರೆ ಅನೇಕ ವಿದ್ಯಾರ್ಥಿಗಳಿಗೆ ಅಲ್ಲಿ ಕಲಿಯತಕ್ಕಂತಹ ವ್ಯವಸ್ಥೆ ಆಗುತ್ತದೆ. ಮತ್ತು ಒಂದು ಕಾಲೇಜಾದರೆ ಅದು ಕೊಡಗು, ದಕ್ಷಿಣ ಕನ್ನಡ ಮತ್ತು ಅದರ ಸುತ್ತಮುತ್ತಲಿರುವವರಿಗೆ ಉಪಯೋಗವಾಗುತ್ತದೆ. ಈ ಅರಣ್ಯ ಕಾಲೇಜಾದರೆ ಅರಣ್ಯವನ್ನು ಹೇಗೆ ಕಾಪಾಡಬೇಕು, ಪರಿಸರವನ್ನು ಯಾವ ರೀತಿಯಲ್ಲಿ

ಕಾಪಾಡಬೇಕು ಎನ್ನುವ ಭಾವನೆಗೆ ಇಂಬು ಸಿಗುತ್ತವೆ. ಇವತ್ತು ಅರಣ್ಯ ಏನಾಗಿದೆಯೆಂದರೆ ಅರಣ್ಯ ಪೂರ್ಣ ನಾಶವಾಗಿದೆ. ಈಗ ಕಾಲೇಜು ಮಾಡುತ್ತಿದ್ದೇವೆ. ಪುನಃ ಬುಡದಿಂದ ತುದಿಯಿಂದ ಎಂದು ಹೇಳುವ ಹಾಗೆ, ಇಷ್ಟು ಒಳ್ಳೆಯ ಅರಣ್ಯವಿತ್ತು ನಮ್ಮದು. ಇಷ್ಟು ಒಳ್ಳೆಯ ಪರಿಸರವಿತ್ತು. ಇದನ್ನು ಹಾಳುಮಾಡಿದ್ದು ಯಾರು? ನಾವೇ, ಅದಕ್ಕೆ ಇಷ್ಟು ಕುಮ್ಮಕ್ಕು ಕೊಟ್ಟಿದ್ದು ಯಾರು?

ಅಧಿಕಾರಿಗಳು, ಆದ್ದರಿಂದ ನಾವು ಯಾವತ್ತು ಅರಣ್ಯ ನಾಶ ಮಾಡುವುದಕ್ಕೆ ಬೆಂಬಲ ಕೊಡಬಾರದು. ಅರಣ್ಯ ನಾಶವಾದರೆ ಮನುಷ್ಯನೂ ನಾಶವಾದ ಹಾಗೆ ಬುದ್ಧಿವಂತರು, ತಿಳಿದವರು, ವಿಜ್ಞಾನಿಗಳು ಹೇಳುತ್ತಾರೆ ಅರಣ್ಯ ನಾಶವಾದರೆ, ಅರಣ್ಯದಲ್ಲಿ ಹಸಿರು ಇಲ್ಲದಿದ್ದರೆ ಮಳೆಬೆಳೆ ಯಾವುದೂ ಆಗುವುದಿಲ್ಲ. ಆದ್ದರಿಂದ ಪರಿಸರ ಹಾಳಾದರೆ ಅರಣ್ಯ ಸಂಪತ್ತು ಇಲ್ಲದಿದ್ದರೆ ಜನಗಳು ರೋಗದಿಂದ ಒಳಲತಕ್ಕಂಥ ಪರಿಸ್ಥಿತಿ ಬರಬಹುದು. ಇವತ್ತು ಏನಾಗಿದೆ ನಮ್ಮ ಅರಣ್ಯವೆಲ್ಲಾ ಕಾಡುಗಳ್ಳರು ಕೈಯಲ್ಲಿದೆ, ಕಾಡುಗಳ್ಳರೇ ಅರಣ್ಯದ ಮುಖಂಡರಾಗಿದ್ದಾರೆ. ಅವರೇ ರಾಜ್ಯಾರೆ, ಆದ್ದರಿಂದ ಕಾಡುಗಳ್ಳರು ಯಾರು ಇದ್ದಾರೆ ಅವರನ್ನು ಹಿಡಿದು ಅಧಿಕಾರಿಗಳು, ಮಂತ್ರಿಗಳು ಅವರಿಗೆ ತಕ್ಕ ಶಿಕ್ಷೆಯನ್ನು ಕೊಟ್ಟರೆ ಮಾತ್ರ ಅರಣ್ಯ ಉಳಿಯುತ್ತದೆ. ಕೊಡಗಿನಲ್ಲಿ ಅರಣ್ಯ ಕಾಲೇಜು ಮಾಡುತ್ತೇವೆಂದು ಹೇಳುವುದಲ್ಲ. ಅರಣ್ಯಸಂಪತ್ತನ್ನು ಉಳಿಸುವುದಕ್ಕೆ ಪ್ರಯತ್ನ ಮಾಡಿ. ಈ ಕಾಲೇಜನ್ನು ಮಾಡಿ ಮುಂದೆ ತಂದರೆ ಏನಾದರೂ ಫಲ ಬರುತ್ತದೆ. ಅರಣ್ಯ ಸಂಪತ್ತು ಎಂದರೆ ಕಾಂಕ್ರೀಟಿನ ಬಿಲ್ಡಿಂಗ್ ಎಂದು ಹೇಳಬಹುದು. ಬಿಸಿಯಾದಂತಹ ಸಿಮೆಂಟ್, ಜಲ್ಲಿ ಕಲ್ಲು ಮಾಡಿದಂತ ಆಟ್ಟಾರೆಸ್ಸಿನ ಸಾಲುಸಾಲುಗಳನ್ನು ನೋಡಿದಾಗ ಇದೇ ಅರಣ್ಯಸಂಪತ್ತು ಎಂದು ಹೇಳುವಂಥ ಪರಿಸ್ಥಿತಿ ಬಂದಿದೆ. ಇದು ಅರಣ್ಯ ಪ್ರದೇಶದಲ್ಲಿಂದೇ ಶುರು ಆಗಿದೆ, ಮರಗಳನ್ನು ಕಡಿಯುವುದು ಅಂದರೆ ಬುಡದಿಂದ ಕಡಿಯುವುದಲ್ಲ, ಅದರ ಬೇರು ಎಲ್ಲಿಯವರೆಗೆ ಇದೆಯೋ ಆ ಬೇರನ್ನೇ ಅಗೆದು ತೆಗೆದು ಅಲ್ಲಿ ಏನು ಆಗಿಲ್ಲವೆಂದು ತೋರಿಸುವಂತಹ ಬಹಳ ದೊಡ್ಡ ಟ್ರೈನಿಂಗನ್ನು ಕಾಡುಗಳ್ಳರು ಮಾಡುತ್ತಿದ್ದಾರೆ. ಎಷ್ಟು ದೊಡ್ಡವರು ಎಂದರೆ ಅದರ ಬೇರನ್ನು ಕೂಡ ಒಂದು ಸ್ವಲ್ಪವೂ ಉಳಿಯದ ಹಾಗೆ ತೆಗೆದು ರಾತ್ರಿ ಬೆಳಗಾದರೆ ಅಲ್ಲಿ ಮರವೇ ಇರಲಿಲ್ಲವೆಂದು ಗೊತ್ತಾಗದ ಹಾಗೆ ಮಾಡುತ್ತಾರೆ. ಬೇರನ್ನು ಸಂಪೂರ್ಣವಾಗಿ ತೆಗೆದುಬಿಟ್ಟರೆ ಆ ರೀತಿಯುಳ್ಳದೆ ಉಂಟೆ? ಆದ್ದರಿಂದ ಕಾಲೇಜು ಮಾಡುವುದು ದೊಡ್ಡದಲ್ಲ, ಅರಣ್ಯಕ್ಕೆ ಬೇಕಾದಷ್ಟು ಸಸಿಗಳನ್ನು ನೆಡತಕ್ಕಂಥದ್ದಕ್ಕೆ ಅವಕಾಶವಿದೆಯೆಂದು ಇದರಲ್ಲಿ ಹೇಳಿದ್ದಾರೆ. ಪ್ರತಿವರ್ಷ ಕೋಟಿಗಟ್ಟಲೆ ಸಸಿಗಳನ್ನು ನೆಡುವುದಕ್ಕೆ ಕೋಟಿಗಟ್ಟಲೆ ಹಣವನ್ನು ಬಜೆಟ್ಟಿನಲ್ಲಿ ಇಟ್ಟಿದ್ದಾರೆ. ನಾನು ಹೇಳುವಂಥದ್ದು, ಈ ಸಸಿಗಳನ್ನು ನೆಡುವಂಥದ್ದು ಈ ರೀತಿಯಲ್ಲಿಯೇ ಕೋಟಿ ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಟ್ಟಿರುವಂಥದ್ದು, ಇದು ಪರಿಪಾಲನೆ ಆಗುತ್ತದೋ ಇಲ್ಲವೋ ಎಂಬುದನ್ನು ನಾವು ನೋಡಬೇಕು. ಈ ಕೋಟಿ ಕೋಟಿ ನೆಟ್ಟಿರತಕ್ಕಂತಹ ಸಸಿಗಳಲ್ಲಿ ಎಷ್ಟು ಉಳಿದಿವೆ ಎಂದು ಅದು ಮೊದಲು ತನಿಖೆ ಆಗಬೇಕು. ಆದ್ದರಿಂದ ಇವತ್ತು ಒಂದುಕಡೆ ಅರಣ್ಯಸಂಪತ್ತನ್ನು ನಾಶಮಾಡುವುದು ಮತ್ತೊಂದು ಕಡೆ ಸಸಿ ನೆಡುವುದು, ಆಗಿದೆ. ಆದ್ದರಿಂದ ಈ ಸಸಿಗಳನ್ನು ನೆಡುವಂತಹ ಕಾರ್ಯಕ್ರಮ ಬಹಳ ಒಳ್ಳೆಯದು. ಅದರಲ್ಲಿ ಎಷ್ಟು ಉಳಿಯುತ್ತವೆ, ಬರೀ ಸಸಿ ನೆಟ್ಟುಬಿಟ್ಟರೆ ಸಸಿ ಉಳಿಯುವುದಿಲ್ಲ. ಅದಕ್ಕೆ ನೀರು ಹಾಕಬೇಕು. ಸುತ್ತ ಬೇಲಿ ಹಾಕಬೇಕು. ಜಾನುವಾರುಗಳು ತಿನ್ನದ ಹಾಗೆ ನೋಡಿಕೊಳ್ಳಬೇಕು. ಇದಕ್ಕೆಲ್ಲಾ ವ್ಯವಸ್ಥೆ ಇದೆ. ಸಸಿ ನೆಟ್ಟದ್ದಕ್ಕೆ ಲೆಕ್ಕ ಕೊಡುತ್ತಾರೆ. ಇದು ಸರಿಯೋ ತಪ್ಪೋ ಎಂದು ನೋಡಬೇಕಾಗುತ್ತದೆ. ಏಕೆಂದರೆ ನಮ್ಮ ಸರ್ಕಾರ ಬಜೆಟ್ಟಿನಲ್ಲಿ ಕೋಟಿಗಟ್ಟಲೆ ಹಣವನ್ನು ಈ ಅರಣ್ಯದ ಉದ್ಧಾರಕ್ಕೆ ಸಸಿಗಳನ್ನು ನೆಡುವುದಕ್ಕೆ ಕೊಟ್ಟಿರುವಾಗ ಅದು ಹಾಳಾಗದ ಹಾಗೆ ನೋಡಿಕೊಳ್ಳುವಂಥದ್ದು ಕೂಡ ಬಹಳ ಮುಖ್ಯ. ಆದ್ದರಿಂದ ಇವತ್ತು ಅರಣ್ಯ ಅಭಿವೃದ್ಧಿಗೆ ಕೂಡ ಈ ಬಜೆಟ್ಟಿನಲ್ಲಿ ಬೇಕಾದಷ್ಟು ಹಣವನ್ನು ಇಟ್ಟಿದ್ದಾರೆ. ಇದು ಬಹಳ ಸಂತೋಷದ ವಿಚಾರ. ಅದೇ ರೀತಿಯಲ್ಲಿ ಮೀನುಗಾರಿಕೆಗೆ ಕೂಡ ಸಾಕಷ್ಟು ಸಹಾಯ ಮಾಡುವುದಾಗಿ ಇದರಲ್ಲಿ ಹೇಳಿದ್ದಾರೆ. ರಫ್ತು ಸುಂಕ ಮತ್ತು ಇತರೆ ರಿಯಾಯಿತಿಗಳನ್ನು ಒದಗಿಸುವ ದೃಷ್ಟಿಯಿಂದ ಮತ್ಸ್ಯ ಕೃಷಿಗೆ ಸರಿಸಮಾನವಾದ ಸ್ಥಾನಮಾನವನ್ನು ನೀಡಲು ಸರ್ಕಾರ ಉದ್ದೇಶಿಸಿದೆಯೆಂದು ಹೇಳಿದ್ದಾರೆ. ಕೃಷಿಗೆ ಸ್ಥಾನಮಾನ ಯಾವ ರೀತಿಯಿದೆಯೋ ಅದೇ ರೀತಿಯಲ್ಲಿ ಮೀನು ಹಿಡಿಯತಕ್ಕಂಥ ಜನರಿಗೆ ಸ್ಥಾನಮಾನ ಕೊಡುವುದಕ್ಕೆ ಬಜೆಟ್ ವ್ಯವಸ್ಥೆಯಲ್ಲಿ ಹೇಳಿದ್ದಾರೆ. ಇದು ಬಹಳ ಒಳ್ಳೆಯದು. ಏಕೆಂದರೆ ಮೀನುಗಾರಿಕೆ, ಮೀನು ಹಿಡಿಯತಕ್ಕಂತವರ ಜೀವನ ಬಹಳ ಕಷ್ಟ. ತುಫಾನಿಗೆ, ಅಮಳೆಗೆ, ಆ ಚಳಿಗೆ ಕಷ್ಟ ಪಟ್ಟು ಸಮುದ್ರಕ್ಕೆ ಹೋಗಿ ಮೀನು ಹಿಡಿಯತಕ್ಕಂತಹ ಜನ. ಅಂತಹವರಿಗೆ ಕೂಡ ಸರಿಯಾದಂತಹ ವ್ಯವಸ್ಥೆಯನ್ನು ಕೊಡಬೇಕೆಂದು ಹೇಳಿ ಈ ಬಜೆಟ್ಟಿನಲ್ಲಿ ಬೇರೆಯಾಗಿ ಹಣವನ್ನು ಇಟ್ಟಿದ್ದಾರೆ. ಮೀನುಗಾರರಿಗೆ ಕೂಡ ವಸತಿಯನ್ನು ಕೊಡಬೇಕೆಂದು ಹೇಳತಕ್ಕಂತಹ ಕಾರ್ಯಕ್ರಮ ಕೂಡ ನನ್ನ ಕ್ಷೇತ್ರದಲ್ಲಿ ಬಂಗ್ರೆ ಎನ್ನುವ ಪ್ರದೇಶದಲ್ಲಿ 2-3 ಸಾವಿರ ಜನರಿಗೆ ಹಕ್ಕು ಪತ್ರಗಳನ್ನು ನಮ್ಮ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ.

ಆದ್ದರಿಂದ ಮೀನುಗಾರರ ಬಗ್ಗೆ ಕೂಡ ಬಜೆಟ್ಟಿನಲ್ಲಿ ಬೇಕಾದಷ್ಟು ಹೇಳಿದ್ದಾರೆ. ಎಲ್ಲದಕ್ಕಿಂತಲೂ ಮುಖ್ಯವಾಗಿ ರಾಜ್ಯಪಾಲರ ಭಾಷಣದಲ್ಲಿಯೂ ಈ ರುದ್ರಭೂಮಿ ವಿಚಾರ ಇತ್ತು. ಇದು ಮುಸ್ಲಿಮರಿಗೆ ಆಗಲಿ ಮುಸ್ಲಿಮೇತರಿಗೆ

ಆಗಲಿ ಇಷ್ಟರವರೆಗೆ ಸರಿಯಾದಂಥ ವ್ಯವಸ್ಥೆ ಇರಲಿಲ್ಲ? ಈ ರುದ್ರಭೂಮಿಯನ್ನು ಅಥವಾ ಸ್ಮಶಾನವನ್ನು ಕೊಡತಕ್ಕಂಥ ವಿಚಾರ ಬಹಳ ಒಳ್ಳೆಯದು. ಕೆಲವರು ಅದನ್ನು ಓದುವಾಗ ಸ್ಮಶಾನ ಎಂದು ತಮಾಷೆ ಮಾಡುತ್ತಾರೆ. ಆದರೆ ಇಲ್ಲಿ ಯಾರೂ ಸಾವಿರ ವರ್ಷ ಬದುಕುವುದಿಲ್ಲ. ಹುಟ್ಟಿದವರು ಸಾಯಲಬೇಕು. ಜನನಂ ಮರಣಂ. ಜನನ ಆಗುವಾಗ ಬಹಳ ಸಂತೋಷ ಆಗುತ್ತದೆ. ಮನೆ ಇರುತ್ತದೆ. ತೊಟ್ಟಿಲು ಇರುತ್ತದೆ, ಹಾಸಿಗೆ ಬಟ್ಟೆ ಇರುತ್ತದೆ. ಬೇಕಾದವರು ಇರುತ್ತಾರೆ, ತಂದೆ ತಾಯಿಗಳು ಇರುತ್ತಾರೆ, ಬಂಧು ಬಳಗದವರೂ ಇರುತ್ತಾರೆ. ಮರಣ ಆಗುವಾಗ ಎಲ್ಲಾ ಹೋಗಬೇಕು, ಅದು ಮಣ್ಣಿನದಿಗೆ ಹೋಗಬೇಕು, ಇಲ್ಲವೆ ದಹನ ಮಾಡಬೇಕು. ಆದಕ್ಕೆ ಸರಿಯಾದ ವ್ಯವಸ್ಥೆ ಮಾಡಬೇಕು ಇಲ್ಲದಿದ್ದರೆ ನಾತ ಬಂದು ದುರ್ನಾತ ಆಗುತ್ತದೆ. ಆದ್ದರಿಂದ ಈ ಸ್ಮಶಾನಕ್ಕೆ ಒಂದು ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ಎಲ್ಲೆಲ್ಲಿ ಯಾವ್ಯಾವ ಗ್ರಾಮಾಂತರ ಪ್ರದೇಶಗಳಲ್ಲಿ ರುದ್ರಭೂಮಿ ಇಲ್ಲ ಅದು ಹಿಂದೂಗಳಿಗಾಗಿರಲಿ, ಮುಸ್ಲಿಮರಿಗಾಗಲಿ ಕೊಡಬೇಕು ಎಂದು ಹೇಳತಕ್ಕಂಥ ಕಾರ್ಯಕ್ರಮ ಈ ಬಜೆಟ್‌ನಲ್ಲಿ ಸೇರಿಸಿದ್ದು ಒಳ್ಳೆಯದು ಆಯಿತು. ಕಳೆದ ಸಲ ನಾನು ಒಮ್ಮೆ ಹೇಳಿದ್ದೆ ಈ ಮುಸ್ಲಿಮರು ಒಂದು ಗ್ರಾಮದಲ್ಲಿ ರುದ್ರಭೂಮಿ ಇಲ್ಲದಿರುವುದರಿಂದ ನನ್ನ ಹತ್ತಿರ ಬಂದು ಈ ಶವವನ್ನು ಇಟ್ಟುಕೊಂಡು ಏನು ಮಾಡಬೇಕು ಎಂದರು. ಯಾವ ದಾರಿ ಇಲ್ಲ, 8ಮೈಲಿ ದೂರದ ಒಂದು ಅರಬ್ಬೀ ಸಮುದ್ರ ಇದೆ ಅದರಲ್ಲಿ ತಂದು ಹಾಕಬೇಕಾಗಿದೆ ಎಂದು ಹೇಳಿದರು. ನಾನು ಅವರಿಗೆ ಸಮಾಧಾನ ಮಾಡಿದ. ಅದೇ ರೀತಿಯಲ್ಲಿ ಒಂದು ಗ್ರಾಮದಲ್ಲಿ ಹಿಂದೂಗಳು ರುದ್ರಭೂಮಿ ಇಲ್ಲ ಏನು ಮಾಡಲಿ ಎಂದು ಕೇಳಿದರು. ಆದ್ದರಿಂದ ಇಂತಹ ವಿಚಾರ ಸರಿಪಡಿಸುವ ಸಲುವಾಗಿ ಈ ಸಾರಿ ಬಜೆಟ್ಟಿನಲ್ಲಿ ಸೇರಿಸಿದ್ದು ಬಹಳ ಆಶಾದಾಯಕವಾದಂಥ ಕಾರ್ಯಕ್ರಮ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಸ್ವಾಮಿ ಹಿಂದಿನ ಯಾವುದೇ ಸರ್ಕಾರ ಸ್ಮಶಾನದ ಬಗ್ಗೆ ವಿಚಾರ ಮಾಡಿರಲಿಲ್ಲ.

ಶ್ರೀ ಬಿ.ಎಂ. ಇದಿನಬ್ಬ:- ಅವರಿಗೆ ಸ್ಮಶಾನ ಅಥವಾ ಮರಣದ ವಿಷಯವೇ ಗೊತ್ತಿರಲಿಲ್ಲ. ಅವರು ಇದೇ ಸ್ವರ್ಗ ಎಂದು ಭಾವಿಸಿಕೊಂಡಿದ್ದರು.

ಶ್ರೀ ಎಲ್.ಆರ್. ಶಿವರಾಮೇಗೌಡ:- ಯಾರೋ ಸಮಾಧಿ ಮಾಡಿರಲಿಲ್ಲ ಎಂದು ಹೇಳಿದಿರಲ್ಲ ಅದಕ್ಕೆ ಕೇಳುತ್ತಾ ಇದ್ದೆ.

ಶ್ರೀ ಬಿ.ಎಂ. ಇದಿನಬ್ಬ:- ಏನೇ ಆಗಲಿ, ಇದು, ಒಂದು ಒಳ್ಳೆಯ ಕಾರ್ಯಕ್ರಮ ಏಕೆಂದರೆ ನಾವು ಇದನ್ನು ಚಿಂತನೆ ಮಾಡಿ ನೋಡಬೇಕು. ಬರೀ ಒಂದು ಟೌನ್ ನೋಡುವುದು ಅಲ್ಲ, ನಗರವನ್ನು ನೋಡುವುದು ಅಲ್ಲ, ಹಳ್ಳಿ ಪ್ರದೇಶದಲ್ಲಿ ಗುಡ್ಡ ಬೆಟ್ಟ ಇರತಕ್ಕಂಥ ಪ್ರದೇಶದಲ್ಲಿ ಜನ 6-8-10 ಮೈಲಿ ನಡೆದುಕೊಂಡು ಇರತಕ್ಕಂಥ ಪ್ರದೇಶದಲ್ಲಿ ಜನರಿಗೆ ತೊಂದರೆ ಏನು ಎಂದು ಆಲೋಚನೆ ಮಾಡಿದರೆ ಇದು ನಮಗೆ ಮನವರಿಕೆಯಾಗುತ್ತದೆ. ಆದ್ದರಿಂದ ಇದು ಒಂದು ಒಳ್ಳೆಯ ಕಾರ್ಯಕ್ರಮ, ಅದಕ್ಕೆ ಕೂಡ ಹಣ ಇಟ್ಟಿದ್ದಾರೆ. ನಾವು ಎಲ್ಲಿ ಹೋದರೂ ಜಾಗ ಸಿಕ್ಕುವುದಿಲ್ಲ, ನಮ್ಮ ಮಂತ್ರಿಗಳಾದ ಮಲ್ಲಾರಿ ಗೌಡರು ಸಹಜವಾದುದನ್ನೇ ಹೇಳಿದ್ದಾರೆ 8-10 ಮೈಲಿ ಹೋದರೂ ಜಾಗ ಸಿಕ್ಕುವುದಿಲ್ಲ, ಎಲ್ಲಿ ಕೊಂಡು ಹೋಗಬೇಕು ಎಂದು ಮತ್ತೆ ಆಲೋಚನೆ ಬರುತ್ತದೆ. ಮುಂದೆ ಹೋದರೆ ಅರಬ್ಬೀ ಸಮುದ್ರ ಇದೆ. ಅದೇ ರೀತಿ ಕರ್ನಾಟಕ ದರ್ಶನ ಸಂಸ್ಥೆ ಎಂದು ಹೇಳಿ. ಕನ್ನಡದ ಬಗ್ಗೆ ವ್ಯವಸ್ಥೆ ಮಾಡಲಿಕ್ಕೆ ಹಣವನ್ನು ತೆಗೆದಿಟ್ಟಿದ್ದಾರೆ. ಇದು ಕೂಡ ಸಂತೋಷದ ವಿಚಾರ ಜನರ ಅಭಿವೃದ್ಧಿ ಹಾಗೂ ಅವರ ಸಂಸ್ಕೃತಿ ಮತ್ತು ಭಾಷೆಯ ಅಭಿವೃದ್ಧಿಯ ನಡುವೆ ಸಂಬಂಧ ಇದ್ದೇ ಇರುತ್ತದೆ. ಕನ್ನಡ ಭಾಷೆಯ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರವು ಕರ್ನಾಟಕ ದರ್ಶನ ಸ್ಥಾಪಿಸುವ ಬಗ್ಗೆ ಎಲ್ಲ ವಿಧಿ ವಿಧಾನಗಳನ್ನು ಅಂತಿಮಗೊಳಿಸಿದೆ. ಈ ಸಂಸ್ಥೆ ಸಂಸ್ಥೆಗೆ ಬೆಂಗಳೂರು ವಿಶ್ವವಿದ್ಯಾನಿಲಯದ ಬಳಿ 50ಎಕರೆ ಜಮೀನನ್ನು ನೀಡಲು ಮತ್ತು 1992-93ನೇ ಸಾಲಿನಲ್ಲಿ 50 ಲಕ್ಷ ರೂಪಾಯಿಗಳನ್ನು ಒದಗಿಸಲು ಉದ್ದೇಶಿಸಲಾಗಿದೆ. ಸರ್ಕಾರವು ಬೃಹತ್ ಪ್ರಮಾಣದಲ್ಲಿ ಕನ್ನಡ ಸಾಹಿತ್ಯದ ಪ್ರಸಿದ್ಧ ಕೃತಿಗಳ ಪ್ರಕಟಣಾ ಕಾರ್ಯವನ್ನೂ ಸಹ ಕೈಗೊಂಡಿದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಎಲ್ಲಾ ಅಭಿವೃದ್ಧಿ ಕಾರ್ಯ ಚಟುವಟಿಕೆಗಳನ್ನು ಕಾರ್ಯಗತಗೊಳಿಸಲು ಸರ್ಕಾರವು, ಕನ್ನಡ ಪುಸ್ತಕ ಅಭಿವೃದ್ಧಿ ಪ್ರಾಧಿಕಾರವೊಂದನ್ನು ಸ್ಥಾಪಿಸಲು ಆಲೋಚನೆ ಮಾಡಿದೆ ಎಂದು ಹೇಳತಕ್ಕಂಥದ್ದನ್ನು ಈ ಬಜೆಟ್ಟಿನಲ್ಲಿ ಹೇಳಿದ್ದಾರೆ. ಆದುದರಿಂದ ಈ ಕನ್ನಡದ ಅಭಿವೃದ್ಧಿಗೆ, ಕನ್ನಡ ಪುಸ್ತಕಗಳ ಅಭಿವೃದ್ಧಿಗೆ ಕನ್ನಡ ಸಾಹಿತ್ಯಗಳ ಅಭಿವೃದ್ಧಿಗೆ ಇಲ್ಲಿ ಬೇಕಾದಷ್ಟು ಸಹಾಯ ಮಾಡುತ್ತೇವೆಂದು ಹೇಳತಕ್ಕಂಥ ರೀತಿಯಲ್ಲಿ ಹಣವನ್ನು ತೆಗೆದಿಟ್ಟಿದ್ದಾರೆ. ಇದು ಕರ್ನಾಟಕ, ಕರ್ನಾಟಕದಲ್ಲಿ ಕನ್ನಡ ಮಾತನಾಡತಕ್ಕಂಥ ಕನ್ನಡಿಗರು ಎಂದು ಹೇಳತಕ್ಕಂಥ ಈ ಪ್ರದೇಶದಲ್ಲಿ ಇದು ಬಹಳ ಉತ್ತಮವಾದಂಥ ಕಾರ್ಯಕ್ರಮ. ಇದು ಬಂದಾಗ ಮಾತ್ರ ಕರ್ನಾಟಕಕ್ಕೆ ಬೆಲೆ ಬರುತ್ತದೆ. ಕರ್ನಾಟಕದ ಜನರಿಗೆ ಬೆಲೆ ಬರುತ್ತದೆ. ಕನ್ನಡಕ್ಕೆ ಬೆಲೆ ಬರುತ್ತದೆ, ಕನ್ನಡತನಕ್ಕೆ ಬೆಲೆ ಬರುತ್ತದೆ. ಕನ್ನಡಿಗರು ಎಂದು ಹೇಳುವುದಕ್ಕೆ ಅರ್ಥ ಇರುತ್ತದೆ. ಇಲ್ಲವಾದರೆ ಏನೂ ಇರುವುದಿಲ್ಲ. ಏಕೆಂದರೆ ನಾನು ಕೇರಳದಲ್ಲಿ ಬಹಳ ಸುತ್ತಾಡಿದ್ದೇನೆ. ಸ್ವಾಮಿ ಅಲ್ಲೆಲ್ಲಾ

ಬಿ.ಎ, ಬಿ.ಕಾಂ., ಎಂ.ಎ, ಎಂ.ಕಾಂ., ಆದವರೇ. ಒಬ್ಬ ಮೆಟ್ಟು ಹೊಲಿಯುವವನು ಆಗಲೀ ಒಬ್ಬ ಕೂಲಿ ಕೆಲಸದವನು ಆಗಲಿ ಅವನು ಸಾಧಾರಣವಾಗಿ 8ನೇ ತರಗತಿಯವರೆಗೂ ಅಥವಾ ಎಸ್.ಎಸ್.ಎಲ್.ಸಿ ಯವರೆಗೂ ಕಲಿತಿರುತ್ತಾನೆ. ಅಲ್ಲಿ ಪ್ರತಿಯೊಬ್ಬರ ಕೈಯಲ್ಲಿ ಪತ್ರಿಕೆ ಇಲ್ಲದೇ ಇಲ್ಲ.

ಒಬ್ಬ ಚಮ್ಮಾರ ಆಗಲೀ ಗುಡಿ ಕೈಗಾರಿಕೆ ಮಾಡತಕ್ಕವನ್ನು ಆಗಲೀ ಒಬ್ಬ ಕೂಲಿಯವನು ಆಗಲಿ ಅಥವಾ ಒಬ್ಬ ಬಟ್ಟೆ ಒಗೆಯುವವನು ಆಗಲಿ, ಅವನಲ್ಲಿ ವಾದ ಮಾಡಲಿಕ್ಕೆ ಸಾಧಾರಣವಾಗಿ ನಮ್ಮ ಇಲ್ಲಿಯ ರಾಜಕಾರಣಿಗಳಿಗೆ ಸಾಧ್ಯವಾಗುವುದಿಲ್ಲ.

ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಎಷ್ಟೇ ಆದರೂ ಕೇರಳದಲ್ಲಿ ಮಲಯಾಳಂ ಪತ್ರಿಕೆಯಲ್ಲದೆ ಬೇರೆ ಪತ್ರಿಕೆಗಳಿಲ್ಲ. ಮಲಯಾಳಂ ಭಾಷೆಯಲ್ಲದೆ ಬೇರೆ ಭಾಷೆಯನ್ನು ಮಾತನಾಡುವುದಕ್ಕೆ ಸಾಧ್ಯವಿಲ್ಲ. ಅಷ್ಟೇ ಅಲ್ಲ ಬೇರೆ ಭಾಷೆಯನ್ನು ಕೇಳುವುದಕ್ಕೂ ಕೂಡ ಸಾಧ್ಯವಿಲ್ಲ. ಪ್ರತಿಯೊಬ್ಬರ ಕೈಯಲ್ಲೂ ಮಲಯಾಳಂ ಪತ್ರಿಕೆಗಳಿರುತ್ತವೆ. ಅಲ್ಲಿಯ ಅಸೆಂಬ್ಲಿಯಲ್ಲಿ 144 ಜನ ಸದಸ್ಯರಿದ್ದರೂ ಅವರೆಲ್ಲರೂ ಮಲಯಾಳಂನಲ್ಲೆ ಭಾಷಣ ಮಾಡುತ್ತಾರೆ. ಅಲ್ಲಿಯ ಸ್ಪೀಕರ್‌ರವರೂ ಕೂಡಾ ಮಲಯಾಳಂನಲ್ಲೇ ಮಾತನಾಡುತ್ತಾರೆ. ಈ ರೀತಿ ಅವರಲ್ಲಿ ಭಾಷಾಭಿಮಾನವನ್ನು ಉಳಿಸಿಕೊಂಡಿರುವುದರಿಂದ ಭಾಷಾವಾರು ರಾಜ್ಯ ಆದುದರ ಫಲವನ್ನು ಕೇರಳದವರು ಪಡೆದುಕೊಂಡಿದ್ದಾರೆ. ಅದೇ ರೀತಿ ತಮಿಳುನಾಡಿನವರು ಪಡೆದುಕೊಂಡಿದ್ದಾರೆ. ಆಂಧ್ರದವರೂ ಪಡೆದುಕೊಂಡಿದ್ದಾರೆ. ಆದರೆ ನಮ್ಮ ಕರ್ನಾಟಕದಲ್ಲಿ ಏನಾಗಿದೆ ಎಂದರೆ ನಮ್ಮ ದಾಕ್ಷಿಣ್ಯ, ನಮ್ಮ ಔದಾರ್ಯ, ನಮ್ಮ ಒಳ್ಳೆಯತನ, ನಾವು ಒಳ್ಳೆಯವರು ಎಂದು ಹೇಳತಕ್ಕದ್ದು ಆದರೆ ಆಗಲಿ ಹೋದರೆ ಹೋಗಲಿ ಎಂದು ಹೇಳತಕ್ಕಂಥ ಈ ಸೌಜನ್ಯ ಇರುವುದರಿಂದ ಖಂಡಿತವಾಗಿ ನಾನು ಹೇಳುತ್ತೇನೆ, ಇನ್ನು 15 ವರ್ಷಗಳಲ್ಲಿ ಬೆಂಗಳೂರು ತಮಿಳರ ವಶವಾಗುತ್ತದೆ, ಮಂಗಳೂರು ಮಲೆಯಾಳಿಗಳ ವಶವಾಗುತ್ತದೆಂದು ಹೇಳತಕ್ಕ ನನ್ನ ಈ ಭವಿಷ್ಯ ನುಡಿಯನ್ನು ಯಾರಾದರೂ ಒಂದು ನೋಟ್ ಬುಕ್‌ನಲ್ಲಿ ಬರೆದಿಟ್ಟುಕೊಳ್ಳಬೇಕು. ಏಕೆಂದರೆ, ಆ ರೀತಿಯ ಒಂದು ಪರಿಸ್ಥಿತಿ ಇದೆ. ಇವತ್ತು ನೀವು ನಮ್ಮ ಬೆಂಗಳೂರಿನ ಯಾವುದೇ ಸರ್ಕಲ್‌ನಲ್ಲಿ ಹೋಗಿ ನಿಂತುಕೊಂಡರೂ ಕೂಡ ಅಲ್ಲಿ ನಿಮಗೆ ಕೇಳಬರತಕ್ಕದ್ದು ತಮಿಳು ಭಾಷೆ. ಆದರೆ ಇವತ್ತು ನಮಗೆ ಭಾಷಾ ಪ್ರಶ್ನೆ ಏನೂ ಇಲ್ಲ. ಈಗ ನೀವು ಭಾಷಾವಾರು ರಾಜ್ಯವನ್ನು ಏತಕ್ಕೆ ಮಾಡಿದಿರಿ. ಆದರೆ ಆರೀತಿ ಮಾಡಿದ ಮೇಲೆ ಅದಕ್ಕೆ ಸರಿಯಾಗಿರಬೇಕೆಂದು ಯಾರು ಯಾವುದೇ ಭಾಷೆಯನ್ನು ಬೇಕಾದರೂ ಮಾತನಾಡಲಿ ನೀವು ಭಾಷಾವಾರು ರಾಜ್ಯವನ್ನು ಮಾಡತಕ್ಕ ಅವಶ್ಯಕತೆ ಇರಲಿಲ್ಲ. ಭಾಷಾವಾರು ರಾಜ್ಯವನ್ನು ಮಾಡಿದ ಮೇಲೆ ನೀವು ನಿಮ್ಮ ನಿಮ್ಮ ರಾಜ್ಯವನ್ನು ಉಳಿಸಿಕೊಳ್ಳಬೇಕು, ಬೆಳೆಸಿಕೊಳ್ಳಬೇಕು. ಸಾಹಿತಿಗಳಿಗೆ ನೀವು ಶಕ್ತಿ ಕೊಡಬೇಕು. ನಾನು ಈಗಾಗಲೇ ಹೇಳಿದಂತೆ ನೀವು ಬೆಂಗಳೂರಿನ ಯಾವುದೇ ಸರ್ಕಲ್‌ಗೆ ಹೋದರೂ ಅಲ್ಲಿ ನೀವು ಕಾಣತಕ್ಕದ್ದು ತಮಿಳು. ಕನ್ನಡವನ್ನು ಮಾತನಾಡುವವರು 10 ಪರ್ಸೆಂಟ್ ಕೂಡ ಸಿಕ್ಕುವುದಿಲ್ಲ.

ನಾನು ಬಹಳಷ್ಟು ಪೇಟೆಗಳಲ್ಲಿ ತಿರುಗಾಡಿ ನೋಡಿದ್ದೇನೆ. ತಾವೂ ಕೂಡ ಹೋಗಿ ನೋಡಬಹುದು. ಅಂದ ಮೇಲೆ ಇನ್ನು 15 ವರ್ಷಗಳಾದ ಮೇಲೆ ಏನಾಗಬಹುದು ಈ ಪರಿಸ್ಥಿತಿ ಎಂಬುದನ್ನು ನೀವೇ ಯೋಚನೆ ಮಾಡಿ ನೋಡಿ. ಎಲ್ಲ ಮತದಾರರ ಪಟ್ಟಿಯಲ್ಲೂ ಅವರ ಹೆಸರುಗಳೇ ಉಂಟು. ಇವತ್ತು ಪತ್ರಿಯೊಂದೂ ಕೂಡ ನಡೆಯುತ್ತಿರುವುದು ಚುನಾವಣೆಯ ಆಧಾರದ ಮೇಲೆ ಚುನಾವಣೆಯಲ್ಲಿ ಮೇಲೆ ಬಂದರೆ ಅಧಿಕಾರ ಸಿಕ್ಕುತ್ತದೆ. ಅಧಿಕಾರ ಸಿಕ್ಕಿದರೆ ಎಲ್ಲಾ ಚಾಲು ಆಗುತ್ತದೆ. ಈ ರೀತಿಯ ಪರಿಸ್ಥಿತಿ ಇರುವುದರಿಂದ ಮುಂದೆ ಏನಾಗಬಹುದೆಂಬುವನ್ನು ತಾವೇ ಊಹಿಸಿನೋಡಿ. ನಾನು ಇದನ್ನು ಬಿಡಿಸಿ ಬಿಡಿಸಿ ಹೇಳುವುದಕ್ಕೆ ಹೋಗುವುದಿಲ್ಲ. ಇದೇ ರೀತಿ ಮಂಗಳೂರಿನಲ್ಲೂ ಕೂಡ. ನಾವು ಯಾವುದೇ ಒಂದು ಸರ್ಕಲ್‌ಗೆ ಹೋಗಿ ನಿಂತರೂ ಕೂಡ ಅಲ್ಲಿ ಕೇಳಿಬರತಕ್ಕದ್ದು ಮಲೆಯಾಳಂ ಅಲ್ಲದೆ ಬೇರೆ ಭಾಷೆ ಅಲ್ಲ, ಅದು ಸಮ್ಮಿಶ್ರ ಊರಾದುದರಿಂದ ಸ್ವಲ್ಪ ತುಳು, ಸ್ವಲ್ಪ ಕೊಂಕಣಿ ಕೇಳಿಬರುತ್ತದೆ. ಹಿಂದೆ ಕೇಳಪ್ಪನ್ ಎನ್ನತಕ್ಕವನು ಏನು ಹೇಳಿದ್ದ ಎಂದರೆ ಕೊಲ್ಲೂರುವರೆಗೆ ಕೇರಳ ಎಂದು. ಅವನು ಆ ಕಾಲದಲ್ಲೇ ಹೇಳಿದ್ದ ಎಂದ ಮೇಲೆ ಈ ಭಾವನೆ ಆ ಜನರಲ್ಲಿನ್ನೂ ಹಾಗೂ ಈಗಲೂ ಅವರುಗಳು ಅಲ್ಲಿ ಬರುತ್ತಿರುವುದರಿಂದ ಇನ್ನು 15 ವರ್ಷಗಳಲ್ಲಿ ಏನಾಗಬಹುದೆಂಬುದನ್ನು ನಾವು ಆಲೋಚನೆ ಮಾಡಬೇಕಾಗುತ್ತದೆ. ಇವತ್ತು ಈ ಕರ್ನಾಟಕ ದರ್ಶನ ಸಂಸ್ಥೆಯನ್ನು ಮಾಡಿ ಕನ್ನಡದ ಬಗ್ಗೆ, ಕನ್ನಡ ಸಾಹಿತಿಗಳ ಬಗ್ಗೆ, ಕನ್ನಡ ಸಂಸ್ಥೆಗಳ ಬಗ್ಗೆ ಸಾಕಷ್ಟು ಕೆಲಸಮಾಡಬೇಕು. ಹೆಚ್ಚು ಹೆಚ್ಚು ಪುಸ್ತಕಗಳನ್ನು ತರಬೇಕೆಂದು ನಿಶ್ಚಯಮಾಡಿದ್ದಾರೆ. ಇದು ಬಹಳ ಸಂತೋಷದ ವಿಚಾರ ಇದೇ ರೀತಿಯಲ್ಲಿ ಕಿತ್ತೂರು ಅಭಿವೃದ್ಧಿ ಯೋಜನೆ. ಲಲಿತಕಲಾ ವಿಶ್ವವಿದ್ಯಾಲಯದ ಯೋಜನೆ, ಇವುಗಳನ್ನೆಲ್ಲಾ ಈ ಬಜೆಟ್‌ನಲ್ಲಿ ಸೇರಿಸಿದ್ದಾರೆ. ಲಲಿತಕಲಾ ವಿಶ್ವವಿದ್ಯಾಲಯಕ್ಕೆ 1992-93ನೇ ಸಾಲಿಗೆ ಬಜೆಟ್‌ನಲ್ಲಿ ಒಂದು ಕೋಟಿ ರೂಗಳನ್ನು ಒದಗಿಸಿದ್ದಾರೆ. ಇದು ಬಹಳ ಒಳ್ಳೆಯ ವಿಚಾರ. ಇದೇ ರೀತಿ ಕಿತ್ತೂರು ರಾಣಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ಅಪ್ರತಿಮ ಹೋರಾಟ ನಡೆಸಿದ ವೀರ ರಮಣಿ ನಮಗೆ ಹೆಮ್ಮೆ ತಂದಿತ್ತ ಧೀರ ರಾಣಿ ಕರ್ನಾಟಕದ ಮುಂದಿನ ಪೀಳಿಗೆಗಳಿಗೂ ರಾಣಿ ಚೆನ್ನಮ್ಮನ

ಭವ್ಯ ಪರಂಪರೆಯ ಅರಿವಾಗುವಂತೆ ಮಾಡುವುದಕ್ಕಾಗಿ, ರಾಣಿ ಚೆನ್ನಮ್ಮನ ಜ್ಞಾಪಕಾರ್ಥ ಸರ್ಕಾರ ಐತಿಹಾಸಿಕ ಸಾಂಸ್ಕೃತಿಕ ಮತ್ತು ಪ್ರವಾಸೀ ಮಹತ್ವವುಳ್ಳ ಸ್ಥಳವಾಗಿ ಕಿತ್ತೂರಿನ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲು ಉದ್ದೇಶಿಸಿದೆ. 6 ಕೋಟಿ ರೂ. ನ ಈ ಯೋಜನೆಗೆ ಕರ್ನಾಟಕ ಸರ್ಕಾರ ತನ್ನ ಕೊಡುಗೆಯಾಗಿ 1992-93ರಲ್ಲಿ ಒಂದು ಕೋಟಿ ರೂ ಬಜೆಟ್ ಏರ್ಪಾಡು ಮಾಡಿದೆ. ಈಗ ಸರ್ಕಾರ ಈ ಕೆಲಸವನ್ನು ಮಾಡುವುದಕ್ಕೆ ಮನಸ್ಸುಮಾಡಿದೆ. ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ ಸ್ವತಂತ್ರ ಮಹಿಳೆ ರಾಣಿ ಕಿತ್ತೂರು ಚೆನ್ನಮ್ಮನ ಹೆಸರನ್ನು ಉಳಿಸುವುದಕ್ಕೆ ಒಂದು ಸ್ಮಾರಕವನ್ನು ಮಾಡತಕ್ಕ ಕೆಲಸವನ್ನು ಮಾಡುತ್ತಿರುವುದು ನಿಜವಾಗಿಯೂ ಕರ್ನಾಟಕದ ಭವ್ಯ ಪರಂಪರೆಯನ್ನು ಗ್ರಹಿಸುವಂಥ ಒಳ್ಳೆಯ ಕೆಲಸ ಎಂದು ಹೇಳಿದರೆ ತಪ್ಪಾಗಲಾರದು.

ಇದೇ ರೀತಿ ಕ್ರೀಡಾ ಇಲಾಖೆಯಲ್ಲಿ ಕೆಲಸಮಾಡಿದಂಥವರಿಗೂ ಕೂಡ ಒಳ್ಳೆಯ ಪ್ರಶಸ್ತಿಯನ್ನು ಕೊಡತಕ್ಕದ್ದು, ಏಕಲವ್ಯ ಪ್ರಶಸ್ತಿಯನ್ನು ಕೊಡತಕ್ಕದ್ದನ್ನೂ ಕೂಡ ಸಾರಿದ್ದಾರೆ. ಗ್ರಾಮಾಂತರ ಯುವ ಜನರು ಕ್ರೀಡೆಗಳಲ್ಲಿ ಹಾಗೂ ಪಂದ್ಯಗಳಲ್ಲಿ ಭಾಗವಹಿಸಲು ಈ ಯೋಜನೆಯು ಉತ್ತೇಜಿಸುತ್ತದೆ. ರಾಜ್ಯಗಳಲ್ಲಿ ವಿವಿಧ ಕ್ರೀಡೆಗಳಲ್ಲಿ ಹಾಗೂ ಪಂದ್ಯಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಸಹ ಉತ್ತೇಜನ ನೀಡಲಾಗುವುದು. ಅತ್ಯುತ್ತಮ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ರಾಜ್ಯಮಟ್ಟದ ವಾರ್ಷಿಕ ಏಕಲವ್ಯ ಪ್ರಶಸ್ತಿ ಎಂಬ ಪ್ರಶಸ್ತಿ ನೀಡಲು ಸರ್ಕಾರ ಆಲೋಚನೆ ಮಾಡಿದೆ. ಮತ್ತು 1992-93ನೇ ವರ್ಷಕ್ಕೆ 10 ಲಕ್ಷರೂ ನಿಗದಿ ಮಾಡಿದೆ ಎಂದರೆ ಸಾಂಕೇತಿಕವಾಗಿ ಕೆಲಸಕ್ಕೆ ತೊಡಗಿದೆ. ಆ ರೀತಿ ಮಾಡುವಾಗ ಕ್ರೀಡೆಗಳಲ್ಲಿ ಮುಂದೆ ಬರತಕ್ಕ ತರುಣರಿಗೆ, ಯುವಕರಿಗೆ ಒಂದು ರೀತಿಯ ಉತ್ಸಾಹ ಬರಲಿಕ್ಕೆ ಸಾಧ್ಯವಾಗುತ್ತದೆ. ಅದನ್ನೂ ಕೂಡ ಇಲ್ಲಿ ಮಾಡಿದ್ದಾರೆ. ಇದೇ ರೀತಿ ಪ್ರವಾಸೋದ್ಯಮವನ್ನು ಮಾಡುವುದಕ್ಕೂ ಕೂಡ 1992-93ನೇ ಸಾಲಿಗೆ ಒಂದು ಕೋಟಿ ರೂ ಹೆಚ್ಚು ತೆಗೆದಿಟ್ಟಿದೆ.

ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯ ಪ್ರದೇಶದ ಅನೇಕ ಸ್ಥಳಗಳಲ್ಲಿ ಪ್ರವಾಸೋದ್ಯಮವಾಗಬೇಕೆಂದು ನಾನು ಕೇಳುತ್ತಲೇ ಬಂದಿದ್ದೇನೆ. ಅದರಲ್ಲೂ ಉಳ್ಳಾಲದಲ್ಲಿ ಬಹಳ ಒಳ್ಳೆಯ ಸ್ಥಳವುಂಟು. ಉಳ್ಳಾಲ ಎಂಬು ಹೇಳಿದರೆ ಸೋಮೇಶ್ವರದಲ್ಲಿ ಒಂದು ದೊಡ್ಡ ದೇವಸ್ಥಾನವಿದೆ. ಅದರ ಪಕ್ಕದಲ್ಲಿಯೇ ಉಳ್ಳಾಲ ಇದೆ. ಸೋಮೇಶ್ವರದ ಸರಹದ್ದಿನಲ್ಲಿ ಉಳ್ಳಾಲವಿದ್ದು, ಉಳ್ಳಾಲದಲ್ಲಿ ಸೈಯದ್ ಮೋದಿನಿ ಎಂಬ ಒಂದು ದರ್ಗಾ ಇದೆ. ಆ ಸ್ಥಳಕ್ಕೆ ದೊಡ್ಡ ದೊಡ್ಡ ಜನರು ಪ್ರತಿ ದಿನಕ್ಕೆ ಸಾಧಾರಣವಾಗಿ 3,000 ದಿಂದ 4000ವರೆಗೆ ಜನರು ಬರುತ್ತಾರೆ. ಅಂತಹ ಒಂದು ಸ್ಥಳ ಅಲ್ಲಿದೆ. ಆ ಪ್ರದೇಶದಲ್ಲಿ ಪ್ರವಾಸೋದ್ಯಮದ ವ್ಯವಸ್ಥೆ ಮಾಡಬೇಕೆಂದು ನಾವು ಕೇಳುತ್ತಲೇ ಬಂದಿದ್ದೇನೆ. ಆದರೆ ಇನ್ನೂ ಆಗಿಲ್ಲ. ನಿಜವಾಗಿಯೂ ಈ ಸಂದರ್ಭದಲ್ಲಿ ಇದಕ್ಕಾಗಿ ಹಣವನ್ನು ತೆಗೆದಿಟ್ಟಿದ್ದಾರೆ. ಉಳ್ಳಾಲಕ್ಕೆ ಪೂರಕವಾಗಿ ಮಧ್ಯೆ ಮಾಣಿ ಉಳ್ಳಾಲ ರಸ್ತೆ ಎಂದು ಶ್ರೀಯುತ ಶ್ರೀನಿವಾಸ ಮಲ್ಯ ಅವರು 1962ನೇ ಇಸವಿಯಲ್ಲಿ ಒಂದು ಹೊಸ ರಸ್ತೆಯನ್ನು ಮಾಡಿದ್ದರು. ಏಕೆಂದರೆ ಬಿ.ಸಿ. ರಸ್ತೆಯಿಂದ ಮಂಗಳೂರಿಗೆ ಬರುವಾಗ ರಸ್ತೆಯಲ್ಲಿ ವಾಹನಗಳ ಒತ್ತಡ ಜಾಸ್ತಿಯಾಗಿರುತ್ತದೆ. ಆದುದರಿಂದ ಬಿ.ಸಿ. ರಸ್ತೆಯಿಂದ ಹತ್ತಿರ ಬೇರೆ ಕಡೆಗೆ ಒಂದು ಮಾರ್ಗ ಮಾಡಿ ಆ ರಸ್ತೆ ಉಳ್ಳಾಲಕ್ಕೆ ಬರುವಂತೆ ಮಾಡಿದರೆ ಯಾರಾದರೂ ಪ್ರವಾಸಕ್ಕೆ ಬರತಕ್ಕಂಥ ಜನ ಅಲ್ಲಿಗೆ ಬರತಕ್ಕಂಥ ವ್ಯವಸ್ಥೆ ಆಗುತ್ತದೆ ಮತ್ತು ಆ ಪ್ರದೇಶ ಪ್ರವಾಸೋದ್ಯಮ ಆಗುತ್ತದೆಂದು ಹೇಳತಕ್ಕಂಥ ಭಾವನೆಯಲ್ಲಿ ಈ ವಾಹನಗಳ ಒತ್ತಡವನ್ನು ಸಹಾ ತಡೆಗಟ್ಟುವಂತಾಗುತ್ತದೆ. ಅಲ್ಲದೆ ಉಳ್ಳಾಲದಲ್ಲಿ ಪ್ರವಾಸೋದ್ಯಮ ಮಾಡಿದರೆ ಅತ್ಯುತ್ತಮವಾದಂತಹ ಪ್ರಕೃತಿ ಸೌಂದರ್ಯ ಕಡಲಿನ ತಡಿಯಲ್ಲಿರತಕ್ಕಂಥ ಈ ಸ್ಥಳದಲ್ಲಿ ಈ ರೀತಿಯ ಒಂದು ವ್ಯವಸ್ಥೆಯಾಗಲೆಂದು ಶ್ರೀಯುತ ಶ್ರೀನಿವಾಸಮಲ್ಯರವರು ರಸ್ತೆ ಮಾಡಿದ್ದರು. ಈ ಸಂದರ್ಭದಲ್ಲಿ ಉಳ್ಳಾಲದಲ್ಲಿ ಪ್ರವಾಸೋದ್ಯಮ ಮಾಡುವುದಕ್ಕೆ ಬೇಕಾದಷ್ಟು ಹಣವನ್ನು ತೆಗೆದಿಟ್ಟಿದ್ದಾರೆ. ಆದುದರಿಂದ ಈ ವಿಚಾರವನ್ನು ಕೂಡ ನಾನು ನೆನಪಿಸಿಕೊಳ್ಳುತ್ತೇನೆ. ಇನ್ನು ಆರ್ಥಿಕ ಮಿತವ್ಯಯದ ಬಗ್ಗೆ ನಾನು ಹೇಳಿದ ಹಾಗೆ ವಿಭಾಗಾಧಿಕಾರಿಗಳನ್ನು ನಿಲ್ಲಿಸಿದ್ದಾರೆ. ಅವರ ಒಂದು ಕಛೇರಿ ಸ್ಥಗಿತವಾಗಿದೆ. ಅಸಿಸ್ಟೆಂಟ್ ಕಮಿಷನರ್ ಕಛೇರಿಯನ್ನು ನಿಲ್ಲಿಸಿದ್ದಾರೆ. ಅಲ್ಲದೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಪೋಲೀಸ್ ಇಲಾಖೆ, ಅರಣ್ಯ ಇಲಾಖೆ, ಲೋಕೋಪಯೋಗಿ ಇಲಾಖೆ ಮತ್ತು ನೀರಾವರಿ ಇಲಾಖೆಯ ಉನ್ನತ ಮತ್ತು ಹಿರಿಯ ಮಟ್ಟದಲ್ಲಿ ಅಗತ್ಯಕ್ಕಿಂತ ಹೆಚ್ಚಿರುವ ಹುದ್ದೆಗಳನ್ನು ಗುರ್ತಿಸಿ ಹುದ್ದೆಗಳನ್ನು ರದ್ದುಗೊಳಿಸುವುದು ಇದು ಬಹಳ ಪ್ರಾಶಸ್ತ್ಯವಾದ ವಿಚಾರ. ಈಗ ಏನಾಗಿವೆ ಅಂದರೆ ಲೆಕ್ಕವಿಲ್ಲದಷ್ಟು ಹುದ್ದೆಗಳಿವೆ. ಆ ಹುದ್ದೆಗಳು ಕೃಷಿ ಇಲಾಖೆಯಲ್ಲಾಗಲಿ, ಅರಣ್ಯ ಇಲಾಖೆಗಳಲ್ಲಾಗಲಿ, ಪೋಲೀಸ್ ಇಲಾಖೆಗಳಲ್ಲಾಗಲಿ, ಲೋಕೋಪಯೋಗಿ ಇಲಾಖೆಯಲ್ಲಾಗಲಿ, ನೀರಾವರಿ ಇಲಾಖೆಯಲ್ಲಾಗಲಿ ಉನ್ನತ ಮಟ್ಟದ ಬೇರೆ ಬೇರೆ ಹುದ್ದೆಗಳ ಪಟ್ಟಿಯನ್ನು ಅಚ್ಚು ಮಾಡುವುದರಿಂದ ಹೆಚ್ಚಿನ ಹಣ ಪೋಲಾಗುತ್ತದೆ ಎಂಬುದರಲ್ಲಿ ಸಂಶಯವೇ ಇಲ್ಲ. ಒಂದು ಕಡೆ ನೀರಾವರಿಗೆ ಹಣ ಕೊಟ್ಟಿಲ್ಲವೆಂದು ಹಳ್ಳಿಯ ಮಾರ್ಗಗಳನ್ನು ನಿರ್ಮಿಸುವುದಕ್ಕೆ ಹಣವಿಲ್ಲವೆಂದೂ ಮತ್ತು ಕುಡಿಯುವ ನೀರು ಕೊಡುವುದಕ್ಕೆ ಹಣವಿಲ್ಲವೆಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಹಣ ಇಲ್ಲದಿರುವ ಈ ಕಾಲದಲ್ಲಿ ಈ ರೀತಿಯ ಮಿತವ್ಯಯದ ಕಾರ್ಯಕ್ರಮ

ಒಳ್ಳೆಯದೆಂದು ನಾನು ಹೇಳುತ್ತಿದ್ದೇನೆ. ಅವನ್ನು ರದ್ದುಗೊಳಿಸತಕ್ಕಂಥ ಮತ್ತು ವಿಭಾಗಾಧಿಕಾರಿ ಮತ್ತು ವಿಭಾಗ ಮಟ್ಟದ ಹುದ್ದೆಗಳನ್ನು ರದ್ದುಗೊಳಿಸುವುದರ ಬಗ್ಗೆ ಸರ್ಕಾರ ಆಲೋಚನೆ ಮಾಡಿದೆ. ಒಂದೇ ಬಗೆಯ ಕಾರ್ಯ ಹಾಗೂ ಪಾತ್ರಗಳನ್ನು ನಿರ್ವಹಿಸುತ್ತಿರುವಂಥ ಸರ್ಕಾರದ ಕೆಲವು ನಿರ್ದೇಶನಾಲಯಗಳನ್ನು ಒಗ್ಗೂಡಿಸುವುದು. ಒಂದೇ ಕೆಲಸ ಮಾಡಬೇಕು. ಅಲ್ಲೊಂದು ಕಛೇರಿ, ಇಲ್ಲೊಂದು ಕಛೇರಿಇದ್ದು ವಿಷಯ ಒಂದೇ ಆಗಿರುತ್ತದೆ. ಇದರಿಂದ ಹಣ ಸಿಕ್ಕಾಪಟ್ಟೆ ಖರ್ಚಾಗುತ್ತದೆ. ಆದುದರಿಂದ, ಅಂತಹ ನಿರ್ದೇಶನಾಲಯಗಳನ್ನು ಒಗ್ಗೂಡಿಸಿ ಒಂದೇ ಕಡೆ ಮಾಡಿಸುವಂಥ ಕಾರ್ಯಕ್ರಮ ಮಾಡುತ್ತೇವೆಂದು ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದಾರೆ. ಇದೂಕೂಡ ಒಳ್ಳೆಯ ಅಭಿಪ್ರಾಯವಾಗಿದೆ. ಮತ್ತು ನಷ್ಟದಲ್ಲಿ ನಡೆಯುತ್ತಿರುವ, ಯಾವುದೇ ಉಪಯುಕ್ತ ಉದ್ದೇಶವನ್ನು ಈಡೇರಿಸದ ಹಲವಾರು ರಾಜ್ಯದ ಸಾರ್ವಜನಿಕ ಉದ್ದಿಮೆಗಳು, ನಿಗಮಗಳು ಮತ್ತು ಮಂಡಳಿಗಳನ್ನು ರದ್ದುಗೊಳಿಸುವುದು ಅಥವಾ ಬೇರೆ ಉದ್ದಿಮೆಗಳೊಂದಿಗೆ ಸೇರಿಸುವುದು ಅಥವಾ ಖಾಸಗೀಕರಣಗೊಳಿಸುವುದು. ಈ ರೀತಿ ಮಾಡತಕ್ಕಂಥದ್ದು ಸರಿಯಾಗಿದೆ. ಅನಾವಶ್ಯಕವಾಗಿ ಖರ್ಚು ಮಾಡತಕ್ಕಂಥ ಯಾವುದೇ ಸಾರ್ವಜನಿಕ ಉದ್ದಿಮೆಗಳು, ನಿಗಮಗಳು, ಮಂಡಳಿಗಳನ್ನು ಖಾಸಗೀಕರಣ ಮಾಡುವಂಥದ್ದು ಇಲ್ಲವೆ ಬೇರೆ ಸಂಸ್ಥೆಯೊಂದಿಗೆ ಸೇರಿಸತಕ್ಕಂಥ ಕಾರ್ಯಕ್ರಮವನ್ನು ಮಾಡುವಾಗ ಈ ಹಣ ಹೆಚ್ಚು ಖರ್ಚಾಗಿ, ಖರ್ಚಿನ ಐಟಂ ಹೆಚ್ಚಾಗುವುದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ನನಗ ಮನವರಿಕೆಯಾಗಿದೆ. ನಷ್ಟದಲ್ಲಿ ನಡೆಯುತ್ತಿರುವ ರಾಜ್ಯ ಸರ್ಕಾರದ ಉದ್ದಿಮೆಗಳು, ಅನುಗ್ರಹಪೂರ್ವಕ ಧನ ಸಂದಾಯ ಮಾಡುವುದನ್ನು ನಿಲ್ಲಿಸುವುದು ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳ ಸಿಬ್ಬಂದಿ ಘಟಕಗಳಲ್ಲಿ ಶೇಕಡ 5ರಷ್ಟು ಕಛೇರಿ ವೆಚ್ಚದಲ್ಲಿ ಶೇಕಡಾ 10 ರಷ್ಟು, ಇಂಧನ ಬಳಕೆಯಲ್ಲಿ ಶೇಕಡಾ 20 ರಷ್ಟು ಕಡಿತಗೊಳಿಸುವುದು. ರಸ್ತೆಗಳಲ್ಲಿ ವಾಹನಗಳ ಸಾಲು ಸಾಲು. ನಮ್ಮ ಮಂಗಳೂರಿನಲ್ಲಿ ಒಂದು ಆರೋಗ್ಯ ಇಲಾಖೆ ಇದೆ. ಅಲ್ಲಿಗೆ ಹೋದರೆ, ಮರದ ಬುಡದಲ್ಲಿ ಹಾಳಾದ 10-20 ವಾಹನಗಳು ನಿಂತಿರುತ್ತವೆ. ಅದೇ ರೀತಿ ಚಾಲನೆಯಲ್ಲಿರುವ 7-8 ವಾಹನಗಳಿವೆ. ಹಾಳಾಗದಂಥ ಈ ಯಂತ್ರಗಳು ಏತಕ್ಕೆ ಹಾಳಾಯಿತೆಂದು ನೋಡಿಕೊಳ್ಳತಕ್ಕಂಥವರು ಗತಿ ಇಲ್ಲವೇ?

ಅದೇ ರೀತಿಯಲ್ಲಿ ಪ್ರತಿಯೊಬ್ಬ ಕಾರ್ಯದರ್ಶಿಯವರಿಗೆ, ಉಪಕಾರ್ಯದರ್ಶಿಯವರಿಗೆ ಮತ್ತೊಬ್ಬರಿಗೆ ಒಂದೊಂದು ಜೀಪು. ನಮಗೇನು ಹೊಟ್ಟೆಕಿಚ್ಚು ಅಲ್ಲ, ಆದರೆ ಇದು ಜನತೆಯ ಹಣ ಬಡವರ ಹಣ ಎಂದು. ಈ ಜನರಿಗೆ ಹಣ ಇಲ್ಲ ಅನ್ನುವಾಗ ಈ ರೀತಿ ಮಜಾ ಮಾಡುವುದು. ಒಂದು ಜೀಪು ಇದ್ದರೆ ಇಬ್ಬರು ಮೂವರು ಕೂಡಿಕೊಂಡು ಹೋಗಬಹುದು. ನಾನು ನನ್ನ ಜೀಪಿನಲ್ಲೇ ಹೋಗಬೇಕು, ಇನ್ನೊಬ್ಬನ ಜೀಪಿನಲ್ಲಿ ನಾನು ಯಾಕೆ ಕುಳಿತುಕೊಳ್ಳಲಿ ಎಂದು ಹೇಳುವ ರೀತಿಯಲ್ಲಿ ನಡೆಯುತ್ತಿದೆ. ಆದ್ದರಿಂದ ಇಂಧನ ಬಳಕೆ ಮಾಡುವ ಕಾರ್ಯಕ್ರಮದಲ್ಲಿ ಶೇಕಡ 50ರಷ್ಟು ಕಡಿತ ಮಾಡಿದರೇ ಒಳ್ಳೆಯದಾಗುತ್ತಿತ್ತು ಎಂದು ಹೇಳುತ್ತೇನೆ. ಇವನ್ನೆಲ್ಲ 30-40 ವರ್ಷದ ಜೀವನದಲ್ಲಿ ನೋಡಿ ಬೇಜಾರಾಗಿ, ಸಭೆ ಸಮಾರಂಭಗಳಲ್ಲಿ ಹೇಳಿ ಬೇಜಾರಾಗಿ, ಇವನ್ನು ಕೇಳುವ ಮಾಡುವ ಜನ ಇಲ್ಲ ಎಂದು ಬೇಜಾರಾಗಿ ಹೀಗೇ ನಡೆಯಲಿ ಎಂದು ನಿರಾಶೆ ಹೊಂದತಕ್ಕ ಪರಿಸ್ಥಿತಿ ಬಂದಿದೆ. ಹಳ್ಳಿಯಲ್ಲಿ ಒಂದು ಮಾತು ಇದೆ. ಜಾನುವಾರು ಮುಂದೆ ನಾವು ಹೇಳಿದ ಹಾಗೆ ಹೋಗುವುದು ಇದ್ದರೆ ಅದನ್ನು ಅಟ್ಟಿಕೊಂಡು ಹೋಗಬೇಕಂತೆ, ಅದು ಕೇಳುವುದಿಲ್ಲವೆಂದರೆ ಅದು ಹೋಗುವಲ್ಲಿ ಬಿಡಬೇಕಂತೆ ಮತ್ತೆ ಅದು ಕೈಗೆ ಸಿಗುವುದಿಲ್ಲ. ಆ ರೀತಿ ನಿರಾಶೆಯಾಗುವ ರೀತಿಯಲ್ಲಿ ಬಜೆಟ್ಟಿನಲ್ಲಿ ಆಶಾದಾಯಕ ಬೆಳಕು ಕಾಣುತ್ತಾ ಉಂಟು. ರಾಜ್ಯದ ಎಲ್ಲಾ ಇಲಾಖೆಗಳ ಸಿಬ್ಬಂದಿ ಘಟಕಗಳಲ್ಲಿ ಶೇಕಡ 5ರಷ್ಟು ಕಛೇರಿ ವೆಚ್ಚದಲ್ಲಿ ಶೇಕಡ 10ರಷ್ಟು ಇಂಧನ ಬಳಕೆಯಲ್ಲಿ ಶೇಕಡ 20ರಷ್ಟು ಕಡಿತ ಮಾಡುವುದು ಒಳ್ಳೆಯ ಕಾರ್ಯಕ್ರಮ. ಬೆಂಗಳೂರು ಮಹಾನಗರ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದೊಂದಿಗೆ ವಿಲೀನಗೊಳಿಸುವುದು ಸರಿಯಿದೆ ಇದರಿಂದ ಅಲ್ಲಿ ಇಲ್ಲಿ ದರ್ಬಾರು ಮಾಡುವುದು ತಪ್ಪುತ್ತದೆ. ಅಲ್ಲಿ ಹೋದ ಜನರನ್ನು ಕೇಳುವವರು ಇಲ್ಲ. ಇದು ಮಾಡಿದರೆ ಒಳ್ಳೆಯದು ಕ್ಷೇತ್ರಾಧಿಕಾರಿಗಳು ರಾಜ್ಯ ಜಿಲ್ಲಾ ಕೇಂದ್ರ ಕಾರ್ಯ ಸ್ಥಾನಗಳಿಗೆ ಆಗಾಗ್ಗೆ ಹೋಗಿ ಬರುವುದನ್ನು ನಿಷೇಧಿಸುವುದು. ಒಬ್ಬ ದೊಡ್ಡ ಅಧಿಕಾರಿ ವಿಸಿಟ್ ಮಾಡುವುದು ವಿಸಿಟ್ ಮಾಡಿ ಬಂಗಲೆಯಲ್ಲಿ ಕುಳಿತು ಬರುವುದು. ಇದರಿಂದ ಏನು ಮಾಡಿದಂತಾಗುತ್ತದೆ. ಜನರ ಪ್ರತಿನಿಧಿಗಳು ಜನರ ಬಾಗಿಲಿಗೆ ಹೋಗುತ್ತಾರೆ, ಮನೆಗೆ ಹೋಗುತ್ತಾರೆ, ಗಲ್ಲಿಗೆ ಹೋಗುತ್ತಾರೆ ಜನರ ಕಷ್ಟಗಳನ್ನು ವಿಚಾರಿಸುತ್ತಾರೆ. ಆದರೆ ಇವರದ್ದು ಆ ರೀತಿ ಅಲ್ಲ. ಬಂಗಲೆಯಲ್ಲಿ ಫಸ್ಟ್ ಕ್ಲಾಸ್ ಸೋಫಾದಲ್ಲಿ ಕುಳಿತುಕೊಳ್ಳುವುದು. ಅಲ್ಲಿ ಹೋಗಿ. ಕುಳಿತಮೇಲೆ ಬಿಲ್ ಹೇಗಾಗುತ್ತದೆಂದು ತಮಗೆಲ್ಲ ಗೊತ್ತಿದೆ. ಇದನ್ನು ಏತಕ್ಕೆ ಹೇಳಿದೆ ಎಂದರೆ, ಇದನ್ನೆಲ್ಲ ಕಂಡುಹಿಡಿದು ಬಜೆಟ್ಟಿನಲ್ಲಿ ತೋರಿಸಿದ್ದಾರೆ. ಇದು ಸರ್ಕಾರಕ್ಕೆ ಗೊತ್ತಿದೆ. ಇಂಥದನ್ನೆಲ್ಲ ಕ್ರಮವಾಗಿ ಬಜೆಟ್ಟಿನಲ್ಲಿ ಸೇರಿಸಿದ್ದಾರೆ, ಸಂತೋಷ. "ಎಲ್ಲಾ ಉಪವಿಭಾಗೀಯ ಕಛೇರಿಗಳನ್ನು ರದ್ದು ಪಡಿಸುವುದು ಮತ್ತು ಈ ಉಪವಿಭಾಗಗಳಲ್ಲಿ ಕೆಲಸ ಮಾಡುತ್ತಿರುವ ಉಪ ವಿಭಾಗಾಧಿಕಾರಿಗಳನ್ನು ಸೂಕ್ತವಾಗ

ಬೇರೆ ಕಡೆ ನೇಮಿಸುವುದು ಮತ್ತು ಈಗ ಉಪ ವಿಭಾಗಾಧಿಕಾರಿಗಳು ಚಲಾಯಿಸುತ್ತಿರುವ ಅಧಿಕಾರಿಗಳನ್ನು ತಹಶೀಲ್ದಾರರು ದರ್ಜೆ-1 ಇವರಿಗೆ ನೀಡುವುದು. ಇದು ಸ್ವಾಗತಾರ್ಹವಾದ ವಿಚಾರ. ಅದೇ ರೀತಿಯಲ್ಲಿ ತೆರಿಗೆ ವಿಧಿಸುವಲ್ಲಿ ಕೂಡ ಚೆನ್ನಾಗಿ ಮಾಡಿದ್ದಾರೆ. ಮಾನ್ಯ ಬಂಗಾರಪ್ಪನವರು ಮೊದಲಿನಿಂದಲೂ ಸಮಾಜವಾದಿ ಜನ. ಇಂದು ಸಮಾಜವಾದದ ವಾಸನೆ ಬೇರೆ ಬೇರೆ ಕಡೆಗಳಲ್ಲಿ ಕಾಣುತ್ತಿದೆ. ಸಮಾಜವಾದದ ಕಂಪನ್ನು ಬೇರೆ ಬೇರೆ ಕಡೆಗಳಲ್ಲಿ ನೋಡುತ್ತಿದ್ದೇವೆ. ಇದರಲ್ಲಿ ಅನೇಕ ವಸ್ತುಗಳಿಗೆ ತೆರಿಗೆಯಿಂದ ವಿನಾಯಿತಿ ಕೊಟ್ಟಿದ್ದಾರೆ. ಭತ್ತ, ಅಕ್ಕಿ, ಮೀನು, ಕೋಳಿ ಗೊಬ್ಬರ, ಜೈವಿಕ ಗೊಬ್ಬರ ಸ್ಪ್ರೇಯರ್ ಡಸ್ಟರ್ ಭಾಗಗಳು-ಉಪಭಾಗಗಳು ಇತ್ಯಾದಿ ವಸ್ತುಗಳಿಗೆ ತೆರಿಗೆ ವಿನಾಯಿತಿ ನೀಡಿದ್ದಾರೆ ಇದು ಪ್ರಾಮುಖ್ಯವಾದ ವಿಚಾರ. "ಕಬ್ಬಿಗೆ ಕೊಡಬೇಕಾಗಿರುವ ಖರೀದಿ ತೆರಿಗೆ ಕಾರಣದಿಂದಾಗಿ ಕರ್ನಾಟಕ ರಾಜ್ಯದ ಹೊರಗಡೆ ಇರುವ ಸಕ್ಕರೆ ಕಾರ್ಖಾನೆಗಳಿಗೆ ತಾವು ಬೆಳೆದ ಹೆಚ್ಚುವರಿ ಕಬ್ಬಿನ ಬೆಳೆಯನ್ನು ವಿಲೆ ಮಾಡಲು ಆಗುತ್ತಿಲ್ಲವೆಂದು ಮೈಸೂರು, ಮಂಡ್ಯ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಕಬ್ಬು ಬೆಳೆಯುತ್ತಿರುವ ರೈತರಿಂದ ನನಗೆ ಹಲವಾರು ಮನವಿಗಳು ಬಂದಿವೆ. ಹೀಗೆ ರೈತರಿಗೆ ಪರಿಹಾರ ಕ್ರಮವಾಗಿ ರಫ್ತು ಉದ್ದೇಶಕ್ಕಾಗಿ ಮಾತ್ರವೇ ಇರುವ ಕಬ್ಬಿನ ಮೇಲಿನ ಖರೀದಿ ತೆರಿಗೆ ವಿನಾಯಿತಿ ನೀಡಲು ಉದ್ದೇಶಿಸಿದ್ದೇನೆ." ಎಂದು ಹೇಳಿದ್ದಾರೆ.

ಉಪಾಧ್ಯಕ್ಷೀಣಿಯವರು- ಅದನ್ನೆಲ್ಲ ಅರ್ಥ ಸಚಿವರು ಓದಿದ್ದಾರೆ. ನೀವು ಏನಾದರೂ ಇದ್ದರೆ ಹೇಳಿ. ಈಗಾಗಲೇ ಒಂದು ಗಂಟೆ ತೆಗೆದುಕೊಂಡಿದ್ದೀರಿ, ಇನ್ನು 5 ನಿಮಿಷದಲ್ಲಿ ಮುಗಿಸಿ.

ಶ್ರೀ ಬಿ. ಎಂ. ಇದಿನಬ್ಬ- ಇದು ಬಹಳ ಉಪಯುಕ್ತವಾದುದು. ಪ್ರತಿಯೊಂದು ವಸ್ತುವಿನ ಮೇಲೂ ತೆರಿಗೆ ಇತ್ತು, ಆ ತೆರಿಗೆಯನ್ನು ರದ್ದು ಮಾಡಿದ್ದೇವೆಂದು ಹೇಳುವುದು ಒಳ್ಳೆಯ ಕಾರ್ಯಕ್ರಮ. ಆ ಪ್ರಕಾರ ಬಜೆಟ್ಟಿನಲ್ಲಿ ಸೂಚಿಸಿ ವಿನಾಯಿತಿ ನೀಡಿದ್ದಾರೆ. ಟೀಕೆ ಮಾಡುವವರು ಇದನ್ನೆಲ್ಲ ಹೇಳುವುದಿಲ್ಲ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ. 'ಅದರಕ್ಕೆ ಕಹಿಯಾದರೆ ಉದರಕ್ಕೆ ಸಿಹಿ' ನಾನು ಹೇಳುವುದು. ಅಂಥ ವಿಚಾರಗಳನ್ನು ಹೇಳುತ್ತಿದ್ದೇನೆ. ಟೀಕೆ ಮಾಡುವವರು, ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು ಸಿಗುವ ಹಾಗೆ ತಪ್ಪುಗಳನ್ನು ಹುಡುಕುತ್ತಾರೆ. ಬಜೆಟ್ಟಿನಲ್ಲಿ ಇದ್ದುದನ್ನು ಈ ದೇಶಕ್ಕೆ, ನಾಡಿಗೆ ಆಗತಕ್ಕ ನ್ಯಾಯವನ್ನು, ಸತ್ಯವನ್ನು ಹೇಳುತ್ತಿದ್ದಾರೆ. ಸತ್ಯವಾದುದರಿಂದ ಇದುದ್ದು ಇದ್ದಹಾಗೆ ಹೇಳುವುದರಿಂದ ನಿರಾಶ ಎಂದು ಕಂಡರೂ ಅದು ಬಹಳ ಪವಿತ್ರವಾದುದು ಎಂದು ಹೇಳುತ್ತಿದ್ದೇನೆ. ಅನೇಕ ವಸ್ತುಗಳಿಗೆ ಇವತ್ತಿನ ದಿವಸ ತೆರಿಗೆಯಿಂದ ವಿನಾಯಿತಿ ನೀಡಿದ್ದಾರೆ ಎಳೆನೀರು, ಮೊಂಬತ್ತಿ ಇತ್ಯಾದಿ ವಸ್ತುಗಳಿಗೆಲ್ಲ ತೆರಿಗೆ ಕಡಿಮೆ ಮಾಡಿದ್ದಾರೆ. ಇದೆಲ್ಲ ಪುಸ್ತಕದಲ್ಲಿದ್ದರೂ ಹೇಳಬೇಕಲ್ಲ. ಇಲ್ಲದಿದ್ದರೆ ಯಾವುದಕ್ಕೆ ಕಡಿಮೆ ಮಾಡಿದ್ದಾರೆಂದು ಗೊತ್ತಾಗುವುದು ಹೇಗೆ?

## 1.15 ಪಿ.ಎಂ.

ಇದು ಜನತೆಗೆ ಗೊತ್ತಾಗಬೇಕು. ಈ ಪುಸ್ತಕ ಜನತೆಗೆ ಹೋಗುವುದಿಲ್ಲ. ತಮ್ಮ ಅಪ್ಪಣೆ ಪಡೆದು ನಾನು ಮಾತನಾಡುತ್ತೇನೆ. ಜನರಿಗೆ ಈ ವಿಷಯ ಗೊತ್ತಾಗಲಿ. ಮೂಲೆ ಮೂಲೆಗೆ ಗೊತ್ತಾಗಲಿ. ಎಳನೀರು, ಮೊಂಬತ್ತಿ, ಕ್ರಿಮಿಘ್ನದ ಕಾರ್ಪೆಟ್‌ಗಳು, ಕನ್ನಡಕಗಳು ಬಾಲ್‌ಪಾಯಿಂಟ್ ಪೆನ್ ರೀಫಿಲ್‌ಗಳು ಇಂಥ ಅನೇಕ ವಸ್ತುಗಳಿಗೆ ವಿನಾಯಿತಿ ಮಾಡಿದ್ದಾರೆ. ಅದೇ ರೀತಿಯಲ್ಲಿ ಮಾರ್ಪಾಡು ಮಾಡಿದ್ದಾರೆ. ಅದೇ ರೀತಿಯಲ್ಲಿ ಕನ್ನಡದಲ್ಲಿ ಕುವೆಂಪು ಇಂಥ ದೊಡ್ಡ ದೊಡ್ಡ ಮನುಷ್ಯರ ಹುಟ್ಟಿದ ಸ್ಥಳಗಳನ್ನು ಒಳ್ಳೆಯ ಸ್ಮಾರಕವಾಗಿ ಮಾಡಬೇಕೆಂದು ಕೂಡ ಇದರಲ್ಲಿ ಹೇಳಿದ್ದಾರೆ. ಆದ್ದರಿಂದ ಈ ರೀತಿಯಲ್ಲಿ ಈ ... ಬಜೆಟ್ 125 ಪುಟಗಳ ಅಗಾಧವಾದ ದೊಡ್ಡ ಗ್ರಂಥದಹಾಗೆ ಇರತಕ್ಕ ಈ ಭಾಷಣ ಜನಸಾಮಾನ್ಯರಿಗೆ ನಿಜವಾಗಿಯೂ ಯಾವರೀತಿಯ ತೊಂದರೆಯನ್ನು ಮಾಡದೆ ಉಪಕಾರವನ್ನು ಮಾಡಿದೆ. ಮತ್ತು ಅನೇಕ ಹೊಸ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡು ನಾಡಿಗೆ ವಿಶ್ವ, ಆರಾಧನ, ಅಕ್ಷಯ ಇಂಥ ಕಾರ್ಯಕ್ರಮಗಳಿಂದ ಇನ್ನು ಎರಡು ಮೂರು ವರ್ಷಗಳಲ್ಲಿ ಒಳ್ಳೆಯ ಫಲ ಸಿಗತಕ್ಕ ವ್ಯವಸ್ಥೆಯನ್ನು ಬಜೆಟ್‌ನಲ್ಲಿ ಹೇಳಿದ್ದಾರೆ. ಆದ್ದರಿಂದ ಈ ಬಜೆಟ್ ಒಂದು ಅಭ್ಯುದಯದ ಬಜೆಟ್. ಇದರಿಂದ ನಾವು ಒಳ್ಳೆಯನ್ನು ಅಪೇಕ್ಷಿಸಬಹುದು ಎಂದು ಹೇಳಿ ಇಂಥ ಒಂದು ಒಳ್ಳೆಯ, ನಾನು ಮೊದಲೇ ಹೇಳಿದ ಸಮಾಜವಾದಿ ರೂಪದಲ್ಲಿ ಒಂದು ರೀತಿಯ ಸುವಾಸನೆ ಕೊಡತಕ್ಕ ಬಜೆಟ್ ಎಂದು, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ವರದಿಯನ್ನೊಪ್ಪಿಸುವುದು

ಶ್ರೀ ಡಿ. ಪಲಗೇಗೌಡ:-(ಅಧ್ಯಕ್ಷರು, ಸಭೆಯ ಮುಂದಿಡಲಾದ ಕಾಗದಪತ್ರಗಳ ಪರಿಶೀಲನಾ ಸಮಿತಿ)

ಸಭಾಧ್ಯಕ್ಷರೆ, ಸಭೆಯ ಮುಂದಿಡಲಾದ ಕಾಗದಪತ್ರಗಳ ಪರಿಶೀಲನಾ ಸಮಿತಿಯ 10ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು:- ಸಭೆಯ ಮಂದಿಡಲಾಗಿದೆ. ಈಗ ಡಾಕ್ಟರ್ ನಂಜಪ್ಪನವರೇ ತಾವು ಮಾತನಾಡಿ.

## 1992-93 ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

ಡಾಕ್ಟರ್ ಎನ್. ಬಿ. ನಂಜಪ್ಪ:-(ಶ್ರವಣಬೆಳಗೊಳ)

ಮಾನ್ಯ ಅಧ್ಯಕ್ಷಿಣಿಯವರೆ, 1992-93 ನೇ ಆಯವ್ಯಯ ಪತ್ರದ ಮಂಡನೆ ಆದಮೇಲೆ ಪ್ರಪ್ರಥಮವಾಗಿ ಮಾನ್ಯ ಮಿತ್ರರಾದ ಇಟಿನಬ್ಬ ಅವರು ಪ್ರಾರಂಭ ಮಾಡಿ 1992-93 ನೇ ಆಯವ್ಯಯದ ಖರ್ಚು-ವೆಚ್ಚಗಳು ಹೇಗಿದೆ, ಇದರಲ್ಲಿ ಜನತೆಗೆ, ಕರ್ನಾಟಕ ರಾಜ್ಯದ ಜನತೆಗೆ ಅನುಕೂಲವಾಗುತ್ತದೆಯೇ, ಕರ್ನಾಟಕ ರಾಜ್ಯದ ಆರ್ಥಿಕ ಮುನ್ನಡೆಗೆ ಈ ವರ್ಷದ ಈ ಆಯವ್ಯಯ ಪತ್ರ ಸಹಾಯ ಮಾಡುತ್ತದೆಯೇ ಎನ್ನುವುದರ ಬಗ್ಗೆ ನಾವುಗಳು ಚಿಂತನೆ ಮಾಡಬೇಕಾಗಿದೆ. ಈ ಚಿಂತನೆ ಮಾಡತಕ್ಕ ಸಮಯದಲ್ಲಿ ಇದರಲ್ಲಿ ಅಡಗಿರತಕ್ಕ ಬಹಳ ಮುಖ್ಯ ಅಂಶಗಳು ಯಾವುವು ಇದನ್ನು ಆಯವ್ಯಯ ಪತ್ರ ಮಾಡತಕ್ಕ ಸಂದರ್ಭದಲ್ಲಿ ನಮ್ಮ ಆರ್ಥಿಕ ಮಂತ್ರಿಗಳು ನಿಜವಾಗಿಯೂ ಕರ್ನಾಟಕ ರಾಜ್ಯದ ಬಹುಮುಖ್ಯವಾಗಿ ಇರತಕ್ಕ ಸಮಸ್ಯೆಗಳಿಗೆ ಹೆಚ್ಚಿಗೆ ಗಮನವನ್ನು ಹರಿಸಿದ್ದಾರೆಯೇ ಎನ್ನುವುದರ ಬಗ್ಗೆ ನಾವು ಚಿಂತನೆಯನ್ನು ಮಾಡಬೇಕಾಗಿದೆ. ಇದನ್ನು ಮಾಡತಕ್ಕ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷಿಣಿಯವರೆ, 1992-93 ನೇ ವರ್ಷದ ವಲಯವಾರು ರಾಜ್ಯದ ಯೋಜನೆ ಹಂಚಿಕೆಯಲ್ಲಿ ನಾವು ಗಮನವನ್ನು ಹರಿಸಿದಾಗ ಮೊದಲನೇ ಪ್ರಾಮುಖ್ಯತೆಯನ್ನು ವಿದ್ಯುಚ್ಛಕ್ತಿಗೆ ಕೊಟ್ಟಿದ್ದಾರೆ. ಒಟ್ಟು ಬಜೆಟ್ಟಿನ 22.95 ಪರ್ಸೆಂಟೇಜನ್ನು ಇದಕ್ಕೆ ಕೊಟ್ಟು 495 ಕೋಟಿ 57 ಲಕ್ಷ ರೂಪಾಯಿಗಳನ್ನು ವಿದ್ಯುಚ್ಛಕ್ತಿಗೆ ಕೊಟ್ಟಿದ್ದಾರೆ. ಅದೇ ರೀತಿ ನೀರಾವರಿ ಮತ್ತು ಪ್ರವಾಹ ನಿಯಂತ್ರಣಕ್ಕೆ 2 ನೇ ಸ್ಥಾನವನ್ನು ಕೊಟ್ಟಿದ್ದಾರೆ. 3ನೇ ಸ್ಥಾನವನ್ನು ನೀರು ಸರಬರಾಜು ಮತ್ತು ವಸತಿ, ನಗರಾಭಿವೃದ್ಧಿಗೆ ಕೊಟ್ಟಿದ್ದಾರೆ. 4ನೇ ಸ್ಥಾನವನ್ನು ಕೃಷಿ ಮತ್ತು ಕೃಷಿಗೆ ಸಂಬಂಧಪಟ್ಟ ಸೇವೆಗಳಿಗೆ ಕೊಟ್ಟಿದ್ದಾರೆ. ಅಂದ ಮೇಲೆ ಕರ್ನಾಟಕ ರಾಜ್ಯದಲ್ಲಿ ಇವತ್ತು ಇರತಕ್ಕ ವಿದ್ಯುಚ್ಛಕ್ತಿ ಪರಿಸ್ಥಿತಿಯನ್ನು ಅರ್ಥ ಮಂತ್ರಿಗಳು ಸರಿಯಾಗಿ ಅರ್ಥ ಮಾಡಿಕೊಂಡಿದ್ದಾರೆ. ಇವತ್ತು ಬಹಳ ಮುಖ್ಯವಾಗಿ ವಿದ್ಯುತ್ ಅಭಾವದಿಂದ ಎಷ್ಟು ತೊಂದರೆಯಾಗಿದೆ, ವ್ಯವಸಾಯಕ್ಕೆ ಎಷ್ಟು ತೊಂದರೆಯಾಗಿದೆ, ಕೃಷಿಗೆ ಎಷ್ಟು ತೊಂದರೆಯಾಗಿದೆ. ಕರ್ನಾಟಕ ರಾಜ್ಯದಲ್ಲಿ ಇವತ್ತಿನ ದಿವಸ ಉತ್ಪತ್ತಿ ಆಗತಕ್ಕ ಆಹಾರ ಮತ್ತು ಕಾರ್ಖಾನೆಗಳಿಂದ ಹೊರಬರತಕ್ಕ ಸಾಮಾನುಗಳಿಗೆ ಹೇಗೆ ತೊಂದರೆಯಾಗಿದೆ, ಅದರಲ್ಲೂ ಬಹಳಷ್ಟು ತೊಂದರೆ ಆಗುವುದರ ಜೊತೆಗೆ ಅದರ ಸರ್ವನಾಶ ಆಗತಕ್ಕ ಒಂದು ಸ್ಥಿತಿಯನ್ನು ಮುಟ್ಟಿದ್ದೇವೆ ಎನ್ನುವುದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಇವನ್ನು ಯೋಚನೆ ಮಾಡಿದಾಗ, ಮಾನ್ಯ ಅಧ್ಯಕ್ಷಿಣಿಯವರೇ ಕೋಜಿ ಬಗ್ಗೆ ಈ ಸದನದಲ್ಲಿ ಮಾನ್ಯ ಸದಸ್ಯರು ಎಲ್ಲರೂ ಚರ್ಚೆ ಮಾಡಿದ್ದಾರೆ. ಕೋಜಿಯಲ್ಲಿ ಒಟ್ಟು ಉತ್ಪಾದನೆ ಕಳೆದ 7-8 ವರ್ಷಗಳ ಹಿಂದು ಎಷ್ಟು ಇತ್ತೋ ಅಷ್ಟೇ ಉತ್ಪಾದನೆಯಲ್ಲಿ ಸ್ಥಗಿತಗೊಂಡಿದ್ದು ಅಷ್ಟೇ ಉತ್ಪಾದನೆ ಆಗುತ್ತಾ ಬಂದಿದೆ. ಅದನ್ನು ಈಗ ಜಾಸ್ತಿ ಮಾಡಬೇಕಾದರೆ ಈಗ ಅನೇಕ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ ಎಂದರೆ ತಪ್ಪಾಗಲಾರದು. ಈಗ ಇಲ್ಲಿ ನಮೂದು ಮಾಡಿರುವ ಪ್ರಕಾರ ನಾಲ್ಕು ಹೈಡಲ್ ಪ್ರಾಜೆಕ್ಟ್‌ಗಳನ್ನು ಹಾಕಬೇಕೆಂದು ಬಜೆಟ್‌ನಲ್ಲಿ ಇದೆ. 3 ಥರ್ಮಲ್ ಪ್ರಾಜೆಕ್ಟ್‌ಗಳನ್ನು ಹೊಸದಾಗಿ ಮಾಡಬೇಕೆಂಬ ಉದ್ದೇಶ ಇದೆ. 4 ಡೀಸಲ್ ಪವರ್ ಸ್ಟೇಷನ್‌ಗಳನ್ನು ಮಾಡುವ ಉದ್ದೇಶ ಇದೆ. ಈ ಎಲ್ಲಾ ಉದ್ದೇಶಗಳನ್ನು ಇಟ್ಟುಕೊಂಡು ವಿದ್ಯುಚ್ಛಕ್ತಿಗೆ ಮೊದಲನೆಯ ಸ್ಥಾನವನ್ನು ಕೊಟ್ಟಿದ್ದೇವೆ ಎನ್ನುವುದಕ್ಕೆ ನಾನು ಇಷ್ಟಪಡುತ್ತೇನೆ. ಆದ್ದರಿಂದ ಸುಮಾರು 495.57 ಕೋಟಿ ರೂಪಾಯಿಗಳನ್ನು ವಿದ್ಯುತ್‌ಗೆ ಕೊಟ್ಟಿದ್ದೇವೆ. ಇನ್ನು ಎರಡನೆಯದಾಗಿ, ನೀರಾವರಿ ಕಾಮಗಾರಿ ಹಾಗೂ ಪ್ರವಾಹ ನಿಯಂತ್ರಣ. ನೀರಾವರಿ ಎಷ್ಟು ಮುಖ್ಯ ಎಂದರೆ, ಅದೂ ಕಾವೇರಿ ನೀರಿನ ವಿವಾದ ಬಂದಮೇಲೆ ನೀರಿನ ಪ್ರಾಮುಖ್ಯತೆ ಎಷ್ಟು ಎಂಬುದು ಕರ್ನಾಟಕ ರಾಜ್ಯದ ಪ್ರತಿಯೊಬ್ಬರಿಗೂ ಗೊತ್ತಾಗಿದೆ. ಇದು ಸರ್ಕಾರಕ್ಕೆ ಕೂಡ ಮನದಟ್ಟಾಗಿದೆ ಎಂದು ತಿಳಿದುಕೊಂಡಿದ್ದೇನೆ. ಈ ನೀರಾವರಿ ಬಗ್ಗೆ ನಾವು ಮೊದಲೇ ಸುಮಾರು 10-20 ವರ್ಷಗಳಿಂದ ಬಹಳ ಗಮನ ಹರಿಸಿದ್ದರೆ ನಾವು ಇಂತಹ ಒಂದು ಸ್ಥಿತಿಗೆ ತಲುಪುತ್ತಾ ಇರಲಿಲ್ಲ. ಇವತ್ತಿನ ದಿವಸ ಬಹಳ ಚಿಂತನೆ ಮಾಡಿ ಆರ್ಥಿಕ ವ್ಯವಸ್ಥೆಯಲ್ಲಿ ಬಹಳ ಕಷ್ಟ ಇದ್ದರೂ ಕೂಡ ಇವತ್ತು ಇದಕ್ಕೆ 2ನೇ ಸ್ಥಾನವನ್ನು ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರ ಇವತ್ತು ಮಾಡಿದೆ ಎನ್ನುವುದರಲ್ಲಿ ಯಾವ ಅನುಮಾನ ಇಲ್ಲ ಎಂದು ಅನ್ನಿಸುತ್ತದೆ. ಏನು ನಾವು 30.48 ಲಕ್ಷ ಹೆಕ್ಟೇರನ್ನು ನೀರಾವರಿಯನ್ನಾಗಿ ಮಾಡುವುದಕ್ಕೆ ಮತ್ತೆ 31.48 ಲಕ್ಷ ಎಕರೆಯನ್ನು ಮಾಡತಕ್ಕ ಅಂದಾಜು ಇಟ್ಟುಕೊಂಡಿದ್ದೇವೋ ಅದನ್ನು ನಾವು ಮಾಡಬೇಕಾದರೆ ಅದಕ್ಕೆ ಹಣವನ್ನು

ಹೆಚ್ಚು ಒದಗಿಸಲೇಬೇಕು. ಆದ್ದರಿಂದ ಅರ್ಥ ಮಂತ್ರಿಗಳು ಇದರ ಬಗ್ಗೆ ದೀರ್ಘವಾಗಿ ಯೋಚನೆ ಮಾಡಿ ಇದಕ್ಕೆ 2ನೇ ಸ್ಥಾನವನ್ನು ಕೊಟ್ಟಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನೀರಾವರಿ ಬಗ್ಗೆ ನಾವು ಹಿಂದೆ ಎಲ್ಲಾ ವರ್ಷಗಳಲ್ಲಿ ನಾವು ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆಂದು ಯೋಚನೆ ಮಾಡಿದರೆ ಈ ಸಾರಿ ಕೊಟ್ಟಿರತಕ್ಕ ಹಣ ಬಹಳ ಜಾಸ್ತಿ ಇದೆ. ಅದರಲ್ಲೂ ಶೇಕಡವಾರು ಕೂಡ ಜಾಸ್ತಿ ಆಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. 349.85 ಕೋಟಿ ರೂಪಾಯಿಗಳನ್ನು ಇವತ್ತಿನ ದಿವಸ ನೀರಾವರಿಗೋಸ್ಕರ ಒದಗಿಸಲಾಗಿದೆ.

ಅಂದ ಮೇಲೆ ವಿದ್ಯುಚ್ಛಕ್ತಿ ಮತ್ತು ನೀರಾವರಿ ಯೋಜನೆಗಳು ಎರಡೂ ಕೂಡ ರೈತನಿಗೆ ಸಂಬಂಧಪಟ್ಟ ವಿಷಯವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದು ಕಡೆ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿ ಬೇಕಾದರೂ ಕೂಡ ಇವತ್ತು ರೈತ ವಿದ್ಯುತ್ತನ್ನು ವ್ಯವಸಾಯಕ್ಕೆ ಉಪಯೋಗಿಸುವುದರಿಂದ ರೈತನಿಗೆ ಅದರಿಂದ ಸಹಾಯವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. 182 ಕೋಟಿ 47 ಲಕ್ಷ ರೂಪಾಯಿಗಳನ್ನು ಕೃಷಿಗೆ ಕೊಟ್ಟಿದ್ದಾರೆ. ಕೃಷಿ, ವಿದ್ಯುಚ್ಛಕ್ತಿ ನೀರಾವರಿ ಮತ್ತು ಕೃಷಿ ಉತ್ಪಾದನೆಗೆ ಕೊಟ್ಟಿರತಕ್ಕದ್ದು ಈ ಮೂರನ್ನು ಸೇರಿಸಿದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಆಹಾರ ಉತ್ಪಾದನೆಗೆ ಮತ್ತು ರೈತನಿಗೆ ಸಹಾಯ ಮಾಡತಕ್ಕ ಒಂದು ದಿಟ್ಟಹೆಜ್ಜೆಯನ್ನು ಈ ಸರ್ಕಾರ ಇಟ್ಟಿದೆಯೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಮೂರು ರೈತನಿಗೆ ಸಹಾಯ ಮಾಡತಕ್ಕ ದೊಡ್ಡ ಯೋಜನೆಗಳೆಂದು ಕರೆದರೂ ಕೂಡಾ ತಪ್ಪಾಗಲಾರದು. ಮಾನ್ಯ ಉಪಾಧ್ಯಕ್ಷರೆಯವರೇ, ಈ ಯೋಜನೆಗಳನ್ನು ಮಾಡಿದ ಮೇಲೆ ವಿದ್ಯುಚ್ಛಕ್ತಿ ನೀರಾವರಿ, ಕೃಷಿ ಇವುಗಳು ಆದಮೇಲೆ ನಾವು ಯಾವುದಕ್ಕೆ ಜಾಸ್ತಿ ಆದ್ಯತೆಯನ್ನು ಕೊಡಬೇಕು? ವಿದ್ಯಾಭ್ಯಾಸಕ್ಕೆ ಆದ್ಯತೆಯನ್ನು ಕೊಡಬೇಕಾಗುತ್ತದೆ. ಆ ವಿದ್ಯಾಭ್ಯಾಸಕ್ಕೆ ಆದ್ಯತೆಯನ್ನು ಕೊಡತಕ್ಕ ಸಂದರ್ಭದಲ್ಲಿ ಸರ್ಕಾರ ಹಿಂದೆ ಬಿದ್ದಿಲ್ಲವೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶಿಕ್ಷಣಕ್ಕೆ ಸರ್ಕಾರ 205ಕೋಟಿ 46ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಶೇಕಡವಾರು ತೆಗೆದುಕೊಂಡರೆ ವಿದ್ಯುಚ್ಛಕ್ತಿಗೆ ಡಬ್ಬಲ್ ಆಗಿದೆ. 22.95 ಪರ್ಸೆಂಟ್ ಇದೆ. ನೀರಾವರಿಗೆ ಶೇಕಡ 16.21, ವಿದ್ಯಾಭ್ಯಾಸಕ್ಕೆ 9.52 ರಷ್ಟು ಹಣವನ್ನು ಇಡಲಾಗಿದೆ. ಅಂದಮೇಲೆ ವಿದ್ಯಾಭ್ಯಾಸಕ್ಕೂ ಕೂಡ ನಮ್ಮ ಸರ್ಕಾರ ಹೆಚ್ಚು ಗಮನ ಹರಿಸಿದೆ ಇದರಲ್ಲಿ ಹೇಳಿದಂತೆ ವಿದ್ಯಾಭ್ಯಾಸಕ್ಕೆ ಕೊಟ್ಟಿರತಕ್ಕದ್ದು ಮತ್ತು ಯೋಜನೆಗಳನ್ನು ಹಾಕಿರತಕ್ಕದ್ದು ಎಲ್ಲ ಡೀಟೈಲ್ಸ್ ಈ ಪುಸ್ತಕದಲ್ಲಿದೆ ಅದನ್ನು ನಾನು ಓದುವುದಕ್ಕೆ ಇಷ್ಟಪಡುವುದಿಲ್ಲ. ಆದರೂ ನಾನಾದರೂ ಕೂಡ ಈ ಸಂದರ್ಭದಲ್ಲಿ ಈ ಆಯವ್ಯಯದ ಬಗ್ಗೆ ಗಮನಹರಿಸಿದಾಗ ಅತಿ ಮುಖ್ಯವಾಗಿ ನಾಲ್ಕು ಇಲಾಖೆಗಳಿಗೆ ಸರ್ಕಾರ ಬಹಳಷ್ಟು ಗಮನಹರಿಸಿದೆ. ಗಮನಹರಿಸಿ ಕೆಲಸವನ್ನು ಮಾಡಿದಾಗ ಈ ದೇಶದ ನಮ್ಮ ಕರ್ನಾಟಕ ರಾಜ್ಯದ ಆರ್ಥಿಕ ಅಭಿವೃದ್ಧಿಯ ಬಗ್ಗೆ ಮತ್ತು ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಸರ್ಕಾರ ಕೊಟ್ಟಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಗ್ರಾಮೀಣಾಭಿವೃದ್ಧಿಗೆ 91 ಕೋಟಿ 81 ಲಕ್ಷ ರೂಪಾಯಿಗಳನ್ನು ನಿಗದಿಮಾಡಲಾಗಿದೆ. ಗ್ರಾಮೀಣಾಭಿವೃದ್ಧಿಗೆ ನಿಗದಿ ಮಾಡಿರತಕ್ಕ ಹಣದಲ್ಲಿ ಕುಡಿಯುವ ನೀರಿಗಾಗಿ ಬೇರೆ ಹಣವನ್ನು ಒದಗಿಸಲಾಗಿದೆ. ಅಂದಮೇಲೆ ಗ್ರಾಮೀಣಾಭಿವೃದ್ಧಿ ಮತ್ತು ಸ್ಯಾನಿಟೇಶನ್ ವಾಟರ್‌ಸಪ್ಲೈ ಇಷ್ಟನ್ನು ಸೇರಿಸಿದರೆ ನಮ್ಮ ಹಳ್ಳಿಗಳನ್ನು ಉದ್ಧಾರ ಮಾಡತಕ್ಕ ಕೆಲಸ ಏನಿದೆ ಅದೂ ಕೂಡ ಇದರಲ್ಲಿದೆಯೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಸಂದರ್ಭದಲ್ಲಿ 1992-93 ನೇ ವರ್ಷಕ್ಕೆ ಯೋಜನಾ ಆಯೋಗದಲ್ಲಿ 1915 ಕೋಟಿ ರೂಪಾಯಿಗಳನ್ನು ಒದಗಿಸಿದೆ. 1992-93 ಕ್ಕೆ ನಮ್ಮ ರಾಜ್ಯದ ಯೋಜನೆ 2150 ಕೋಟಿ 80 ಲಕ್ಷ ರೂಪಾಯಿ ಆಗಿರತಕ್ಕ ಸಂದರ್ಭದಲ್ಲಿ ನಾವು ಯೋಚನೆ ಮಾಡಬೇಕಾದ್ದು ನಾವು ಹಿಂದಿನ ಅನೇಕ ವರ್ಷಗಳ ನಮ್ಮ ಬಜೆಟ್‌ನ್ನು ದೇಶದ ಅಭಿವೃದ್ಧಿಗೋಸ್ಕರ ಖರ್ಚು ಮಾಡತಕ್ಕ ಸಂದರ್ಭದಲ್ಲಿ ಯಾವ ರೀತಿ ಮಾಡಿದ್ದೇವೆ ಈಗ ಯಾವ ಸ್ಥಿತಿಯಲ್ಲಿದ್ದೇವೆಂದರೆ ನಾವು ಮೇಲೆ ಹೋಗಿದ್ದೇವೆ. ಹಿಂದೆ ತಳಗಡೆ ಇದ್ದೆವು ಎನ್ನುವ ಬಗ್ಗೆ ನಾವು ಯೋಚನೆ ಮಾಡುವುದು ಒಳ್ಳೆಯದು ಎನ್ನುವ ಮಾತನ್ನು ಹೇಳುತ್ತೇನೆ. 1986 ರಿಂದ 1992 ರವರೆಗೆ ಪ್ರತಿ ವರ್ಷ.... ಬಜೆಟ್ ಹೆಚ್ಚುತ್ತಲೇ ಹೋಗಿದೆ. ಆದರೆ 1986 ರಲ್ಲಿ ಕೇವಲ 651 ಕೋಟಿ ರೂಪಾಯಿ ಇದ್ದದ್ದು 1991-92 ರಲ್ಲಿ 1558 ಕೋಟಿ ರೂಪಾಯಿಗಳು ಆಗಿತ್ತು. ಈ ವರ್ಷ 1915 ಕೋಟಿ ರೂಪಾಯಿಗಳಾಗಿ ಅದರಲ್ಲಿ 38.6 ಪರ್ಸೆಂಟ್ ಜಾಸ್ತಿಯಾಗಿದೆ ಎನ್ನುವುದನ್ನು ನಾವು ಎಲ್ಲರೂ ಕೂಡ ಗಮನದಲ್ಲಿಟ್ಟುಕೊಳ್ಳಬೇಕು. 36.6 ಪರ್ಸೆಂಟ್ ಕಳೆದ ವರ್ಷ ಇದ್ದದ್ದು, ಈ ವರ್ಷ ಟೋಟಲ್ 38.6ಪರ್ಸೆಂಟ್ ಎಂದರೆ ಕಳೆದವರ್ಷಕ್ಕಿಂತ ನಾವು 2ಪರ್ಸೆಂಟ್ ಜಾಸ್ತಿ ಹಣವನ್ನು ಒದಗಿಸಿಕೊಂಡಿದ್ದೇವೆ. ಇದರ ಜೊತೆಗೆ 2158.84 ಲಕ್ಷ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ಸಂದರ್ಭದಲ್ಲಿ 38.6ರಷ್ಟು ಹೆಚ್ಚಾಗಿದೆ.

ಈ ಮಾತನ್ನು ಕೂಡ ನಾವು ಗಮನದಲ್ಲಿಟ್ಟುಕೊಳ್ಳಬೇಕು. ಅದರ ಜೊತೆಗೆ ಇಡೀ ಭರತಖಂಡದಲ್ಲಿ 1992-93 ರಲ್ಲಿ 22 ರಾಜ್ಯಗಳ ಒಟ್ಟು ಯೋಜನಾ ವೆಚ್ಚದಲ್ಲಿ ಕರ್ನಾಟಕದ ಪಾಲು 7ನೇ ಯೋಜನೆಯ ಅವಧಿಯಲ್ಲಿದ್ದ ಶೇಕಡಾ 4.4ಕ್ಕೆ ಪ್ರತಿಯಾಗಿ ಶೇಕಡಾ 7.1 ಕ್ಕೆ ಏರಿದೆ. ಅಂದ ಮೇಲೆ ಇಂಡಿಯಾ ದೇಶದಲ್ಲಿ ಎಲ್ಲಾ ರಾಜ್ಯಗಳ ಬಜೆಟ್‌ಗೆ ಹೋಲಿಸಿದರೆ ಕೂಡ ನಾವು ಇವತ್ತು ಉತ್ತಮ ಸ್ಥಿತಿಯಲ್ಲಿದ್ದೇವೆ ಮತ್ತು ನಾವು ಈ ಒಂದು ರಾಜ್ಯಗಳ ಶ್ರೇಣಿಯಲ್ಲಿ ಮೊದಲಿಗರಾಗಿದ್ದೇವೆ ಎನ್ನುವ ಮಾತನ್ನು ಕೂಡ ಗಮನದಲ್ಲಿಟ್ಟುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಈಗಾಗಲೇ ಹೇಳಿರುವಂತೆ ಅನೇಕ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಹಮ್ಮಿಕೊಂಡಿದೆ. ಈ ಕಾರ್ಯಕ್ರಮಗಳ ಬಗ್ಗೆ ಸಾಕಾದಷ್ಟು ಅನೇಕ ಜನ ಮಾನ್ಯ ಸದಸ್ಯರುಗಳು ಈಗಾಗಲೇ ಮಾತನಾಡಿದ್ದಾರೆ. ಅವರಲ್ಲಿ ಅಕ್ಷಯ, ಆರಾಧನಾ, ಶುಶ್ರೂಷಾ, ಶಿಕ್ಷ, ಈ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅದಕ್ಕೆ ಸಾಕಾದಷ್ಟು ಹಣವನ್ನು ಈ ಆಯವ್ಯಯದಲ್ಲಿ ಒದಗಿಸಿದ್ದು, ಇದು ಏನೊಂದು ರೂರಲ್ ಡೆವಲಪ್‌ಮೆಂಟ್ ಇದೆ, ಇದಕ್ಕೆ ಇದರಿಂದ ಬಹಳಷ್ಟು ಅನುಕೂಲವಾಗುತ್ತದೆ. ಅಲ್ಲದೆ ಒಂದು ಹೊಸ ಚೈತನ್ಯವನ್ನು, ಒಂದು ಹೊಸ ಮಾರ್ಗವನ್ನು ಇದು ತೋರಿಸಿಕೊಟ್ಟಿದೆ ಎಂದು ಹೇಳಿದರೂ ಕೂಡ ತಪ್ಪಾಗುವುದಿಲ್ಲ. ಈ ಕಾರ್ಯವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಸರ್ಕಾರ ಹಣವನ್ನು ಖರ್ಚುಮಾಡುವುದರ ಜೊತೆಗೆ ಎಲ್ಲಿ ಹಣವನ್ನು ಉಳಿಸಬೇಕು, ಎಲ್ಲಿ ಇವಕ್ಕೆ ಹಣ ಜಾಸ್ತಿ ಬರತಕ್ಕಂಥ ವ್ಯವಸ್ಥೆ ಮಾಡಬೇಕು ಎನ್ನುವುದರ ಬಗ್ಗೆ ಕೂಡ ಚಿಂತನೆ ಮಾಡಿ ಆದಾಯ ಕೂಡ ಜಾಸ್ತಿ ಬರತಕ್ಕಂಥ ವ್ಯವಸ್ಥೆ ಈ ಬಜೆಟ್‌ನಲ್ಲಿದೆ. ಇದು ಒಂದು ಬಹಳ ಮುಖ್ಯವಾದ ಅಂಶ. ಇದರ ಜೊತೆಗೆ ಬಹಳ ಮುಖ್ಯವಾಗಿ ಯಾವ ಟ್ಯಾಕ್ಸೇಶನ್ ಕೂಡ ಜಾಸ್ತಿ ಮಾಡದೆ ಅನೇಕ ವಿನಾಯಿತಿಗಳನ್ನು ಕೊಡತಕ್ಕಂಥ ಸಂದರ್ಭದಲ್ಲಿ ಏನೊಂದು ಇಂಟರ್‌ನಲ್ ರಿಸೋರ್ಸಸ್ ಜಾಸ್ತಿ ಮಾಡಿಕೊಳ್ಳುವುದಕ್ಕೆ ಸತತ ಪ್ರಯತ್ನವನ್ನು ಸರ್ಕಾರ ಮಾಡಿದೆ ಎನ್ನುವ ಮಾತನ್ನು ಕೂಡ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮಗೆ ಇಷ್ಟೆಲ್ಲವನ್ನೂ ಮಾಡಿದಂಥ ಸಂದರ್ಭದಲ್ಲಿ ಇನ್ನು ಬೇರೆ ಕಾರ್ಯಕ್ರಮಗಳಿಗೆ ಏನು ಆದ್ಯತೆ ಕೊಡಬೇಕಿದೆಯೋ, ಅಷ್ಟೂ ಕಾರ್ಯಕ್ರಮಗಳಿಗೂ ಆದ್ಯತೆಯನ್ನು ಕೊಡತಕ್ಕಂಥ ಕೆಲಸ ನಡೆದಿದೆ. ಅದಕ್ಕೋಸ್ಕರವೇ ಈ ಒಂದು ಬಹಳ ಮುಖ್ಯವಾದ ನೀರು ಸರಬರಾಜಿಗೆ 243 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ 46 ಕೋಟಿ ರೂಪಾಯಿಗಳು......

ಸಮಾಜ ಕಲ್ಯಾಣಕ್ಕೆ 32 ಕೋಟಿ ರೂಪಾಯಿ, ಕಾರ್ಮಿಕ ಕಲ್ಯಾಣಕ್ಕೆ 9 ಕೋಟಿ ರೂಪಾಯಿ, ಸಾಮಾನ್ಯ ಸೇವೆಗಳಿಗೆ 30 ಕೋಟಿ ರೂಪಾಯಿ ಹೀಗೆ ಒಟ್ಟು 2,158 ಕೋಟಿ, 84 ಲಕ್ಷ ರೂಪಾಯಿಗಳನ್ನು ವಿವಿಧ ಇಲಾಖೆಗಳಿಗೆ ಹಂಚತಕ್ಕ ಸಂದರ್ಭದಲ್ಲಿ, ಇಷ್ಟು ಹಣವನ್ನು ಒದಗಿಸತಕ್ಕಂಥ ಕೆಲಸ ಆಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಪ್ರವಾಸೋದ್ಯಮ ಮತ್ತು ಕೈಗಾರಿಕೆ, ಮೀನುಗಾರಿಕೆ, ಹೀಗೆ ಇನ್ನೂ ಅನೇಕ ಕಾರ್ಯಕ್ರಮಗಳಿಗೆ ಉತ್ತೇಜನ ಕೊಡುವುದರ ಜೊತೆಗೆ, ಬಹಳ ಮುಖ್ಯವಾಗಿ ನನಗೆ ಈ ಬಜೆಟ್‌ನಲ್ಲಿ ಪ್ರಿಯವಾದ ಕೆಲಸ ಎಂದರೆ, ರೈತನಿಗೋಸ್ಕರ ಅನೇಕ ಜನರು ಮಾತನಾಡತಕ್ಕ ಸಂದರ್ಭದಲ್ಲಿ, ಈ ವರ್ಷ ಮತ್ತು ಕಳೆದ ವರ್ಷ ನಾವು ಕೇಳಿದ್ದೇವೆ. ರೈತನಿಗೆ ಸಾಲ ಮನ್ನಾಮಾಡಬೇಕು, 10 ಸಾವಿರ ರೂಪಾಯಿಗಳಿಗಿಂತ ಕೆಳಗಿನ ಸಾಲವನ್ನೂ ತೆಗೆದುಹಾಕಬೇಕೆಂದು ಭಾಷಣಮಾಡುವಂಥದ್ದನ್ನು, ಧರಣಿ ಮಾಡುವಂಥದ್ದು ಹೊರಗೆ ಹೋಗತಕ್ಕಂಥದ್ದನ್ನು ಪ್ರತಿದಿವಸ ನೋಡಿದ್ದೇವೆ. ಅಂತಹವರಿಗೆ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದು ಊರಿನಲ್ಲಿ 5 ಜನ 10 ಜನ ಟ್ರಾಕ್ಟರಿಗೋಸ್ಕರ, ಪಂಪುಸೆಟ್ಟಿಗೋಸ್ಕರ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ, ಮತ್ತು ಪಿ. ಎಲ್. ಡಿ. ಬ್ಯಾಂಕುಗಳ ಮುಖಾಂತರ ಸಹಾಯವನ್ನು ಪಡೆದಿರುತ್ತಾರೆ. ಒಂದು ಗ್ರಾಮದಲ್ಲಿ ಸಾಲ ಮನ್ನಾ ಮಾಡಿದರೆ ರೈತನ ಏಳಿಗೆಯನ್ನು ಕಾಪಾಡಿದಂತಾಗುತ್ತದೆಯೇ? ಇಲ್ಲಿಯವರೆಗೂ ದೀರ್ಘವಾಗಿ ಸರ್ಕಾರ ಯೋಚನೆ ಮಾಡಿಲ್ಲವೆಂದು ನನಗನಿಸುತ್ತದೆ. ರೈತನಿಗೆ ಬೇಕಾಗಿರುವುದು, ಪ್ರತಿಯೊಬ್ಬ ರೈತರಿಗೂ ಅನುಕೂಲವಾಗುವ ಕೆಲಸಗಳನ್ನು ಮಾಡಿದರೆ ಮಾತ್ರ ಕಾಪಾಡಿದಂಥ ಹೊಣೆಯನ್ನು ಹೊತ್ತಂತಾಗುತ್ತದೆ. ಅದು ಬಿಟ್ಟು ಕೇವಲ ವೋಟಿಗೋಸ್ಕರ, ಕೇವಲ ರಾಜಕೀಯ ಕ್ಕೋಸ್ಕರ ಕೇವಲ ಕೆಲವರನ್ನು ಮೋಸ ಮಾಡುವುದಕ್ಕೋಸ್ಕರ ಮಾಡುತ್ತಿರುವಂಥ ಕೆಲಸಗಳನ್ನು ನೋಡಿದರೆ ನನಗೆ ನಗು ಬರುತ್ತದೆ. ಇವತ್ತಿನ ದಿವಸ ಜನಗಳು ಅಷ್ಟು ಮಂದರಲ್ಲ, ರೈತರಿಗೂ ಜ್ಞಾನ ಬಂದಿದೆ ಎನ್ನುವುದನ್ನು ತಿಳಿದುಕೊಳ್ಳಬೇಕು. 15-20 ವರ್ಷಗಳ ಹಿಂದೆ ಎಷ್ಟು ಸುಳ್ಳು ಹೇಳಿದರೂ ಕೂಡ ಗೇಯಿನ್ ಆಗುತ್ತಿದ್ದಿತ್ತು. ಆದರೆ, ಇವತ್ತು ಅದು ಸಾಧ್ಯವಿಲ್ಲ. ಆದರೆ, ಇವತ್ತು ಸದನದಲ್ಲಿ ಕುಳಿತುಕೊಂಡು. ರಾಜಕೀಯ ಮಾಡಿದರೆ, ಅದು ಸಾಧ್ಯವಾಗುವುದಿಲ್ಲ. ಇವತ್ತು 50 ಕೋಟಿ ಅಥವಾ 100 ಕೋಟಿ ಸಾಲ ಮನ್ನಾ ಮಾಡಿದರೆ ಪ್ರಯೋಜನವಿಲ್ಲ. ಹಿಂದೆ ಜನತಾ ಸರ್ಕಾರ ಮನ್ನಾ ಮಾಡಿದಂಥ ಸಂದರ್ಭದಲ್ಲಿ ಒಬ್ಬರಿಗೆ 50-60 ಸಾವಿರ ರಿಯಾಯಿತಿ ಸಿಕ್ಕಿತು. ಯಾರು ಮೋಸಮಾಡಿದ್ದು, ಸಾಲವನ್ನು ವಾಪಸ್ ಕೊಡದೇ ಇದ್ದವರಿಗೆ, ಡೈರಿ ಇಟ್ಟುಕೊಂಡು, 2 ಲಕ್ಷ, 3 ಲಕ್ಷ ಸಾಲ

ತೆಗೆದುಕೊಂಡು, ಹಣವನ್ನು ಕೊಡದೇ ಮೋಸ ಮಾಡತಕ್ಕವರಿಗೆ 50-60 ಸಾವಿರ ಸಿಕ್ಕಿದೆ. ಈ ಸೌಲಭ್ಯ ನಮ್ಮ ಊರಿನ ಬಡ ಬೋರೇಗೌಡನಿಗೆ ಸಿಕ್ಕಿದೆಯೇ? ಈ ತರಹ ರಾಜಕೀಯ ಮಾಡುವಂಥ ವ್ಯವಸ್ಥೆಯನ್ನು ಬಿಟ್ಟು, ರೈತರ ಸರ್ವಾಂಗೀಣ ಆಗಬೇಕೆಂದರೆ, ಪ್ರತಿಯೊಬ್ಬ ರೈತನಿಗೂ ಅನುಕೂಲವಾಗಬೇಕು. ಅದು ಬಿಟ್ಟು ಯಾರು ಪಂಪುಸೆಟ್ ಇಟ್ಟಿದ್ದಾರೆ, ಯಾರು ಟ್ರಾಕ್ಟರ್ ಇಟ್ಟಿದ್ದಾರೆ, ಅಂತಹವರಿಗೆ ಮನ್ನಾ ಮಾಡುತ್ತೇವೆಂದು ಹೇಳುತ್ತಾರೆ. ಈ ವ್ಯವಸಾಯವನ್ನು ಮಾಡುವಂಥ ರೈತನಿಗೆ ಮನ್ನಾ ಆಗುವುದರಲ್ಲಿ ಅರ್ಥವಿದೆ. ಕೇವಲ 5-10 ಜನ ಸಾಲ ತೆಗೆದುಕೊಂಡಿರುವವರಿಗೆ 10 ಸಾವಿರ ರಿಯಾಯಿತಿ ಸಿಕ್ಕಿದರೆ ಆ ಗ್ರಾಮದ ಎಲ್ಲಾ ರೈತರ ಏಳಿಗೆಯಾಗುತ್ತದೆಯೇ ಅಥವಾ ಸವಲತ್ತು ಸಿಕ್ಕಿದಂತಾಗುತ್ತದೆಯೇ? ಇಂತಹ ವಿಷಯಗಳಿಗೆ ಹೆಚ್ಚಿನ ಮನ್ನಣೆ ಕೊಡದೇ, ಸರ್ಕಾರ ದೀರ್ಘವಾಗಿ ಯೋಚನೆ ಮಾಡಿ, 3-4 ವಿಧದಲ್ಲಿ ರೈತನಿಗೆ ಅನುಕೂಲ ಮಾಡತಕ್ಕಂಥ ವ್ಯವಸ್ಥೆ ಏನಿದೆಯೋ ಅದರ ಬಗ್ಗೆ ಹೆಚ್ಚಿಗೆ ಗಮನವನ್ನು ಹರಿಸಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಇದಕ್ಕೆ ಉದಾಹಣೆಯಾಗಿ ನನ್ನ ತಾಲ್ಲೂಕಿನಲ್ಲಿ ನಾನು ಶಾಸಕನಾದಾಗ ಸುಮಾರು 4 ಸಾವಿರ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕಾದಂಥ ಸಂದರ್ಭ ಇತ್ತು. ಏತಕ್ಕೆಂದರೆ ಸುಮಾರು 4-5 ವರ್ಷಗಳ ಕಾಲ ವಿದ್ಯುಚ್ಛಕ್ತಿಯನ್ನೇ ಕೊಟ್ಟಿರಲಿಲ್ಲ. ನಾವು ಡಿವಿಜನ್ ಆಫೀಸ್ ಸ್ಯಾಂಕ್ಷನ್ ಮಾಡಿಸಿಕೊಟ್ಟು, ಸಾಕಾದಷ್ಟು ಮೆಟೀರಿಯಲ್ಸನ್ನು ಸರಕಾರ ಕೊಟ್ಟಮೇಲೆ, ಬಂಗಾರಪ್ಪನವರು ಮುಖ್ಯಮಂತ್ರಿಯಾಗಿ ಶ್ರೀಮಾನ್ ಪಾಟೀಲರು ಇದ್ದಾಗ 40 ಸಾವಿರ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಕೊಡಿಸುತ್ತೇವೆಂದು ಹೇಳಿದಮೇಲೆ, ಮೆಟೀರಿಯಲ್ಸ್ ಬರುವುದಕ್ಕೆ ಶುರು ಆದಮೇಲೆ ನನ್ನ ತಾಲ್ಲೂಕಿನಲ್ಲಿ 5 ಸಾವಿರ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಒದಗಿಸಿದರು. ಒದಗಿಸಿದ ಮೇಲೆ ಕಳೆದ ವರ್ಷ ನನ್ನ ಒಂದೇ ತಾಲ್ಲೂಕಿನಲ್ಲಿ 10 ಸಾವಿರ ಎಕರೆ ಭೂಮಿಯಲ್ಲಿ ಕಬ್ಬನ್ನು ಬೆಳೆದರು. ಹತ್ತು ಸಾವಿರ ಎಕರೆಯಲ್ಲಿ ರೈತ ಕಬ್ಬನ್ನು ಬೆಳೆಯುತ್ತಾನೆ. ಹಿಂದೆ ನಮ್ಮ ಶುಗರ್ ಫ್ಯಾಕ್ಟರಿ ವರ್ಷದಲ್ಲಿ ಕೇವಲ ಎರಡು ತಿಂಗಳು ಮಾತ್ರ ನಡೆಯುತ್ತಿತ್ತು. ಇವತ್ತು ಎರಡು ಲಕ್ಷ ಟನ್ ಕಬ್ಬನ್ನು ಅರೆದಿದೆ. ಸುಮಾರು ಒಂದು ವರ್ಷದಿಂದ ಒಂದೇ ಸಮನಾಗಿ ಶುಗರ್ ಫ್ಯಾಕ್ಟರಿ ನಡೆಯುತ್ತಿದೆ. ಆದುದರಿಂದ ಈ ರೀತಿ ಒಂದು ವಿದ್ಯುಚ್ಛಕ್ತಿಯನ್ನು ಒದಗಿಸಿದುದರಿಂದ, ಅದಕ್ಕೆ ಸಾಕಾದಷ್ಟು ಮೇಟೀರಿಯಲ್ಸ್ ಕೊಟ್ಟಿದುದರಿಂದ ಕಳೆದ ವರ್ಷ ಒಳ್ಳೆಯ ಮಳೆಯಾದುದರಿಂದ, ಕೇವಲ ರಾಗಿ ಜೋಳ ಬೆಳೆಯುತ್ತಿದ್ದ ಜಾಗದಲ್ಲಿ ಕಬ್ಬನ್ನು ಬೆಳೆದು ನಮ್ಮ ಶುಗರ್ ಫ್ಯಾಕ್ಟರಿ ಇವತ್ತು ಒಂದು ವರ್ಷದಲ್ಲಿ 2 ಲಕ್ಷಟನ್ ಚಿಲ್ಲರೆ ಕಬ್ಬನ್ನು ಅರೆಯತಕ್ಕಂಥ ಶಕ್ತಿಯನ್ನು ಪಡೆದುಕೊಂಡಿದೆ. ಇದು ಯಾವುದರಿಂದ ಆಯಿತು? ನಾವು ಎಲ್ಲಾ ರೀತಿಯ ಸೌಲಭ್ಯಗಳನ್ನೂ ಕೊಟ್ಟು ರೈತನ ಆರ್ಥಿಕ ವ್ಯವಸ್ಥೆಯನ್ನು ಸರಿಪಡಿಸಿದರೆ ಆಗ ಅವನ ಸರ್ವಾಂಗೀಣ ಅಭಿವೃದ್ಧಿಯಾಗುತ್ತದೆಯೇ ವಿನಹ ಸಾಲ ಮನ್ನಾ ಮಾಡುವುದರಿಂದ ಆಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಖಡಾಖಂಡಿತವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏತಕ್ಕೆಂದರೆ ಬಹಳಷ್ಟು ಜನ ತಿಳಿದುಕೊಂಡಿದ್ದಾರೆ. ಇದನ್ನು ಹೇಳದೇ ಹೋದರೆ, ರೈತರು, ಹಳ್ಳಿಗಾಡಿನಲ್ಲಿರತಕ್ಕಂಥವರು ರಾಜಕಾರಣಿಗಳಿಗೆ ಓಟು ಕೊಡುವುದಿಲ್ಲ, ಇದನ್ನು ಹೇಳದೇ ಹೋದರೆ ಓಟು ಸಿಗುವುದಿಲ್ಲ ಎಂದು ಯಾವುದೇ ಒಂದು ಪಕ್ಷಗಳು, ಇಲ್ಲಿನ ರಾಜಕೀಯ ಪಕ್ಷಗಳು, ವಿರೋಧ ಪಕ್ಷಗಳು ಸುಮಾರು ಎರಡು ವರ್ಷಗಳಿಂದ ಆಗಾಗ ಇದನ್ನು ಆಡುತ್ತಿದ್ದಾರೆ. ಎರಡು ವರ್ಷಗಳಿಂದ ಈ ಸದನವನ್ನು ಸರಿಯಾದ ರೀತಿ ನಡೆಸುವುದಕ್ಕೆ ಬಿಡುತ್ತಿಲ್ಲ. ಕಾಲ ವ್ಯಯ ಮಾಡತಕ್ಕಂಥ ವ್ಯವಸ್ಥೆ ಮಾಡಿಕೊಂಡು ಬರುತ್ತಿದ್ದಾರೆ. ಇವತ್ತು ಯಾವ ಕಾರಣಕ್ಕೆ ವಿರೋಧ ಪಕ್ಷದವರು ಬಂದಿಲ್ಲವೋ ಗೊತ್ತಿಲ್ಲ; ಅದು ಏನಾದರೂ ಇರಲಿ ಪ್ರಜಾಸತ್ತೆಯ ವ್ಯವಸ್ಥೆಯಲ್ಲಿ ಏನಾದರೂ ಜಿಜ್ಞಾಸೆ ಬಂದರೆ, ಏನಾದರೂ ಸಮಸ್ಯೆಗಳು ಬಂದರೆ ಜನರಿಂದ ಓಟು ಪಡೆದುಕೊಂಡು ಬಂದ ಅವರುಗಳು ಈ ಸದನದಲ್ಲಿ ಕುಳಿತುಕೊಂಡು ಇರತಕ್ಕಂಥ ಸಮಸ್ಯೆಗಳನ್ನು ಬಗೆಹರಿಸಿಲಿಕ್ಕೆ ಪ್ರಯತ್ನ ಮಾಡಬೇಕು.

They must deliver the goods to the people. Instead of that they are doing all sort of manipulations to get delay tactics.

ಸದನ ಸರಿಯಾದ ರೀತಿ ನಡೆಸುವುದಿಲ್ಲ, ಸದನದಲ್ಲಿ ಸರಿಯಾಗಿ ಬಿಹೇವ್ ಮಾಡುವುದಿಲ್ಲ, ಎಲ್ಲರಿಗೂ ಹೇಳುತ್ತಾರೆ. ಧರಣಿ ಮಾಡಿದ ದಿವಸ ನಾನು ನೋಡಿದ ಹಾಗೆ, ಅಧ್ಯಕ್ಷರೇ, ಮೊನ್ನೆ ವೆಲ್ ಒಳಗಡೆ ಕೆಲವರು ಹೋಗಿ ನಿಂತಿದ್ದರೆ, ವಾಟಾಳ್ ನಾಗರಾಜ್‌ರವರು ಹೊರಗಡೆ ನಿಂತು ಕೊಂಡು ಹ್ಯಾಂಡ್ ಕರ್ಚೀಫ್ ಮತ್ತು ಟೋಪಿ ತೆಗೆದುಕೊಂಡು ಮೇಲುಗಡೆ ನಿಂತು ಅಲ್ಲಾಡಿಸುತ್ತಾ ನಿಂತಿದ್ದರು ಅದನ್ನು ಮಾಡುವುದರ ಜೊತೆಗೆ ಅಧ್ಯಕ್ಷರು ಅಲ್ಲಿ ಕುಳಿತಿದ್ದಹಾಗೆ ಹೋಗಿ ಮೇಲುಗಡೆ ಕುಳಿತುಕೊಳ್ಳುತ್ತಾರೆ. What right he has got ? Have you

got any right to go and sit there. They are all making rules and regulations on the floor of the House. It is not correct....

ಅಧ್ಯಕ್ಷರೇ, ಇದರ ಬಗ್ಗೆ ತಾವು ಗಮನಹರಿಸಬೇಕು. ನಮಗೆ ನೀವು ಏನು ಒಂದು ಆದೇಶಗಳನ್ನು ಕೊಡುತ್ತೀರೋ, ಏನು ಈ ಪುಸ್ತಕದಲ್ಲಿ ಪ್ರಿಂಟ್ ಆಗಿದೆ ಇದನ್ನು ಪ್ರತಿಯೊಬ್ಬರು ಕೂಡಾ ಪಾಲನೆ ಮಾಡಬೇಕು. ಇಲ್ಲಿ ಯಾರೂ ಅವಿದ್ಯಾವಂತರು ಇಲ್ಲ, ಪ್ರತಿಯೊಬ್ಬರೂ ವಿದ್ಯಾವಂತರು ಇದ್ದಾರೆ, ಅರ್ಥಮಾಡಿಕೊಳ್ಳುವ ಶಕ್ತಿ ಇದೆ. ರಾಜಕೀಯ ಮಾಡತಕ್ಕಂಥ ಸಂದರ್ಭದಲ್ಲಿ "ಗೋಡಾ ಹೈ ಮೈದಾನ್ ಹೈ" They can do politics there not within the floor of the House....

ಇಲ್ಲಿ ವರ್ತನೆ ಮಾಡತಕ್ಕಂಥ ಸಂದರ್ಭದಲ್ಲಿ ಎಲ್ಲಾ ಸದನಗಳ ರೂಲ್ಸ್ ರೆಗ್ಯುಲೇಷನ್ಸ್ ಮುರಿದು ಅದನ್ನು ಪುಡಿ ಮಾಡಿ ಮಾಡತಕ್ಕಂಥ ಸಂದರ್ಭದಲ್ಲಿ ನೇರವಾಗಿ ರಾಜಕೀಯ ಮಾಡದೇ ನಿಯಮಗಳನ್ನು ಅನುಸರಿಸಿ ನಡೆಯಬೇಕು. ರಾಜಕೀಯ ಮಾಡುವುದು ಇದ್ದರೆ ಬೇರೆ ತರಹ ಮಾಡಬೇಕು. ಈಗ ರಾಜಕೀಯದಲ್ಲಿ ಖುರ್ಚಿಗೋಸ್ಕರ ಪೈಪೋಟಿ ಇರುತ್ತದೆ, ನನಗೆ ಖುರ್ಚಿ ಸಿಗಲಿಲ್ಲ ಎಂದು ಪೈಪೋಟಿ ಇರುತ್ತದೆ, ಮನಸ್ಸಿನಲ್ಲಿ ವೇದನೆ ಇರುತ್ತದೆ, ಅದು ಇದ್ದರೂ, ಸಮಯ ಬಂದಾಗ ಸರಿಯಾದ ರೀತಿಯಲ್ಲಿ ನ್ಯಾಯವಾಗಿ, ಧರ್ಮವಾಗಿ ನೀತಿಯಿಂದ ರೂಲ್ಸ್‌ರೆಗ್ಯುಲೇಷನ್ಸ್ ಅನುಸರಿಸಿ ರಾಜಕೀಯ ಮಾಡಬೇಕೇ ವಿನಹ, ಈ ದೇಶ ನಾಶವಾದರೂ ಪರವಾಗಿಲ್ಲ, ನಾನು ಮಾತ್ರ ಬದುಕಬೇಕು, ನಾನು ಮಾತ್ರ ರಾಜಕೀಯ ಮಾಡಬೇಕು. ನಾನು ಮಾತ್ರ ಖುರ್ಚಿ ಹಿಡಿಯಬೇಕು ಎಂದು ರಾಜಕೀಯ ಮಾಡತಕ್ಕದ್ದು ಸರಿಯಲ್ಲ ಎನ್ನತಕ್ಕ ಮಾತನ್ನು ನಾನು ಈ ಎರಡು ವರ್ಷದಿಂದ ನೋಡಿರತಕ್ಕಂಥ ಕೇಳಿರತಕ್ಕಂಥ ಅದರ ಬಗ್ಗೆ ವಿಮರ್ಶೆ ಮಾಡಿರತಕ್ಕಂಥ ವಿಚಾರದಲ್ಲಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಅಧ್ಯಕ್ಷರೇ..

### 1.45 ಪಿ. ಎಂ.

ಇಷ್ಟನ್ನು ನಾನು ಹೇಳುತ್ತಾ, ಈ ಪುಸ್ತಕದಲ್ಲಿರತಕ್ಕಂಥ ಇವತ್ತಿನ ದಿವಸ ನಮ್ಮ ಬಜೆಟ್ ಈ ಸೆಂಟ್ರಲ್ ಬಜೆಟ್ ಒಂದು ರೆವಲೂಶನರಿ ಬಜೆಟ್‌ನ್ನು ನಮ್ಮ ಆರ್ಥಿಕ ಮಂತ್ರಿಗಳು ಮಂಡಿಸಿದರೋ ಅಂಥ ಒಂದು revolutionary budget. It is a progressive budget, it is a revolutionary budget, ಏತಕ್ಕೆಂದರೆ it has safeguarded the interest of the common people and ryots. ಇದು directly or indirectly.

ಅದು ನಮ್ಮ ಕರ್ನಾಟಕ ರಾಜ್ಯದ ರೈತರಿಗೆ ಎಲ್ಲರಿಗೂ ಸಿಗತಕ್ಕಂಥ ವಿದ್ಯುಚ್ಛಕ್ತಿ ಇರಬಹುದು ನೀರಾವರಿ ಇರಬಹುದು ವ್ಯವಸಾಯದಿಂದ ಇರಬಹುದು ಅಥವಾ ಅಗ್ರಿಕಲ್ಚರ್ ಹಾರ್ಟಿಕಲ್ಚರ್ ಇರಬಹುದು ಫಿಶರೀಸ್ ಇರಬಹುದು ಈ ಹಣ ನಮ್ಮ ಕರ್ನಾಟಕ ರಾಜ್ಯದ ರೈತರ ಏಳಿಗೆಗೆ ಇದು ಆಗಿದೆ ಎನ್ನುವ ಮಾತನ್ನು.....

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ನಿಮ್ಮ ಭಾಷಣ ಕೇಳಲು ಮಹದೇವ್‌ರವರು ಅಲ್ಲಿ ನಿಮ್ಮ ಎದುರಿಗೆ ಹೋಗಿ ಕುಳಿತಿದ್ದಾರೆ ನೋಡಿ!

ಡಾ. ಎಸ್. ಬಿ. ನಂಜಪ್ಪ:- ಆಯಿತು ಬಿಡಿ. atleast he is sitting therer as a opposition leader. ಇದು ಒಟ್ಟಿನಲ್ಲಿ ಹೇಳುವುದಾದರೆ ಬಜೆಟ್ ಓದಿದಂತಹ ಸಮಯದಲ್ಲಿ ಮಾನ್ಯ ಅಧ್ಯಕ್ಷರೇ ಇದರಲ್ಲಿ ಪ್ರತಿಯೊಬ್ಬರಿಗೂ ನಮಗೆ ಗೊತ್ತಿದೆ. ಎರಡು ವರ್ಷಗಳಲ್ಲಿ 1989 ನೇ ಡಿಸೆಂಬರ್ 18 ರಲ್ಲಿ ನಾವು ಇಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡುವಂತಹ ಸಮಯದಲ್ಲಿ ಅವತ್ತಿನ ದಿವಸ ನಾವು ಈ ಶಾಸನಸಭೆಗೆ ಪ್ರಥಮವಾಗಿ ಬಂದಿದ್ದೆವು. ನಾವು ಆಗ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಲೆಕ್ಕಾ ಹಾಕಿದಾಗ ಕರ್ನಾಟಕ ರಾಜ್ಯದ ಪರಿಸ್ಥಿತಿ ಏನಾಗಿತ್ತು. ಈಗ ಆರ್ಥಿಕ ಪರಿಸ್ಥಿತಿ ಏನಾಗಿದೆ, ಅವತ್ತು ಒಬ್ಬ ಮಾಸ್ಟರ್‌ಗೆ ಸಂಬಳ ಕೊಡತಕ್ಕಂಥ ಶಕ್ತಿ ಈ ಸರ್ಕಾರಕ್ಕೆ ಇರಲಿಲ್ಲ. ನಮ್ಮ ಸರ್ಕಾರ ಅಂತ ಅಲ್ಲ, ಹಿಂದಿನ ಸರ್ಕಾರಕ್ಕೆ ಆ ಸಂದರ್ಭದಲ್ಲಿ ಆ ಸರ್ಕಾರಕ್ಕೆ ನಮ್ಮ ಟ್ರಜರಿಗೆ ಆ ಶಕ್ತಿ ಇರಲಿಲ್ಲ. ಅವತ್ತಿನ ದಿವಸ ನಮ್ಮ ಟ್ರಜರಿಗೆ ಸಂಬಳ ಕೊಡುವುದಕ್ಕೆ ಶಕ್ತಿ ಇರಲಿಲ್ಲ. ಕಂಟ್ರಾಕ್ಟರ್ ಬಿಲ್ ಕೊಡುವುದಕ್ಕೆ, ವಿಧವಾ ಮಾಸಾಶನ ಹಣ ಕೊಡುವುದಕ್ಕೆ ಹಣ ಇರಲಿಲ್ಲ. 1120 ಕೋಟಿ ರೂಪಾಯಿಗಳ ಹೊರೆ ನಮ್ಮ ಮೇಲೆ ಇತ್ತು ಅಂದರೆ ಅದು ತಪ್ಪಾಗುವುದಿಲ್ಲ. ನಮ್ಮ ಮಾನ್ಯ ವೀರೇಂದ್ರಪಾಟೀಲರು ಇವೆಲ್ಲವನ್ನೂ ಸರಿ ಮಾಡಿ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಪ್ರಯತ್ನಪಟ್ಟು ಅವರ ಅವಧಿಯಲ್ಲಿ ಸೂಕ್ತ ಕೆಲಸ ಮಾಡಿದರು. ಅದಾದ ಮೇಲೆ ಶ್ರೀಮಾನ್ ಬಂಗಾರಪ್ಪನವರು ಬಂದ ಮೇಲೆ ನಮ್ಮ ಕರ್ನಾಟಕ ರಾಜ್ಯದ ಆರ್ಥಿಕ

ಪರಿಸ್ಥಿತಿ ಉತ್ತಮಗೊಂಡಿದೆ. ಇವತ್ತು ಎಲ್ಲಾ ವಿಷಯಗಳಿಗೂ ಜಾಸ್ತಿ ಹಣ ಕೊಟ್ಟು ಮಾಡತಕ್ಕಂಥಾದ್ದು ಜಾಸ್ತಿ ಹಣವನ್ನು ರೈತರ ಏಳಿಗೆಗೆ ಖರ್ಚು ಮಾಡತಕ್ಕಂಥದ್ದು ಹಳ್ಳಿಯಲ್ಲಿರತಕ್ಕಂಥ ಬಡವರಿಗೆ ಖರ್ಚು ಮಾಡತಕ್ಕಂಥ ಶಕ್ತಿಯನ್ನು ನಮ್ಮ ಸರ್ಕಾರ ಪಡೆದುಕೊಂಡಿದೆ. ಇದು ನಿಜವಾಗಿಯೂ ಸತ್ಯವಾದ ಮಾತು. ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಆಶ್ರಯ ಯೋಜನೆ ಮಾಡಿದ್ದೇವೆ. ನಿಮಗೆ ಗೊತ್ತಿದೆ ಇದು ಎಂತಹ ಒಳ್ಳೆಯ ಕಾರ್ಯಕ್ರಮ. ಇವತ್ತು ಲಕ್ಷಾಂತರ ಜನರಿಗೆ ಸೈಟ್‌ಗಳನ್ನು ಕರ್ನಾಟಕ ರಾಜ್ಯದಲ್ಲಿ ಹಂಚಿಕೆ ಮಾಡಿದ್ದೇವೆ. ನನ್ನ ತಾಲ್ಲೂಕಿನಲ್ಲಿ ಸುಮಾರು 3 ಸಾವಿರ ಸೈಟ್‌ಗಳನ್ನು ಹಂಚಿಕೆ ಮಾಡಿದ್ದೇವೆ. ಇನ್ನು 3-4 ಸಾವಿರ ಸೈಟ್‌ಗಳನ್ನು ಬಡವರಿಗೆ ಹಂಚಿಕೆ ಮಾಡಬೇಕೆಂದಿದ್ದೇವೆ. ಈ ಸೈಟ್‌ಗಳ ಹಂಚಿಕೆ ಸಂದರ್ಭದಲ್ಲಿ ನಾವು ಇರತಕ್ಕಂಥ ಪರಿಸ್ಥಿತಿಯನ್ನು ನೋಡಿದರೆ ಅನೇಕ ಜನರು ಯಾವ ಪರಿಸ್ಥಿತಿಯಲ್ಲಿ ವಾಸ ಮಾಡುತ್ತಿದ್ದಾರೆ ಅವರೆಲ್ಲರನ್ನೂ ಬದಲಾವಣೆ ಮಾಡತಕ್ಕಂಥ ಯಾವ ಒಂದು ದೊಡ್ಡ ಕಾರ್ಯಕ್ರಮವನ್ನು ಈ ಸರ್ಕಾರ ಹಾಕಿಕೊಂಡಿದೆ ಇವತ್ತು ಲಕ್ಷಾಂತರ ಜನಗಳಿಗೆ ಮನೆಗಳನ್ನು ಕಟ್ಟಿಕೊಡುವ ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆ. ಅಂತಹ ಒಂದು ಒಳ್ಳೆಯ ಕಾರ್ಯಕ್ರಮ ಇದು. ಇದರ ಜೊತೆಗೆ ಬಹಳ ಜನ ನಮ್ಮ ಅಪೋಜಿಷನ್ಸ್ ಲೀಡರ್ಸ್ ಮಾತನಾಡತಕ್ಕಂಥ ಸಂದರ್ಭದಲ್ಲಿ "ಶುಶ್ರೂಷ" ಬಗ್ಗೆ ಹೇಳಿದರು. ಆದರೆ ಇದು ತಪಾಸಣೆ ಮಾಡಿ ಖಾಯಿಲೆಗಳನ್ನು ಕಂಡು ಹಿಡಿದು ಬೇರೆ ಆಸ್ಪತ್ರೆಗಳಿಗೆ ರೆಫರ್ ಮಾಡತಕ್ಕಂಥ ಒಂದು ಒಳ್ಳೆಯ ಕಾರ್ಯಕ್ರಮ. ಈ ಒಂದು ವಿಧಾನವನ್ನು ನಾವು ಅನುಸರಿಸುತ್ತಿದ್ದೇವೆ. ಅದರ ಬಗ್ಗ ಕಾಮೆಂಟ್ಸ್ ನಡೆಯಿತು. ಮಾನ್ಯ ಅಧ್ಯಕ್ಷರೇ, ಇದು ಪ್ರಾರಂಭ ಈಗತಾನೆ ಆಗಿದೆ. ನಾನು ಸಹ ಎರಡು ಮೂರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೆ. ಅಲ್ಲಿಗೆ ಸಾಕಷ್ಟು ಜನ ತಪಾಸಣೆಗಾಗಿ ಬಂದಿದ್ದರು. ಹಾಗೆ ಬಂದಂತಹ ಸಮಯದಲ್ಲಿ ನಾನು ಕಂಡಂತಹ ಚಿತ್ರ ಅನೇಕ ಜನರು ತಜ್ಞರನ್ನು ಕರೆಸಿ ಎಂ. ಡಿ. ಎಂ. ಎಸ್. ಸ್ಕಿನ್ ಸ್ಪೆಷಲಿಸ್ಟ್ ಐ-ಸ್ಪೆಷಲಿಸ್ಟಗಳು ತಪಾಸಣೆ ಮಾಡಿ ಖಾಯಿಲೆಯನ್ನು ಕಂಡು ಹಿಡಿದು ಅನೇಕ ಜನಗಳನ್ನು ರೆಫರ್ ಮಾಡಿ ಬೇರೆ ಹಾಸ್ಪೆಟಲ್‌ಗೆ ಕಳುಹಿಸಿಕೊಡತಕ್ಕಂಥ ವ್ಯವಸ್ಥೆ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಚಂದ್ರೇಗೌಡರು ಹೇಳುತ್ತಿದ್ದರು. ಏನಂಥ? ಟಿ. ಬಿ. ಇಲ್ಲದವನಿಗೆ ಟಿ. ಬಿ. ಇದೆಯೆಂದು ಹೇಳಿ ಕಳುಹಿಸಿಕೊಟ್ಟು ಎಂದು. It is wrong. ಈ ಪ್ರೊಫೆಷನ್‌ಗೆ ಸೇರಿದ್ದರೂ ಕೂಡ ಡಯಾಗ್ನಸ್ ಮಾಡತಕ್ಕಂಥ ಸಂದರ್ಭದಲ್ಲಿ one or two mistakes may happen.

ವಾಟಾಳ್ ನಾಗರಾಜ್‌ರವರು ಹೇಳುತ್ತಿದ್ದರು. ಕತ್ತರೀನೇ ಒಳಗೆ ಇಟ್ಟುಬಿಟ್ಟಿದ್ದರು ಎಂದು. Yes, there are instances.

ಕತ್ತರಿ ಒಳಗೆ ಇರತಕ್ಕಂಥಾದ್ದು ಫಾರಿನ್ ಬಾಡಿ ಒಳಗಡೆ ಬಿಟ್ಟು, ಆಪರೇಷನ್ ಮುಗಿದಂಥ ಸಂದರ್ಭಗಳು ಉಂಟು. ಎಷ್ಟು? one case for one million. There may be one case for a lakh operations. There will be mistakes. Mistakes might have occurred when there is a fly by wire. Space shuttle..

ಸ್ಪೇಸ್ ಷಿಪ್ ಕೆಳಗಡೆ ಬಿದ್ದು ಪುಡಿ ಪುಡಿಯಾಗಿ ಎಷ್ಟೋ ಕೋಟಿ ಕೋಟಿ ರೂಪಾಯಿಗಳು ಹಾನಿಯಾಗಲಿಲ್ಲವೇ? ಹಾಗೆ human beings commiting one or two errors while diagonising large number of people or whenever they are conducting mass examinations.

ಡಯಾಗ್ನೆಸ್ ಮಾಡತಕ್ಕಂಥ ಸಂದರ್ಭದಲ್ಲಿ ಮಾಸ್ ಎಕ್ಸಾಮಿನೇಷನ್ ಮಾಡತಕ್ಕಂಥ ಸಂದರ್ಭದಲ್ಲಿ there may be some mistakes, that does not mean that there is something wrong in the entire profession. These are the things which have to carefully talked. They are all responsible citizens of this country, they are all members of this House. They talk so lightly and they take this house so lightly. I cannot understand these things.

MADAM DEPUTY SPEAKER:- please conculde.

DR. N. B. NANJAPPA:- If you give little bit of time I can bring out something good. If you do not give time I will sit down.

MADAM DEPUTY SPEAKER:-You take another 5-10 minutes.

DR. N. B. NANJAPPA:- We have forgotten so many welfare activites. We have forgotten what we were before and what we are today. Most of the people they have got diseases which cannot be cured. For example Jaundice, virus infection, cancer etc., etc. People have forgotten as to what we were before 1947 and what we are after 1947. What was the Budget allotment in the old Mysore State? And what is the Budget now ? What was the Budget at Delhi ? What was the money spent during the first five year plan and what is the money that we are going to spend in this five year plan. These are things that we must go deep into the subject and think over. Whether they are in the opposition or in the ruling party, that does not matter. When we are talking of Budget we must take it in such a way whether we are progressing or not, whether we are really delivering the goods to the common man.

ಒಂದು ಒಳ್ಳೆಯ ಕಾರ್ಯಕ್ರಮವನ್ನು ಮಾಡಿದಂಥ ಸಂದರ್ಭದಲ್ಲಿ 'ಶುಶ್ರೂಷೆ' ಕಾರ್ಯಕ್ರಮವನ್ನು, ಅದರ ಮೇಲ ಕಾಮೆಂಟ್ ಹೊಡೆಯುತ್ತಾರೆ. ಹೀಗೆ ಮಾಡತಕ್ಕಂಥ ಸಂದರ್ಭ ಬೇಕಾಗಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಉಪಾಧ್ಯಕ್ಷಿಣಿಯವರು: 5 ನಿಮಿಷದಲ್ಲಿ ಮುಗಿಸಿ.

ಡಾ: ಎನ್. ಬಿ. ನಂಜಪ್ಪ: ಮಾನ್ಯ ಅಧ್ಯಕ್ಷಿಣಿಯವರೆ, ಈಗಲೇ ಮುಗಿಸಿ ಅಂತ ಅಂದರೂ ಮುಗಿಸುತ್ತೇನೆ.

ಅಧ್ಯಕ್ಷಿಣಿಯವರೆ, ಇವತ್ತು ಸಾಕಾದಷ್ಟು ಬದಲಾವಣೆಗಳು ಈ ದೇಶದಲ್ಲಿ ಆಗಿದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಆಗಿದೆ. ಎಂಟೈರ್ ಇಂಡಿಯಾ ದೇಶದಲ್ಲಿ ಆಗಿದೆ, ಎನ್ನುವುದನ್ನು ನಾವೆಲ್ಲರೂ ಕೂಡ ಒಪ್ಪಿಕೊಳ್ಳಬೇಕು. ನಾವು ಅದನ್ನು ಒಪ್ಪಿಕೊಳ್ಳದೇ ಹೋದರೆ ನಾವು ಮೋಸ ಮಾಡಿದ ಹಾಗೆ ಅಥವಾ ಸುಳ್ಳು ಹೇಳುತ್ತಿದ್ದೇವೆ ಎಂದ ಹಾಗೆ ಆಗುತ್ತದೆ, ನಿಜ ಸ್ಥಿತಿಯನ್ನು ಹೊರಗಡೆ ಬಾಯಿ ಬಿಟ್ಟು ಹೇಳತಕ್ಕಂಥ ಶಕ್ತಿಯನ್ನು ಪಡೆದಿಲ್ಲ. We have become cowards...

ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. The better days are ahead. ಎಂದು. ನಮ್ಮ ತಜ್ಞರುಗಳು ಹೇಳುತ್ತಾರೆ. It is definitely not true that we are going back. Let many people tell anything. ನಾವು ಹಾಗೆ ಆಗಿಬಿಟ್ಟಿದ್ದೇವೆ, ಹೀಗೆ ಆಗಿಬಿಟ್ಟಿದ್ದೇವೆ, ನಮಗೆ ಏನೂ ಆಗಿಲ್ಲ, ನಮ್ಮಲ್ಲಿ ರಸ್ತೆಗಳು ಆಗಿಲ್ಲ, ನಮ್ಮಲ್ಲಿಗೆ ಬಸ್ ವ್ಯವಸ್ಥೆಯೂ ಇಲ್ಲ. ಸರಿಯಾದ ಯಾವ ಅನುಕೂಲವೂ ನಮಗೆ ಇಲ್ಲ ಎಂಬಿತ್ಯಾದಿಯಾಗಿ ಹೇಳತಕ್ಕಂಥಾದ್ದನ್ನು ನಾವು ಕೇಳುತ್ತಾ ಇದ್ದೇವೆ. ಆದರೆ it is not true that we are lagging behind and we are not progressing.

ನಾವು ಎಲ್ಲಿ ಹಿಂದೆ ಬೀಳುತ್ತಾ ಇದ್ದೇವೆ? it is because of population explosion whatever we are achieving...

ಅದನ್ನು ಇಫೆಕ್ಟೀವ್ ಆಗಿ ನಾವು ಮಾಡುತ್ತಾ ಇಲ್ಲ. ನಮ್ಮ ಗುರಿಯನ್ನು ನಾವು ಮುಟ್ಟಿ ಅದನ್ನು ಸರಿಯಾದ ರೀತಿಯಲ್ಲಿ ಅನುಭವಿಸುವುದಕ್ಕೆ ಆಗುತ್ತಾ ಇಲ್ಲ. So, we are lagging behind in family planning....

ಕುಟುಂಬ ಯೋಜನೆ ಏನು ಇದೆ, ಅದರ ಬಗ್ಗೆ ಈಗ ಸಾಕಷ್ಟು ನಿಗವನ್ನು ತೆಗೆದುಕೊಂಡಿದ್ದಾರೆ ಎಂಬ ಮಾತನ್ನು ಕೇಂದ್ರ ಸರಕಾರದ ಬಜೆಟ್‌ನಲ್ಲಿಯೂ ಕೂಡ ಬಹಳಷ್ಟು ಮಾನ್ಯತೆಯನ್ನು ಕೊಟ್ಟಿದ್ದಾರೆ ನಮ್ಮಲ್ಲಿಯೂ ಕೂಡ ಆ ಬಗ್ಗೆ ಸಾಕಷ್ಟು ಒತ್ತನ್ನು ಕೊಟ್ಟಿದ್ದಾರೆ. ಈ ಕುಟುಂಬ ಯೋಜನೆಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕುಟುಂಬ ಯೋಜನೆ ಅಂದರೆ ಏನು? Population Explosion ಎಂದು ನಾವು ಕರೆಯುತ್ತೇವೆ. ಈ ಪಾಪ್ಯುಲೇಶನ್ ಗ್ರೋತ್ ಬಗ್ಗೆ ನಮ್ಮ ಕರ್ನಾಟಕದಲ್ಲಿ ಒಂದು ಒಳ್ಳೆಯ ವಾತಾವರಣವನ್ನು

ಸೃಷ್ಟಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಬರ್ತ್‌ರೇಟ್ 27.9 ಇದ್ದರೆ ಡೆತ್‌ರೇಟ್ 8.7 ಇದೆ. ಲೈಫ್‌ಟೈಮ್: 62.5 ಇರುತ್ತವೆ. ಅದು ಇಂಡಿಯನ್ ಅವರೇಜ್‌ನಲ್ಲಿ 58.1 ವರ್ಷ ಎಂದು ಇದೆ. ಅಲ್ಲಿ ಡೆತ್‌ರೇಟ್ 10.2 ಇದ್ದರೆ ಈ ಪರ್ಸೆಂಟೇಜನ್ನು ನಾವು ನೋಡಿದಾಗ ಕರ್ನಾಟಕ ರಾಜ್ಯದಲ್ಲಿ we have got less death rate and longevity of life when compared to all-India average. Average expectancy of life was 26 years when we got Independence but now it is 58 years. It is tremendous. How it has happened ? It is not by "mantra" or "Miracle". It is because of health care. ಎಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನ.

ಇವತ್ತು "ಶುಶ್ರೂಷ" ಯೋಜನೆಯ ಬಗ್ಗೆ ಬಹಳಷ್ಟು ಜನರು ಬಹಳ ಹಗುರಾಗಿ ಮಾತನಾಡಿದ್ದಾರೆ. ಬಹಳ ಕಡಿಮೆ ಲೆಕ್ಕಾಚಾರದಲ್ಲಿ ಮಾತನಾಡಿದ್ದಾರೆ. ಲೈಫ್‌ಎಕ್ಸ್‌ಪೆಕ್ಟನ್ಸಿ 62.2 ಅಂದರೆ ಅದು ಸರಾಸರಿ 58 ವರ್ಷಕ್ಕೆ ಹೋಗಿದೆ ಅಂದರೆ 26 ವರ್ಷಗಳಲ್ಲಿ ಹೆಲ್ತ್‌ಕೇರ್ ಅಥವಾ ಪ್ರಿವೆಂಟಿವ್ ಆಸ್ಪೆಕ್ಟ್‌ನಲ್ಲಿ ಎಷ್ಟೊಂದು ಹಣ ಖರ್ಚಾಗಿದೆ, ಎಷ್ಟು ಗುರಿಯನ್ನು ನಾವು ಸಾಧಿಸಿದ್ದೇವೆ ಎಂದರೆ ಇನ್ನೊಂದು ಪ್ರಪಂಚದಲ್ಲಿಯೇ ಹೆಮ್ಮೆ ಪಡತಕ್ಕಂಥ ವಿಚಾರವಾಗಿದೆ. ಇದನ್ನು ನಾವು ಮಾಡಿದ್ದೇವೆ.

The international organisations have appreciated our growth and our improvement. Whereas ourselves sitting here as representatives of the people we do not appreciate these things. We never talk about these things, not even a single word.

ಯೋಜನಾ ಆಯೋಗದಲ್ಲಿ ನಮ್ಮ ಇಷ್ಟೊಂದು ಎಲ್ಲಾ ರೆಕಾರ್ಡ್ಸ್ ಇದ್ದು ಇಷ್ಟು ಸಾಧನೆಯನ್ನು ನಾವು ಮಾಡಿರತಕ್ಕಂಥ ಸಂದರ್ಭದಲ್ಲಿ, When there are records why should we criticise each other. ಒಂದು ಒಳ್ಳೆಯ ಮಾತನ್ನು ಒಳ್ಳೆಯದು ಒಳ್ಳೆಯದು ಎಂಬ ಮಾತನ್ನು ಹೇಳಬೇಕಾಗುತ್ತದೆ. ಕೆಟ್ಟದ್ದನ್ನು ಕೆಟ್ಟದ್ದು ಎಂದು ಹೇಳಬೇಕಾಗುತ್ತದೆ. So many people were talking about corruption in administration. Who are responsible and where it has gone wrong ? Every body is repsonsible for that.

ಅದನ್ನು ಅಕ್ಸೆಪ್ಟ್ ಮಾಡಿಕೊಳ್ಳಲಿಕ್ಕೆ ಬಹಳಷ್ಟು ಜನ ತಯಾರಾಗಿಲ್ಲ. ಏಕೆಂದರೆ ಎವೆರಿಬಡಿ ಎಂದರೆ ನಾನೂ ಸೇರಿಕೊಂಡು ಬಿಡ್ತೀನಲ್ಲ ಅಂತ. ನಿಜವನ್ನು ಒಪ್ಪಿಕೊಳ್ಳೋದಿಕ್ಕೆ ತಪ್ಪೇನಿದೆ? ನಾವೆಲ್ಲ ಯಾರು? ಬಿಫೋರ್ ಇಂಡಿಪೆಂಡೆನ್ಸ್ ಯೂರೋಪಿಯನ್ನರವರು ನಮ್ಮನ್ನೆಲ್ಲ ಮ್ಯಾನೇಜ್ ಮಾಡ್ತಾ ಇದ್ರು. ಇವತ್ತು ನಾವೇ ಇರೋದು. ತಾಲ್ಲೂಕು ಆಫೀಸಿನಲ್ಲೂ ನಾವೇ ಇರುವುದು, ಸೆಕ್ರೆಟೆರಿಯೇಟ್‌ನಲ್ಲೂ ನಾವೇ ಇರುವುದು, ಆಳತಕ್ಕವರೂ ನಾವೇ, ಹೀಗಿರುವ ಸಂದರ್ಭದಲ್ಲಿ Why things are happening, because there is no principle in life. We are doing politics for convenience not for principle. Politics for their own convenience. That's why I think these things are happening. ಆದ್ದರಿಂದ ಅಧ್ಯಕ್ಷಿಣಿಯವರೇ ಹೆಲ್ತ್‌ಕೇರ್‌ನಲ್ಲಿ ಕೂಡ ಕರ್ನಾಟಕ ರಾಜ್ಯ ಒಳ್ಳೆಯ ಸಾಧನೆ ಮಾಡಿದೆ. ಈ ಸಾರಿಯೂ ಕೂಡ ಸಾಕಷ್ಟು ಹಣವನ್ನು ಹೆಲ್ತ್‌ಕೇರ್‌ಗೋಸ್ಕರ ಕೊಟ್ಟಿದೆ ಎನ್ನುವ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಉಪಾಧ್ಯಕ್ಷಿಣಿಯವರು: ನಂಜಪ್ಪನವರೇ ಈಗ ಎರಡು ಗಂಟೆಯಾಗಿದೆ, ನಾವೆಲ್ಲಗೂ ಕುಳಿತುಕೊಳ್ಳಬೇಕು ಎಂದು ಒಪ್ಪೋದಾದರೆ ಕಂಟಿನ್ಯೂಯಸ್ಸಾಗಿ ಕೂಡೋಣ. ಈಗ ಸಭೆ ಮುಂದುವರೆದು 3 ಗಂಟೆಗೆ ಮತ್ತೆ ಸೇರುವುದು.

(ಸದನವು ಮಧ್ಯಾಹ್ನ 2 ಗಂಟೆ 02 ನಿಮಿಷಕ್ಕೆ ಮುಂದೂಡಿ 3 ಗಂಟೆಗೆ ಸೇರಲು ನಿರ್ಧರಿಸಿತು)

(ಸದನವು ಮಧ್ಯಾಹ್ನ 3.45 ನಿಮಿಷಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷಿಣಿಯವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಪೀಠವನ್ನು ಅಲಂಕರಿಸಿದರು)

## 1992-93 ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ ಮುಂದುವರಿದ ಚರ್ಚೆ

ಡಾ: ಎನ್. ಬಿ. ನಂಜಪ್ಪ ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಆಯವ್ಯಯದಲ್ಲಿರುವ 2158 ಕೋಟಿ 84 ಲಕ್ಷ ರೂಪಾಯಿಗಳ ಬಗ್ಗೆ ಬೆಳಿಗ್ಗೆ ಮಾತಾನಾಡುತ್ತಾ ಅನೇಕ ವಿಧಗಳಲ್ಲಿ ಇದು ಬಹಳ ಎತ್ತರದ ಮತ್ತು ಒಳ್ಳೆಯ ಬಜೆಟ್ ಎನ್ನುವ ಮಾತನ್ನು ಹೇಳುತ್ತಿದ್ದೆ ಇದು ಯಾವ ಕಾರಣಗಳಿಂದ ಎಂದರೆ ಈಗ ಇಲ್ಲಿಯವರೆಗೆ ಸಂಪ್ರದಾಯ ಪ್ರತಿ ರಾಜ್ಯ ಕೂಡ ಪ್ರತಿ ವರ್ಷ ಓವರ್‌ಡ್ರಾಫ್ಟ್‌ನ್ನು ತೆಗೆದುಕೊಂಡು ಸರ್ಕಾರವನ್ನು ನಡೆಸತಕ್ಕಂಥ ಹವ್ಯಾಸವನ್ನು ಇಟ್ಟುಕೊಂಡು ಬಂದಿದೆ, ನಮ್ಮ ರಾಜ್ಯವೂ ಕೂಡ ಹಿಂದಿನ ಎಲ್ಲಾ ಆಯವ್ಯಯವನ್ನು ತೆಗೆದರೆ ಪ್ರತಿ ವರ್ಷ ಕೂಡ ಸರ್ಕಾರದ ಆರ್ಥಿಕ ವ್ಯವಸ್ಥೆ ಓವರ್‌ಡ್ರಾಫ್ಟನಿಂದಲೇ ನಡೆಯತಕ್ಕಂಥ ಹವ್ಯಾಸ ಇಟ್ಟುಕೊಂಡಿದ್ದರು. ಈಗ ಕಳೆದ ವರ್ಷ ಮತ್ತು ಅದರ ಹಿಂದಿನ ವರ್ಷ ಕಠಿಣ ಆರ್ಥಿಕ ಪರಿಸ್ಥಿತಿ ಇದ್ದಂಥ ಸಮಯ. ಅದಾದ ನಂತರ ನಮ್ಮ ಸರ್ಕಾರ ಬಂದ ನಂತರ ಈ ಎರಡು ವರ್ಷಗಳಲ್ಲಿ ಕಳೆದ ವರ್ಷ ಓವರ್‌ಡ್ರಾಫ್ಟ್ ಅನ್ನು ತೆಗೆದುಕೊಳ್ಳದೆ ನಮ್ಮ ಆರ್ಥಿಕ ವ್ಯವಸ್ಥೆ ಸುಗಮವಾಗಿ ನಡೆದಿರತಕ್ಕಂಥಾದ್ದು ಇದೆ. ಈ ವರ್ಷ 2158 ಕೋಟಿ 84 ಲಕ್ಷ ರೂಪಾಯಿಗಳ ಆಯವ್ಯಯವನ್ನು ಮಂಡನೆ ಮಾಡಿರತಕ್ಕಂಥಾದ್ದು. ಅದನ್ನು ಮಂಡನೆ ಮಾಡಿರತಕ್ಕಂಥ ಸಮಯದಲ್ಲಿ ಯಾವ ಟ್ಯಾಕ್ಸೇಶನ್ ಕೂಡ ಜಾಸ್ತಿ ಮಾಡದೆ ಬಜೆಟ್‌ಅನ್ನು ತಯಾರು ಮಾಡಿರತಕ್ಕಂಥಾದ್ದು, ಅಲ್ಲದೆ, ಯಾವ ಎಕ್ಸ್‌ಟ್ರಾ ಟ್ಯಾಕ್ಸೇಶನ್ ಕೂಡ ಹಾಕದೆ ಅನಂತರ ಈ ಆಯವ್ಯಯವನ್ನು ಮಾಡುವಂಥ ಸಮಯದಲ್ಲಿ ಇಡೀ ನಮ್ಮ ದೇಶದಲ್ಲಿ ನಮ್ಮ ರಾಜ್ಯ ಮೊದಲನೆ ಸ್ಥಾನ ಪಡೆದಿರತಕ್ಕಂಥಾದ್ದು ಮತ್ತು ಈ ಗ್ರಾಮೀಣಾಭಿವೃದ್ಧಿಗೆ ಎಷ್ಟು ಆದ್ಯತೆಯನ್ನು ಕೊಡಬೇಕೊ ಅಷ್ಟು ಆದ್ಯತೆಯನ್ನು ಕೊಟ್ಟಿರತಕ್ಕಂಥಾದ್ದು ಆಗಿದೆ. ಈ ಒಂದು ಆಯವ್ಯಯವನ್ನು ನೋಡಿದಾಗ 2158 ಕೋಟಿ 84 ಲಕ್ಷ ರೂಪಾಯಿಗಳಲ್ಲಿ ಸುಮಾರು 1500 ಕೋಟಿ ರೂಪಾಯಿಗಳು ಹಳ್ಳಿಯ ಚಿತ್ರವನ್ನು ಬದಲಾವಣೆ ಮಾಡತಕ್ಕಂಥ ರೈತನ ಏಳಿಗೆಯನ್ನು ಕಾಪಾಡತಕ್ಕಂಥ ಮತ್ತು ಹಿಂದೆ ರೈತನಿಗೆ ಇದ್ದಂಥ ಅನೇಕ ಕಷ್ಟಗಳನ್ನು ಪರಿಹಾರ ಮಾಡತಕ್ಕಂಥದ್ದಾಗಿದೆ. ಬಹಳ ಮುಖ್ಯವಾಗಿ ಬೇಕಾಗಿರತಕ್ಕಂಥಾದ್ದು ವಿದ್ಯುಚ್ಛಕ್ತಿ. ರಸ್ತೆಗಳು ಈಗ ಕೆಟ್ಟು, ಹಾಳಾಗಿ ಹೋಗಿರುವಂಥ ಸಂದರ್ಭದಲ್ಲಿ ರಸ್ತೆಗಳ ಕಾಮಗಾರಿಗೆ ಸಾಕಷ್ಟು ಹಣವನ್ನು ಒದಗಿಸಿರುವಂಥದ್ದು ಕುಡಿಯುವ ನೀರಿನ ವ್ಯವಸ್ಥೆ ಮಾಡಿರತಕ್ಕಂಥದ್ದು ಮತ್ತು ಸ್ಯಾನಿಟೇಶನ್‌ಗೆ ಬಹಳ ಆದ್ಯತೆಯನ್ನು ಕೊಟ್ಟಿರತಕ್ಕಂಥಾದ್ದು, ಸ್ಕೂಲ್ ಬಿಲ್ಡಿಂಗ್‌ಗಳಿಗೆ ಆದ್ಯತೆ ಕೊಟ್ಟಿರತಕ್ಕಂಥಾದ್ದು. ಅನೇಕ ವರ್ಷಗಳಿಂದ ಸ್ಕೂಲುಗಳಿಗೆ ಸಾವಿರಾರು ಜನ ಉಪಾಧ್ಯಾಯರು ಇಲ್ಲದೇಇರತಕ್ಕಂಥ ಶಾಲೆಗಳನ್ನು ನೋಡುತ್ತಿದ್ದೇವೆ, ಅದನ್ನು ಸರಿಪಡಿಸತಕ್ಕಂಥ ವ್ಯವಸ್ಥೆಗೆ ಕ್ರಮ ಮತ್ತು ಆರೋಗ್ಯ ಇಲಾಖೆಯಲ್ಲಿ ಸಾಕಾದಷ್ಟು ಡಾಕ್ಟರುಗಳನ್ನು ನೇಮಕಾತಿ ಮಾಡತಕ್ಕಂಥ ಒಂದು ವ್ಯವಸ್ಥೆ.

ಹೀಗೆ ಅದರಲ್ಲಿ ಸುಮಾರು 1500 ಕೋಟಿ ರೂಪಾಯಿಗಳನ್ನು ಹಳ್ಳಿಯ ರೈತರ ಉದ್ಧಾರಕ್ಕಾಗಿಯೇ ಮಾಡತಕ್ಕ ಕೆಲಸವನ್ನು ಈ ಬಜೆಟ್‌ನಲ್ಲಿ ಅಳವಡಿಸಿದೆ ಎನ್ನತಕ್ಕ ಮಾತನ್ನು ಬಹಳ ಸಂತೋಷದಿಂದ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಹೊಸ ಸ್ಕೀಮ್‌ಗಳಾದ ಅಕ್ಷಯ, ಆಶ್ರಯ, ಆರಾಧನ, ಶುಶ್ರೂಷ ಮತ್ತು ವಿಶ್ವ ಇವುಗಳೆಲ್ಲ ಎಂಥ ಒಳ್ಳೆಯ ಕಾರ್ಯಕ್ರಮಗಳೆಂದರೆ ನಿಜವಾಗಿಯೂ ಕೂಡ ಇದು ಶ್ಲಾಘನೀಯವಾದುದು ಎಂದು ಹೇಳಬೇಕಾಗುತ್ತದೆ. ಈ ಸಹೊಸ ಹೆಸರುಗಳನ್ನು ಕೇಳುತ್ತಿದ್ದರೆ ನಿಜವಾಗಿಯೂ ಮೂಲಭೂತವಾದ ಅನೇಕ ಒಳ್ಳೆಯ ಕೆಲಸಗಳನ್ನು ಮಾಡತಕ್ಕಂಥ ಒಂದು ಅವಕಾಶವಾಗಿದೆ ಎನ್ನತಕ್ಕ ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅದರಲ್ಲಿಯೂ ಕೂಡ ಈ 'ವಿಶ್ವ' ಕಾರ್ಯಕ್ರಮ ಮತ್ತು 'ಆಶ್ರಯ' ಕಾರ್ಯಕ್ರಮ ಇವೆರಡೂ ಕೂಡ revolutionary rural development schemes ಎಂದರೆ ತಪ್ಪಾಗಲಾರದು. ಈ ವಿಶ್ವ ಕಾರ್ಯಕ್ರಮ ಏನು ಇದೆ ಅದು ಇವತ್ತು ಬಹಳ ಸಣ್ಣದಾಗಿ ಕಾಣಬಹುದು ಅದಕ್ಕೆ ಮೊದಲನೆಯ ವರ್ಷವೇ ಸಾಕಷ್ಟು ಹಣವನ್ನು ಒದಗಿಸತಕ್ಕ ಕೆಲಸ ಈಗ ಆಗಿದೆ. ಇದನ್ನು ಮುಂದೆ ದೀರ್ಘವಾಗಿ ಯೋಚನೆ ಮಾಡಿದರೆ ಗಾಂಧೀಜಿಯವರು ಯಾವ ಕನಸನ್ನು ಕಂಡಿದ್ದರೋ ಅದು ನನಸಾಗುವ ಕಾಲ ಬಂದಿದೆ. ನಾವು ಏನು ಜಪಾನ್, ಜರ್ಮನಿ ಎಂದು ಮಾತನಾಡುತ್ತೇವೊ ಅದರಂತೆ ಇದೂ ಎಂದಾದರೊಂದು ದಿವಸ ಉತ್ತಮ ಹೆಸರನ್ನು ಪಡೆಯುವುದಕ್ಕೆ ಈ ವಿಶ್ವ ಕಾರ್ಯಕ್ರಮ ನಿಜವಾಗಿಯೂ ನೆರವಾಗುತ್ತದೆ ಎನ್ನತಕ್ಕ ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಈ 'ವಿಶ್ವ' ಕಾರ್ಯಕ್ರಮದಲ್ಲಿ ಲಕ್ಷಾಂತರ ಜನರ ಜೀವನೋಪಾಯವನ್ನು ಮಾಡುವುದಕ್ಕೆ ದಾರಿ ಮಾಡಿಕೊಡುವುದಲ್ಲದೆ ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಮಾಡಿಕೊಡುವುದಲ್ಲದೆ ನಮ್ಮ ದೇಶದ ಆರ್ಥಿಕ ವ್ಯವಸ್ಥೆಯನ್ನು ಮೂಲಭೂತವಾಗಿ ಬದಲಾವಣೆ ಮಾಡತಕ್ಕ ಕಾರ್ಯಕ್ರಮ ಇದಾಗುತ್ತದೆ ಎಂದರೆ ತಪ್ಪಾಗಲಾರದು cottage industries and small scale industries ಭಾರತದಲ್ಲಿ ಮಾಯವಾದಂಥ ಕಾಲದಲ್ಲಿ ಪ್ರಪ್ರಥಮವಾಗಿ ಕರ್ನಾಟಕ ರಾಜ್ಯದಲ್ಲಿ

ಇದರ ಪುನರುಜ್ಜೀವನ ಮಾಡಿದ್ದಾರೆ. ಇದು ಒಂದು ಪ್ರಗತಿಯ ಮಾರ್ಗಸೂಚಿ ಎಂದು ಹೇಳಿದರೆ ತಪ್ಪಾಗಲಾರದು. ಈ 'ವಿಶ್ವ' ಕಾರ್ಯಕ್ರಮ ಲಕ್ಷಾಂತರ ಜನರಿಗೆ ಉದ್ಯೋಗ ಬಡಜನರ ಆರ್ಥಿಕ ಮಟ್ಟವನ್ನು ಎತ್ತತಕ್ಕಂಥ ಒಂದು ದಿಟ್ಟ ಕಾರ್ಯಕ್ರಮವೆಂದು ನಾನು ಕರೆಯುವುದಕ್ಕೆ ಇಚ್ಛೆಪಡುತ್ತೇನೆ. ಮತ್ತು ಆರಾಧನ, ಶುಶ್ರೂಷ ಕಾರ್ಯಕ್ರಮಗಳ ಬಗ್ಗೆ ನಾನು ಈಗಾಗಲೆ ಸಾಕಷ್ಟು ಮಾತನಾಡಿದ್ದೇನೆ. ಆಶ್ರಯ ಯೋಜನೆಯ ಕಾರ್ಯಕ್ರಮ ಬಹಳ ಚೆನ್ನಾಗಿದೆ. ಆದರೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸಾಕಷ್ಟು ಹಣವನ್ನು ಈ ಆಶ್ರಯ ಯೋಜನೆಗೆ ಕೊಟ್ಟರೂ ಕೂಡ ಅನೇಕ ಗ್ರಾಮಗಳಲ್ಲಿ ಈ ಆಶ್ರಯ ಯೋಜನೆಯಲ್ಲಿ ಜಮೀನುಗಳನ್ನು ಪಡೆದುಕೊಳ್ಳಲು ಬಹಳ ಕಷ್ಟವಾದ ಪರಿಸ್ಥಿತಿ ಇದೆ ಅದನ್ನು ಪರಿಹಾರ ಮಾಡತಕ್ಕ ವ್ಯವಸ್ಥೆ ಸರ್ಕಾರದ ಮೂಲಕ ಆಗಬೇಕು ಅದರ ಜೊತೆಗೆ ನಾವು ಏನು ಈ ಹೊಸ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರೂ ಕೂಡ ಸರ್ಕಾರ ಇದಕ್ಕೆ ಇದನ್ನು ಜಾರಿತರಲಿಕ್ಕೆ ತೀವ್ರವಾದ ಕಾರ್ಯಕ್ರಮವನ್ನು ಹಾಕಿಕೊಂಡು ಇದರ ಪೂರ್ಣ ಅನುಕೂಲವನ್ನು ಪಡೆಯುವುದಕ್ಕೆ ಕಲಸ ಮಾಡಬೇಕಾಗುತ್ತದೆ. ಅದನ್ನು ಮಾಡದೆ ಹೋದರೆ, ಬರೀ ಹೆಸರು ಮಾತ್ರ ಉಳಿಯುವಂತೆ ಮಾಡಬಾರದು. ಆದುದರಿಂದ ಸರ್ಕಾರ ಹಣವನ್ನು ಒದಗಿಸುವುದರ ಜೊತೆಗೆ ಈ ಕಾರ್ಯಕ್ರಮ ಬಹಳ ಚೆನ್ನಾಗಿ ಆಗಬೇಕಾದರೆ ಈ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಜನರು, ಶಾಸಕರಿಂದ ಹಿಡಿದು ಅಲ್ಲಿರತಕ್ಕ ಅಧಿಕಾರಿ ವರ್ಗದವರೆಲ್ಲರೂ ಕೂಡ ಇದರ ಬಗ್ಗೆ ಚಿಂತನೆ ಮಾಡಿ ಚೆನ್ನಾಗಿ ಕೆಲಸ ಮಾಡಿದರೆ ಇದು ಬಹಳ ಒಳ್ಳೆಯ ಕಾರ್ಯಕ್ರಮವಾಗುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಈ ಬಜೆಟ್ ಒಳ್ಳೆಯ ಕ್ರಾಂತಿಕಾರಿ ಬಜೆಟ್, ಮತ್ತು ನಮ್ಮ ದೇಶದ ಕೈಗಾರಿಕಾ ಕ್ಷೇತ್ರದಲ್ಲಿ ಮೊದಲನೆ ಸ್ಥಾನವನ್ನು ಪಡೆದಿದೆಯೆಂದು ಹೇಳುವಂಥ ಸಂದರ್ಭದಲ್ಲಿ ಅನೇಕ ರಿಯಾಯಿತಿಗಳನ್ನು ಕೂಡ ಇವತ್ತು ಸರ್ಕಾರ ಕೊಟ್ಟಿದೆ. ಒಂದು ವೃತ್ತಿ ತೆರಿಗೆ ವಿನಾಯಿತಿಯಾಗಿದೆ; ಇದೆಲ್ಲದಕ್ಕಿಂತ ಹೆಚ್ಚಾಗಿ ಇವತ್ತು ರೈತರಿಗೆ ವಿದ್ಯುಚ್ಛಕ್ತಿಯಲ್ಲಿ ವಿನಾಯಿತಿ ಸಿಕ್ಕಿದೆ ಹೆಚ್ಚು ಮೋಟರ್‌ಗಳನ್ನು ಇಟ್ಟು ವ್ಯವಸಾಯ ಮಾಡತಕ್ಕಂತ ರೈತರಿಗೆ ಪೂರ್ಣ ವಿನಾಯಿತಿಯನ್ನು ಇವತ್ತು ಕೊಟ್ಟು, ಯಾವುದೇ ಹಣವನ್ನು ರೈತನು ಕೆ. ಇ. ಬಿ. ಗೆ ಕಟ್ಟದೆ ಅವನು ಪಂಪ್‌ಸೆಟ್‌ನ್ನು ಓಡಿಸತಕ್ಕಂತಹ ಒಂದು ವ್ಯವಸ್ಥೆಯನ್ನು ಮಾಡಿರುವುದು ನಮ್ಮ ಸರ್ಕಾರದ ಒಂದು ದಿಟ್ಟ ಹೆಜ್ಜೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರಿಂದ ಏನಾಗುತ್ತದೆಂದರೆ ಏನು ಕರ್ನಾಟಕ ರಾಜ್ಯದಲ್ಲಿ ಈಗ 2-3 ವರ್ಷಗಳಿಂದ ಮುಂಚೆ ಫುಡ್ ಪ್ರೊಡಕ್ಷನ್ ಇಳಿಮುಖ ಆಗುತ್ತಿದ್ದಂಥದ್ದನ್ನು ತಪ್ಪಿಸತಕ್ಕಂತಹ ಯೋಜನೆ ಕೂಡ ಆಗಿದೆ. ಅದರ ಜೊತೆಗೆ ಇಂಡಿಯಾ ದೇಶದ ಎಲ್ಲಾ ರಾಜ್ಯಗಳಲ್ಲಿ ಅದರಲ್ಲೂ ಪಂಜಾಬ್‌ನಲ್ಲಿ ದೊಡ್ಡ ರೆವ್‌ಲ್ಯೂಷನ್ ಆಗಿತ್ತು. ಅನೇಕ ಕಾರಣಗಳಿಂದ ಇವತ್ತು ಅದು ಸ್ಥಗಿತಗೊಂಡಿದೆ. ಅದೇ ರೀತಿ ಇವತ್ತು ಎಲ್ಲಾ ಅಗ್ರಿಕಲ್ಚರ್ ಇಂಡಸ್ಟ್ರೀಸ್‌ಗೆ ಅಗ್ರಿಕಲ್ಚರಿಸ್ಟಾಗಿ ಉಳಿಯತಕ್ಕಂಥ ಈ ರೂರಲ್ ಇಂಡಿಯಾಕ್ಕೆ ಈ ವಿಶ್ವ ಯೋಜನೆ ಮತ್ತು ಪಂಪ್‌ಸೆಟ್‌ಗೆ ಕೊಟ್ಟಿರತಕ್ಕಂತಹ ಈ ವಿದ್ಯುಚ್ಛಕ್ತಿ ರಿಯಾಯಿತಿ ಇವೆಲ್ಲವುಗಳಿಂದ ಕರ್ನಾಟಕ ರಾಜ್ಯದಲ್ಲಿ ಒಂದು ಹಸಿರು ಕ್ರಾಂತಿ ಆಗುವುದಕ್ಕೆ ಒಳ್ಳೆಯದಾಗುತ್ತದೆ. ಇದರ ಮೂಲಕ ಒಳ್ಳೆಯ ಆಹಾರ ಉತ್ಪಾದನೆಯನ್ನು ಮಾಡುವಂತಹ ಶಕ್ತಿಯನ್ನು ಕರ್ನಾಟಕ ರಾಜ್ಯ ಪಡೆಯುವುದಕ್ಕೆ ಬಹಳ ಒಳ್ಳೆಯದಾಗುತ್ತದೆಂದು ಕೂಡ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇವೆಲ್ಲದರ ಒಟ್ಟು ಸಾರಾಂಶವೆಂದರೆ ನನಗಾದರೂ ಕೂಡ ಈ ಎಲ್ಲಾ ಕಾರಣಗಳಿಂದ ಕರ್ನಾಟಕ ರಾಜ್ಯದಲ್ಲಿ ಇವತ್ತು ಅರ್ಥ ಮಂತ್ರಿಯವರು ಒಳ್ಳೆಯ ಬಜೆಟ್‌ನ್ನು ಮಂಡನೆ ಮಾಡಿದ್ದಾರೆ. ಈ ಬಜೆಟ್ ಮಂಡನೆ ಮಾಡಿದ ಮೇಲೆ ಈಗಾಗಲೇ ಇದರ ಮೇಲೆ ಒಳ್ಳೆಯ ರಿಯಾಕ್ಷನ್ ಕೂಡ ಬಂದಿದೆ. ಇದರ ಮೇಲೆ ಯಾರೂ ಹೆಚ್ಚಿಗೆ ಕಾಮೆಂಟ್ ಮಾಡಿದ್ದುದು ಕಾಣಲಿಲ್ಲ. ಅಂದರೆ ಜನಜನಿತವಾಗಿ ಕರ್ನಾಟಕದ ಜನತೆ ಈ ಒಂದು ಆಯವ್ಯವನ್ನು ಮನಃಪೂರ್ವಕವಾಗಿ ಒಪ್ಪಿಕೊಂಡಿದ್ದಾರೆ. ಇದರಿಂದ ಸಾಕಷ್ಟು ಬದಲಾವಣೆಯನ್ನು ನಮ್ಮ ಸರ್ಕಾರ ಮಾಡುವುದಕ್ಕೆ ಒಂದು ಶಕ್ತಿಯನ್ನು ಪಡೆದುಕೊಂಡಿದೆ ಎನ್ನುವ ಮಾತನ್ನು ಹೇಳಿ ಈ ಆಯವ್ಯಯವನ್ನು ನಿಜವಾಗಲೂ ಕೂಡ it is a progressive and revolutionary budget ಎನ್ನುವ ಮಾತನ್ನು ಹೇಳಿ ಈ ಬಜೆಟ್‌ನ್ನು ಸಂಪೂರ್ಣವಾಗಿ ನಾನು ಬೆಂಬಲಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು):- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಅರ್ಥಸಚಿವರೂ ಆಗಿರುವ ಮುಖ್ಯಮಂತ್ರಿಗಳು ಇಲ್ಲಿ ಮಂಡನೆ ಮಾಡಿದಂತಹ 1992-93 ನೇ ಸಾಲಿನ ಬಜೆಟ್‌ನ್ನು ಸ್ವಾಗತ ಮಾಡುತ್ತಿದ್ದೇನೆ. ಮೊನ್ನೆ ತಾನೇ ಇದಕ್ಕಿಂತ ಮೊದಲು ಕೇಂದ್ರ ಸರ್ಕಾರದ ಬಜೆಟ್ ಮಂಡನೆ ಆಯಿತು. ಇಡೀ ರಾಷ್ಟ್ರದಲ್ಲಿ ಕೇಂದ್ರ ಸರ್ಕಾರದ ಬಜೆಟ್‌ನ್ನು ಕೂಡ ರಾಷ್ಟ್ರದ ಜನತೆ ಸ್ವಾಗತ ಮಾಡಿದರು. ಕರ್ನಾಟಕ ಬಜೆಟ್ ಯಾವ ರೀತಿಯಲ್ಲಿ ಇರುತ್ತದೆ ಎನ್ನುವ ಆತುರದಲ್ಲಿ ಇದ್ದಂಥ ಸಂದರ್ಭದಲ್ಲಿ ಅರ್ಥಸಚಿವರಾಗಿರುವ ಮಾನ್ಯ ಮುಖ್ಯಮಂತ್ರಿಗಳು

1992-93 ನೇ ಇಸವಿಯ ಬಜೆಟ್‌ನ್ನು ಇಲ್ಲಿ ಮಂಡನೆ ಮಾಡಿದ್ದಾರೆ. ಇದು ತುಂಬಾ ಅರ್ಥಪೂರ್ಣವಾದಂಥದ್ದು, ಗ್ರಾಮೀಣ ಜನರನ್ನು ಸ್ಪಂದನ ಮಾಡುವಂಥ ಅದರಲ್ಲೂ ಹೆಚ್ಚಾಗಿ ರೈತರ ಒಂದು ಎತ್ತಿದ ಕೈ ಎನ್ನುವ ದೃಷ್ಟಿಯಲ್ಲಿ ಇವತ್ತು ದೀರ್ಘವಾದಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಕರ್ನಾಟಕದ ಏಳಿಗೆಗೆ ಒಳ್ಳೆಯ ರೀತಿಯಲ್ಲಿ ಪೂರಕವಾಗುವಂತಹ ಒಂದು ಬಜೆಟ್ ಇವತ್ತು ಮಂಡನೆಯಾಗಿದೆ. ಇವತ್ತು ನಮ್ಮ ವಿರೋಧ ಪಕ್ಷದ ಸದಸ್ಯರುಗಳು ಒಂದು ಗಾದೆ ಮಾತನ್ನು ಹೇಳುತ್ತಾರೆ. "ಮೊಸರಿನಲ್ಲಿ ಕಲ್ಲು ಹುಡುಕುತ್ತಾರೆ" ಎನ್ನತಕ್ಕ ರೀತಿಯಲ್ಲಿ ಒಂದು ನೆಪ ಹೇಳಿಕೊಂಡು ಹೊರಗೆ ಹೋಗಿದ್ದಾರೆ. ನಿಜವಾಗಿಯೂ ಮಾನ್ಯ ವಿರೋಧ ಪಕ್ಷದ ಸದಸ್ಯರು ಇಲ್ಲಿ ಭಾಗವಹಿಸಿದ್ದಿದ್ದರೆ ಅವರು ಈ ಬಜೆಟ್‌ನ್ನು ಸ್ವಾಗತ ಮಾಡಿಯೇ ಮಾಡಬೇಕಾಗಿತ್ತು. ಮಾನ್ಯ ವಿರೋಧ ಪಕ್ಷದವರು ಎಂದರೆ ಎಲ್ಲದಕ್ಕೂ ವಿರೋಧ ಮಾಡುವಂಥ ಒಂದು ಪ್ರವೃತ್ತಿಯನ್ನು ಬೆಳೆಸಿಕೊಂಡಂಥ ವಿರೋಧಪಕ್ಷದವರು ಇವತ್ತು ತಮ್ಮ ಜವಾಬ್ದಾರಿಯಿಂದ ಹಿಂದೆ ಬಿದ್ದಿದ್ದಾರೆಂದರೆ ತಪ್ಪಾಗಲಿಕ್ಕಿಲ್ಲ. ಈ ಸದನದಲ್ಲಿ ಭಾಗವಹಿಸುವುದಕ್ಕೆ ಅವರಿಗೆ ಅವಕಾಶವಾಗಲಿಲ್ಲ. ನಾನು ಹಿಂದೆ ವಿರೋಧಪಕ್ಷದ ಸದಸ್ಯನಾಗಿ ಕೆಲಸಮಾಡಿದಂಥ ಸಂದರ್ಭದಲ್ಲಿ ಹಿಂದಿನ ಸರ್ಕಾರದವರೂ ಬಜೆಟನ್ನು ಮಂಡನೆ ಮಾಡಿದ್ದನ್ನು ನಾನು ಕೇಳಿದ್ದೇನೆ, ನೋಡಿದ್ದೇನೆ ಹಿಂದೆ ಎಲ್ಲಾ ಹೊರೆಯನ್ನೂ ಕೇಂದ್ರ ಸರ್ಕಾರದ ಮೇಲೆ ಹಾಕುತ್ತಿದ್ದರು. ಪ್ರತಿಯೊಂದು ಸಂದರ್ಭದಲ್ಲೂ ಕೇಂದ್ರ ಸರ್ಕಾರದ ಮೇಲೆ ಹೊರೆಯನ್ನು ಹಾಕತಕ್ಕದ್ದು ಮತ್ತು ಅದನ್ನು ದೂರುವಂಥ ಪ್ರವೃತ್ತಿ ಹಿಂದಿನ ಸರ್ಕಾರದಲ್ಲಿ ನಡೆಯುತ್ತಿತ್ತು. ಆದರೆ ಇವತ್ತು ಸಂಪೂರ್ಣವಾಗಿ ರಾಜ್ಯದ ಕರ್ತವ್ಯ, ಜವಾಬ್ದಾರಿಯನ್ನು ಗಮನದಲ್ಲಿಟ್ಟುಕೊಂಡು, ಜವಾಬ್ದಾರಿಯುತವಾಗಿ ಗ್ರಾಮಾಂತರ ಪ್ರದೇಶದ ಜನರಿಗೆ ಅದರಲ್ಲೂ ಕಡು ಬಡವರ ಬಗ್ಗೆ ಸ್ಪಂದನ ಮಾಡತಕ್ಕ ಬಜೆಟ್ ಈಗ ನಮ್ಮ ಕರ್ನಾಟಕ ರಾಜ್ಯದ ಜನರಿಗೆ ಮಂಡನೆ ಆಗಿದೆ. ಈ ಕಾರ್ಯಕ್ರಮಕ್ಕೆ, ಹೊಂದಿಕೊಂಡು, ಕಳೆದ 1991-92 ರಲ್ಲಿ ಪ್ರಾರಂಭ ಮಾಡಿದಂಥ ಕಾರ್ಯಕ್ರಮಗಳು ಅಂದರೆ ಅದು 'ಆಶ್ರಯ' ಯೋಜನೆ ಇರಬಹುದು 'ಅಕ್ಷಯ' ಯೋಜನೆ ಇರಬಹುದು, ಶುಶ್ರೂಷಾ ಕಾರ್ಯಕ್ರಮ ಯೋಜನೆ ಇರಬಹುದು, ಆರಾಧನಾ ಕಾರ್ಯಕ್ರಮ ಇರಬಹುದು, ಇದನ್ನೆಲ್ಲಾ ಒಳಗೊಂಡು ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ಕೊಡತಕ್ಕ ಕಾರ್ಯಕ್ರಮಗಳನ್ನು ಈ ಬಜೆಟ್‌ನಲ್ಲಿ ಅಳವಡಿಸಲಾಗಿದೆ. 1985 ರಲ್ಲಿ ನಾನು ಶಾಸಕ ಆಗಿದ್ದಾಗ ನಮ್ಮ ಊರಿನಲ್ಲಿ ಮನೆ ನಿವೇಶನಗಳನ್ನು ಕೊಡಬೇಕಾದರೆ ಹಿಂದೆ ಇದ್ದಂಥ ಸರ್ಕಾರದವರು ಒಂದು ನಿವೇಶನಕ್ಕೆ 800 ರೂ; 1000 ರೂ. ಗಳನ್ನು ಆ ಜಾಗದ ಮೌಲ್ಯ ಎಂದು ಕೊಡಬೇಕಾಗಿತ್ತು. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿ ಬಂದಮೇಲೆ ಇದರ ಒಂದು ಸ್ಪಂದನ ಇವರಿಗೆ ಇದ್ದುದರಿಂದ ನೇರವಾಗಿ ಕಡುಬಡವರಿಗೆ ರಿಯಾಯಿತಿ ದರದಲ್ಲಿ, ಧರ್ಮಾರ್ಥವಾಗಿ ಒಂದೊಂದು ತಾಲ್ಲೂಕಿನಲ್ಲಿ 5 ಸಾವಿರ ಮನೆ ನಿವೇಶನಗಳನ್ನು ಮಾರ್ಚಿ ತಿಂಗಳೊಳಗೆ ಕೊಡಲೇಬೇಕೆಂಬ ತೀರ್ಮಾನವನ್ನು ತೆಗೆದುಕೊಂಡು ಯಾರಿಗೆ ನಿವೇಶನ ಇಲ್ಲ ಅಂಥವರಿಗೆ ಕೊಡತಕ್ಕ ಒಂದು ಕ್ರಾಂತಿಕಾರಕ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ. ಆಶ್ರಯ ಯೋಜನೆಯ ಮುಖಾಂತರ ಹಿಂದಿನ ಸರ್ಕಾರ ಇದ್ದಾಗ ಒಂದೊಂದು ತಾಲ್ಲೂಕಿಗೆ 100-150 ಮನೆಗಳಿಗಿಂತ ಹೆಚ್ಚಿಗೆ ಕೊಡುತ್ತಿರಲಿಲ್ಲ, ಅದೂ ಕೂಡ 6500 ರೂ. ಗಳಿಗೆ ಒಂದೊಂದು ಮನೆಗೆ ಕೊಡಬೇಕಾಗಿತ್ತು. ಆದರೆ ಈ ವರ್ಷ ಇದೇ ಆಶ್ರಯ ಯೋಜನೆಯ ಮುಖಾಂತರ ಒಂದು ಮನೆಗೆ 15,000 ರೂಪಾಯಿನಂತೆ ಕೊಡುತ್ತಿದ್ದಾರೆ. ಅಂದರೆ ಒಂದು ಕೋಣೆ, ಒಂದು ಬಚ್ಚಲು, ಒಂದು ಟಾಯ್‌ಲೆಟ್ ಇರುವಂತೆ ಒಬ್ಬ ವ್ಯಕ್ತಿಗೆ ಏನೇನು ಅವಶ್ಯಕತೆ ಇದೆ ಅಷ್ಟನ್ನೂ ಅಳವಡಿಸಿಕೊಂಡು ಈ 15 ಸಾವಿರ ರೂ.ಗಳಲ್ಲಿ ಮನೆಯನ್ನು ಕಟ್ಟಿಸಿಕೊಡತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಗ್ರಾಮಾಂತರ ಪ್ರದೇಶದಲ್ಲಿ ಅತಿ ಅವಶ್ಯಕವಾಗಿ ಕಾರ್ಯಕ್ರಮ ಎಂದರೆ ಅದು ಮನೆ ನಿವೇಶನ ಕೊಡುವಂಥದು ಇರಬಹುದು ಅಥವಾ ಮನೆ ಕೊಡುವಂಥದ್ದು ಇರಬಹುದು, ಅದಕ್ಕೆ ಪೂರಕವಾಗಿ ಕೆಲಸಮಾಡುವಂಥ ಜವಾಬ್ದಾರಿಯನ್ನು ಸರ್ಕಾರ ಹಾಕಿಕೊಂಡಿದೆ. ಅದೇ ರೀತಿ ಅಕ್ಷಯ ಯೋಜನೆ ಕೂಡ. ಅಕ್ಷರ ಯೋಜನೆಯಿಂದ ವಿದ್ಯಾಭ್ಯಾಸವನ್ನು ಒಳ್ಳೆಯ ಹಂತದಲ್ಲಿ ತರಬಹುದೆಂದು ಯೋಚಿಸಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಇವತ್ತು 4ನೇ ತರಗತಿಯಿಂದ ಕೆಳಗೆ ಇರತಕ್ಕ ಮಕ್ಕಳಿಗೆ ಒಂದು ರೂ. ನಂತೆ ವೇತನ ಕೊಡತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಸರ್ಕಾರದವರು "ಶುಶ್ರೂಷಾ" ಕಾರ್ಯಕ್ರಮವನ್ನು ಗ್ರಾಮಾಂತರ ಪ್ರದೇಶದ ಜನರಿಗೋಸ್ಕರ ಹಮ್ಮಿಕೊಂಡು ಆ ಜನರಿಗೆ ಯಾವುದೇ ರೋಗರುಜಿನಗಳು ಬಂದಾಗ ಯಾವುದೋ ಒಂದು ಮೂಢನಂಬಿಕೆ ಇಟ್ಟುಕೊಂಡು ಆ ಊರಿನವರು ನೀಡತಕ್ಕಂಥ ಮದ್ದಿಗೋ ಅಥವಾ ಬೇರೆ ದೃಷ್ಟಿಯಲ್ಲಿ ಹೋಗುವಂಥ ಪರಿಸ್ಥಿತಿಯಲ್ಲಿ ಇರುವಾಗ ಸರ್ಕಾರನೇ ಒಂದು ರೀತಿಯ ಕಾರ್ಯಕ್ರಮಗಳನ್ನು ಜವಾಬ್ದಾರಿಯಿಂದ ಹಾಕಿಕೊಂಡು "ಶುಶ್ರೂಷಾ" ಕಾರ್ಯಕ್ರಮದ ಮುಖಾಂತರ ಗ್ರಾಮಾಂತರ ಪ್ರದೇಶದ ಎಲ್ಲ ಜನರನ್ನೂ ತಪಾಸಣೆ ಮಾಡಿ ಚಿಕಿತ್ಸೆ ನೀಡತಕ್ಕ ಒಂದು ಒಳ್ಳೆಯ ಯೋಜನೆಯನ್ನು ಹಾಕಿಕೊಂಡಿದ್ದಾರೆ.

ಈ ರೀತಿ ಜವಾಬ್ದಾರಿಯುತವಾದ ಕಾರ್ಯಕ್ರಮವನ್ನು ಹಾಕಿಕೊಂಡು ಶುಶ್ರೂಷೆ ಕಾರ್ಯಕ್ರಮದ ಮುಖಾಂತರ ಎಲ್ಲರನ್ನು ಕೂಡ ಚಿಕಿತ್ಸೆಗೆ ಒಳಪಡಿಸಿ ತಪಾಸಣೆಯನ್ನು ಮಾಡುವಂಥ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿದ್ದೇವೆ. ಉದಾಹರಣೆಗೆ ನಮ್ಮಲ್ಲಿ ಕಳೆದ ಸಲ ಒಂದು ವೈದ್ಯಕೀಯ ಶಿಬಿರವನ್ನು ಅಳವಡಿಸಿಕೊಂಡಿದ್ದೆವು. ಕಿದ್ವಾಯ್ ಮೆಮೋರಿಯಲ್ ಆಸ್ಪತ್ರೆಯ ಮುಖಾಂತರ ವೈದ್ಯಕೀಯ ಶಿಬಿರವನ್ನು ನಡೆಸಿದ ಸಂದರ್ಭದಲ್ಲಿ ಸುಮಾರು ಮೂರು ಸಾವಿರ ಜನರನ್ನು ತಪಾಸಣೆಗೆ ಒಳಪಡಿಸಿದೆವು. ಆ ಸಂದರ್ಭದಲ್ಲಿ 48 ಜನ ಕ್ಯಾನ್ಸರ್ ರೋಗಕ್ಕೆ ಒಳಗಾದವರನ್ನು ನಾವು ಪತ್ತೆ ಮಾಡಿದೆವು. ಈ ದಿಸೆಯಲ್ಲಿ ಕೆಲವೊಂದು ಪ್ರಾಣಕ್ಕೆ ಕಂಟಕವಾಗುವಂಥ ರೋಗಗಳು ನಮ್ಮ ಗ್ರಾಮೀಣ ಪ್ರದೇಶದ ಜನರ ತಿಳುವಳಿಕೆಗೆ ಬಾರದೆ ಇವತ್ತು ಎಷ್ಟೋ ರೋಗಗಳಿಗೆ ಆಹುತಿ ಆಗುವಂತವರು ಇದ್ದರು. ಈ ದಿಸೆಯಲ್ಲಿ ಅಲ್ಲೋ ಇಲ್ಲೋ ಈ ಕಾರ್ಯಕ್ರಮ ಈಗಾಗಲೇ ನಡೆದಿದ್ದು ಬಹಳ ಫಲಪ್ರದವಾಗಿ ಜನರು ಕೂಡ ಪ್ರೋತ್ಸಾಹ ಕೊಡುವಂಥ ಕಾರ್ಯಕ್ರಮ ಶುಶ್ರೂಷಾ ಕಾರ್ಯಕ್ರಮವಾಗಿದೆ.

ಇನ್ನು 'ಆರಾಧನಾ' ಕಾರ್ಯಕ್ರಮ, ಹರಿಜನರ ಕೇರಿಗಳಲ್ಲಿ, ಒಡ್ಡರ ಕೇರಿಗಳಲ್ಲಿ ಇಂಥ ಒಂದು ದೇವರನ್ನು ನಂಬುವಂಥ ಗುಡಿ ಗುಂಡಾರಗಳು ಇದ್ದರೂ ಕೂಡ ಅದಕ್ಕೆ ಯಾವುದೇ ರೀತಿಯಲ್ಲಿ ಒಂದು ಪುನರುಜ್ಜೀವನ ಕೊಡುವಂಥ ಕಾರ್ಯಕ್ರಮ ಇಲ್ಲಿಯವರೆಗೆ ಆಗಿಲ್ಲ. 'ಆರಾಧನಾ' ಕಾರ್ಯಕ್ರಮ ಮುಖಾಂತರ ಒಟ್ಟಿಗೆ ಸಾರ್ವಜನಿಕರು ಸೇರಿಕೊಂಡು ಪ್ರಾರ್ಥನೆ ಮಾಡತಕ್ಕಂಥ ಒಂದು ವ್ಯವಸ್ಥೆಯಾಗಿದೆ. ಇದಕ್ಕೆ ಇವತ್ತು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ದೊರಕುವಂಥ ಒಂದು ಪೂಜಾ ಕಾರ್ಯಕ್ರಮವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ಸಲದ ಚುನಾವಣೆಯಲ್ಲಿ ಆಯ್ಕೆಯಾದಂಥ ಪ್ರಥಮ ದಿನದಂದೆ ವಿಧಾನಮಂಡಲದ ಸದಸ್ಯರಾದಂಥ ಶ್ರೀಮಾನ್ ಯಡಿಯೂರಪ್ಪನವರು ಇಲ್ಲಿ ಧರಣಿ ಕುಳಿತಿದ್ದರು. ಪ್ರಮಾಣ ವಚನವನ್ನು ತೆಗೆದುಕೊಳ್ಳುವ ದಿವಸವೇ ಇಲ್ಲಿ ಧರಣಿ ಮಾಡಿದರು. ಅವರು ರೈತರ ಸಾಲ ಮನ್ನಾ ಮಾಡಬೇಕೆನ್ನುವುದನ್ನೇ ಒಂದು ಉದ್ದೇಶವಾಗಿಟ್ಟುಕೊಂಡಿದ್ದರು. ಹೆಚ್ಚಿನ ಅಂಶ, ರೈತರ ಸಾಲ ಮನ್ನಾಕ್ಕೂ ಮಾನ್ಯ ಯಡಿಯೂರಪ್ಪನವರಿಗೂ ಯಾವ ರೀತಿಯಾದ ಸಂಬಂಧವೇ ಇಲ್ಲ. ನಮಗಾದರೂ ಸಂಶಯಬರುತ್ತದೆ, ಏತಕ್ಕೆಂದರೆ ಅವರ ಪಕ್ಷಕ್ಕೆ ಪ್ರೋತ್ಸಾಹ ಕೊಡುವಂಥ ಜನರು ವರ್ತಕರು. ಇವತ್ತು ಸಾಲ ಮನ್ನ ಮಾಡಬೇಕೆಂದು ಕೇಳುತ್ತಿರುವುದರಿಂದ ಎಷ್ಟೋ ವರ್ಷಗಳಿಂದ ಸಹಕಾರಿ ವ್ಯವಸ್ಥೆ ಬಹಳ ಒಳ್ಳೆಯ ರೀತಿಯಲ್ಲಿ ನಡೆದುಕೊಂಡು ಬರುತ್ತಿತ್ತು. ಸ್ವಯಂ ಆಗಿ ಹಣವನ್ನು ಕಟ್ಟಲು ಅಡ್ಡಿಪಡಿಸಿದ್ದರಿಂದ ಆ ಸಹಕಾರಿ ಸಂಸ್ಥೆಗಳು ಸಂಪೂರ್ಣವಾಗಿ ನಾಶವಾಗುವಂಥ ಪರಿಸ್ಥಿತಿ ಉಂಟಾಯಿತು. ಹಿಂದೆ ಒಂದು ಸಲ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭನಲ್ಲಿ ರೈತರಿಗೆ ಬಡ್ಡಿ ಮನ್ನ ಮಾಡುವಂಥ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದರು.

ಶ್ರೀ ಎಲ್. ಆರ್. ಶಿವರಾಮೇಗೌಡ:- ಅವರು ಬರೀ ಪ್ರಚಾರಕ್ಕೆ ಮಾತ್ರ ಮಾಡುತ್ತಿದ್ದರೇ ಹೊರತು ಇನ್ನಾವುದಕ್ಕೂ ಅಲ್ಲ. "ಸಾಲ ಮನ್ನಾ" ಆಗಬೇಕೆಂದು ಹೇಳಿ ಪತ್ರಿಕೆಯಲ್ಲಿ ಬಂದು ಬಿ. ಜೆ. ಪಿ. ಯವರು ರೈತರಿಗೆ ಸಹಾಯಕರಾಗಿದ್ದಾರೆಂದು ಪ್ರಚಾರಕ್ಕಾಗಿ ಹೇಳಿಕೊಳ್ಳುತ್ತಿದ್ದರು. ಅಷ್ಟೇ ಹೊರತು ಬೇರೆ ಏನೂ ಇಲ್ಲ.

ಶ್ರೀ ವಿನಯಕುಮಾರ್ ಸೊರಕೆ:- ಹಿಂದೆ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ರಾಮಕೃಷ್ಣ ಹೆಗಡೆಯವರು ಸಾಲದ ಬಡ್ಡಿ ರಿಯಾಯಿತಿ ಮಾಡುತ್ತೇವೆನ್ನುವಂಥ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡರು. ಅವರು ರಿಯಾಯಿತಿ ಮಾಡಿದಂಥ ಹಣ ಸಹಕಾರಿ ಸಂಘಗಳಿಗೆ ಇನ್ನೂ ಕೂಡ ಬರಲಿಕ್ಕೆ ಇದೆ. ಈ ದೃಷ್ಟಿಯಲ್ಲಿ ಪತ್ರಿಕೆಗಳ ಮುಖಾಂತರ ಹೇಳಿಕೆಯನ್ನು ಕೊಟ್ಟು ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥ ಸಹಕಾರಿ ಸಂಸ್ಥೆಗಳು ತೋವರೆಗೆ ಈಡಾದವು. ಸಹಕಾರಿ ಸಂಸ್ಥೆಗಳೆಂದರೆ ಎಲ್ಲರೂ ಸಹಕಾರದಿಂದ ನಡೆಯುವಂಥ ಒಂದು ಸಂಸ್ಥೆ. ಎಲ್ಲರೂ ಕೂಡ ಒಟ್ಟಿಗೆ ಸೇರಿಕೊಂಡು ನಡೆಸುತ್ತಿದ್ದರು. ಇವತ್ತು ಅವರು ಸಾಲವನ್ನು ಕೊಡಬೇಕು, ಸಾಲವನ್ನು ರಿಯಾಯಿತಿ ಮಾಡಬೇಕೆನ್ನುವ ರೀತಿಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡರೆ ಹೆಚ್ಚಿನ ಅಂಶ ವರ್ತಕರ ಪಿತೂರಿಗೆ ಬಲಿಯಾಗಿ ಮಾನ್ಯ ಯಡಿಯೂರಪ್ಪನವರು ಸಹಕಾರಿ ಸಂಸ್ಥೆಗಳನ್ನು ನಿರ್ನಾಮ ಮಾಡಲಿಕ್ಕೆ ಈ ರೀತಿ ಒಂದು ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿದ್ದಾರೆಂದು ಹೇಳಿದರೆ ತಪ್ಪಾಗಲಾರದೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಈ ದಿಸೆಯಲ್ಲಿ ರೈತರಿಗೆ ಪ್ರೋತ್ಸಾಹವನ್ನು ಕೊಡಬೇಕಾದಂಥ ಹಲವಾರು ಅಂಶಗಳನ್ನು ಸಾಲ ಮನ್ನಾ ಮಾಡಬೇಕೆನ್ನುವ ರೀತಿಯಲ್ಲಿ ಈ ವರ್ಷ ಈ ವ್ಯವಸ್ಥೆಯನ್ನು ನಂಬಿದಂಥ ರೈತರ ವ್ಯವಸ್ಥೆ ಹಾಳಾಗಿದೆ. ಸಾಲ ಮನ್ನಾಮಾಡಬೇಕೆಂದು ಹೇಳಿ ಯಾವ ರೈತರು ಬೇಡಿಕೆಯನ್ನಿಟ್ಟಿಲ್ಲ. ನಿಯತ್ತಾಗಿ ಕಟ್ಟುವಂಥ ಒಂದು ಕ್ರಮ ನಮ್ಮ ರೈತರ ಹತ್ತಿರ ಇದೆ. ಇನ್ನಷ್ಟು ಸಹಕಾರ ಸಿಗಬೇಕೆನ್ನುವ ಬೇಡಿಕೆ ನಮ್ಮ ರೈತರಲ್ಲಿ ಇರುವುದು ಸ್ವಾಭಾವಿಕ. ಆ ದಿಸೆಯಲ್ಲಿ ಸಂಪೂರ್ಣವಾಗಿ ರೈತರು ಯಾವ ದೃಷ್ಟಿಯಲ್ಲಿ ಪ್ರತಿವರ್ಷ ಕೂಡ ಸಾಲ ತೆಗೆದುಕೊಂಡು ಒಳ್ಳೆಯ ರೀತಿಯಲ್ಲಿ ಪ್ರತಿವರ್ಷ ಹೊಂದಿಕೊಂಡು ಯಾವ

ವ್ಯವಸ್ಥೆಯನ್ನು ಮುಂದುವರಿಸುತ್ತಿದ್ದರೋ ಆ ಒಂದು ವ್ಯವಸ್ಥೆಗೆ ಕೊಡಲಿ ಪೆಟ್ಟು ಹಾಕುವಂಥ ಒಂದು ಕೆಲಸ ಕಾರ್ಯವನ್ನು ಮಾನ್ಯ ಯಡಿಯೂರಪ್ಪನವರು ಮಾಡಿದ್ದಾರೆ. ಸಾಲ ಕಟ್ಟಬೇಡಿ ಎನ್ನುವ ರೀತಿಯಲ್ಲಿ ಹೇಳಿಕೆಯನ್ನು ಕೊಟ್ಟು, ಸಾರ್ವಜನಿಕ ಸಭೆಗಳನ್ನು ನಡೆಸಿರುತ್ತಾರೆ. ರೈತರು ಇದನ್ನು ನಂಬಿ ಹಣವನ್ನು ಕಟ್ಟದ, ಸಾಲಕ್ಕೋಸ್ಕರ ನಿಗದಿಪಡಿಸಿದಂಥ ಹಣವನ್ನು ಕಟ್ಟದೆ, ಇತರಕ್ಕಂಥ ಹಣವನ್ನು ಖರ್ಚುಮಾಡಿಕೊಂಡು ಜಪ್ತಿ ಬೇರೆ ಬೇರೆ ಕಾರ್ಯಕ್ರಮಗಳಿಗೆ ರೈತರು ಒಳಗಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ರೈತರಿಗೆ ಯಾವರೀತಿಯಾದ ಪ್ರೋತ್ಸಾಹ ಸಿಕ್ಕಬೇಕಾಗಿತ್ತೋ ಆ ರೀತಿಯ ಪ್ರೋತ್ಸಾಹ 1992-93 ನೇ ಇಸವಿಯ ಬಜೆಟ್‌ನಲ್ಲಿ ಸಿಕ್ಕಿದೆ. ಇವತ್ತು ರೈತರಿಗೆ ಕರ್ನಾಟಕ ರಾಜ್ಯದಲ್ಲಿ ರೈತ ಸಮುದಾಯಕ್ಕೆ ದೊಡ್ಡ ಕೊಡುಗೆ ಎನ್ನುವ ರೀತಿಯಲ್ಲಿ 1992-93 ರ ಬಜೆಟ್‌ನಲ್ಲಿ ಸಿಕ್ಕಿರುವುದನ್ನು ನಾವಾದರೂ ಕಾಣಬಹುದು.

ರೈತರಿಗೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಂಗಾರಪ್ಪನವರು, ಎಷ್ಟೋ ವರ್ಷಗಳಿಂದ ವಿದ್ಯುತ್ ಕನೆಕ್ಷನ್ ಸಿಕ್ಕದ ಸಂದರ್ಭದಲ್ಲಿ ಅದರಲ್ಲೂ 40 ಸಾವಿರ ವಿದ್ಯುತ್ ಕನೆಕ್ಷನ್ ಕೊಡಬೇಕಾದ ಜಾಗದಲ್ಲಿ 70 ಸಾವಿರ ಕನೆಕ್ಷನ್ ಕೊಡುವ ಕಾರ್ಯಕ್ರಮ ಹಮ್ಮಿಕ್ಕೊಂಡರು. ಆದರೆ ಇದಕ್ಕೆ ಹೆಚ್ಚಿನ ಪ್ರಚಾರ ಸಿಕ್ಕಿಲ್ಲ. 1992-93 ರ ವಾರ್ಷಿಕೋತ್ಸವದಲ್ಲಿ ಸಂಪೂರ್ಣ ರಿಯಾಯಿತಿ ಕೊಡುವ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿದ್ದಾರೆ. ಇದು ದೊಡ್ಡ ಕೊಡುಗೆ. ಯಾವ ಒಬ್ಬ ಅರ್ಥಸಚಿವರು (ಮುಖ್ಯಮಂತ್ರಿ) ಇಷ್ಟರವರೆಗೆ ಚರಿತ್ರೆಯಲ್ಲಿ ಈ ರೀತಿ ರೈತರಿಗೆ ಕೊಡುಗೆ ಕೊಡುವ ಕಾರ್ಯಕ್ರಮವನ್ನು ಹಮ್ಮಿಕ್ಕೊಳ್ಳಲಿಲ್ಲ. ಇದು ರೈತ ಸಮುದಾಯಕ್ಕೆ ಕೊಟ್ಟ ಕೊಡುಗೆ. ರೈತರಿಗೆ ಅನುಗುಣವಾಗಿ ಹಲವಾರು ರೀತಿಯ ಕಾರ್ಯಕ್ರಮಗಳನ್ನು ಜೋಡಣೆ ಮಾಡಿಕೊಂಡು ಅರಣ್ಯ ಕಾಲೇಜು, ರೇಷ್ಮೆ ಕಾಲೇಜು ಇರಬಹುದು ಹೀಗೆ ಬೇರೆ ಬೇರೆ ಸಂಶೋಧನಾಲಯಗಳನ್ನು ಅಳವಡಿಸುವ ರೀತಿಯಲ್ಲಿ ಹೆಚ್ಚಿಗೆ ಪ್ರೋತ್ಸಾಹ ಕೊಡುವ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ.

ಇದೇ ರೀತಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೂಡ ಹೆಚ್ಚಿನ ರೀತಿಯ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿದ್ದಾರೆ. ನೀರಾವರಿ ಕಾರ್ಯಕ್ರಮ ಆಗಿರಬಹುದು, ಹಾಸ್ಟಲ್‌ಗಳ ನಿರ್ಮಾಣ ಕಾರ್ಯಕ್ರಮ ಆಗಿರಬಹುದು, ಡಾ:ಅಂಬೇಡ್ಕರ್ ಅವರ ನೆನಪಿಗೋಸ್ಕರ ಸಬ್ಸಿಡಿ ಕೊಡುವ ಕಾರ್ಯಕ್ರಮ ಇರಬಹುದು. ಹೀಗೆ ಹಲವಾರು ದಿಸೆಯಲ್ಲಿ ಕಳೆದ ವರ್ಷ 403 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು; ಆ ಸಾರಿ 583 ಕೋಟಿ ರೂಪಾಯಿಗಳನ್ನು ಕೊಟ್ಟು ವಿದ್ಯಾಭ್ಯಾಸ ಮತ್ತಿತರ ಕಾರ್ಯಕ್ರಮಗಳಿಗೆ ಬೇರೆ ಬೇರೆ ಹಂತದಲ್ಲಿ ಪ್ರೋತ್ಸಾಹ ಕೊಡುವ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿದ್ದಾರೆ. ಬೇರೆ ಬೇರೆ ಹೊಸ ಕಾರ್ಯಕ್ರಮಗಳು ಅಂದರೆ ನೇತ್ರ ಯೋಜನೆ, ಬೀದಿ ಕಾರ್ಯಕ್ರಮ ಹೀಗೆ ಹಲವಾರು ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಒಳ್ಳೆಯ ಬಜೆಟ್ಟನ್ನು ಕರ್ನಾಟಕ ರಾಜ್ಯದ ಜನತೆಗೆ ಕೊಟ್ಟಿದ್ದಾರೆ ಮತ್ತು ಅದರಲ್ಲಿ ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಂಡಿದ್ದಾರೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಯವರಿಗೆ ಮತ್ತು ಅರ್ಥ ಸಚಿವರಿಗೆ ಅಭಿನಂದನೆ ಸಲ್ಲಿಸಿ ಆಯವ್ಯಯವನ್ನು ಸ್ವಾಗತಿಸುತ್ತಾ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ):- ಮಾನ್ಯ ಉಪಾಧ್ಯಕ್ಷಿಣಿಯವರೆ, ಕರ್ನಾಟಕದ ಇತಿಹಾಸದಲ್ಲಿ, 1992-93 ನೇ ಮುಂಗಡ ಪತ್ರವನ್ನು ನಮ್ಮ ಅರ್ಥ ಸಚಿವರು ಮುಖ್ಯ ಮಂತ್ರಿಗಳು ಇಂದು ಸದನಕ್ಕೆ ಏನು ಒಪ್ಪಿಸಿದ್ದಾರೆ ಅದರಲ್ಲಿ ಬಹಳಷ್ಟು ಪ್ರಗತಿಪರ ವಿಚಾರಗಳು ಇರುವುದಲ್ಲದೆ ಹಳ್ಳಿಯ ಜನರ ಸರ್ವತೋಮುಖ ಅಭಿವೃದ್ಧಿಗಾಗಿ ಹಲವಾರು ಸುಂದರ ಯೋಜನೆಗಳು ರೂಪುಗೊಂಡಿರುವುದನ್ನು ನಾವು ಕಾಣಬಹುದು. ಯಾವ ಹಳ್ಳಿಯ ಜನರು ಬಹಳಷ್ಟು ಕಷ್ಟದಲ್ಲಿ ನರಳುತ್ತಿದ್ದರೋ ಅವರ ಜೀವನಕ್ಕೆ ಒಂದು ಸುಖಕರವಾದ ವಾತಾವರಣ ಉಂಟು ಮಾಡುವಂಥ, ಸಮಾಜದಲ್ಲಿ ಅವರು ತಲೆ ಎತ್ತಿ ನಡೆಯುವಂಥ, ಉತ್ತಮ ಆಧಾರ ಕೊಡುವಂಥ ಈ ಒಂದು ಮುಂಗಡ ಪತ್ರ ಪ್ರಾಯಶಃ ನಮ್ಮ ಕರ್ನಾಟಕ ರಾಜ್ಯದಲ್ಲಿ ಇದುವರೆಗೆ ಒಪ್ಪಿಸಿದ ಮುಂಗಡ ಪತ್ರಗಳಲ್ಲಿ ಒಂದು ಆದರ್ಶ ಮುಂಗಡ ಪತ್ರ ಎಂದು ಖಂಡಿತವಾಗಿ ಹೇಳಬಹುದು. ಆದುದರಿಂದ ಈ ಮುಂಗಡ ಪತ್ರವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡಬಯಸುತ್ತೇನೆ. ಮುಖ್ಯವಾಗಿ ಈ ಮುಂಗಡ ಪತ್ರದಲ್ಲಿ ತೋರಿಸಿದ ಹಾಗೆ 5 ಉದಾತ್ತ ಧ್ಯೇಯಗಳನ್ನು ರೂಪಿಸಿಕೊಂಡಿರುತ್ತಾರೆ.

'ಆಶ್ರಯ', 'ಅಕ್ಷಯ', 'ಆರಾಧನಾ' ಇಂಥ ಯೋಜನೆಗಳು ಬಹಳಷ್ಟು ಹಳ್ಳಿಯ ಜನರಿಗೆ ನೇರವಾಗಿ ಮುಟ್ಟುವಂಥ ಯೋಜನೆಗಳಾಗಿವೆ. 1952 ರಿಂದ 1958 ರ ಅವಧಿಯಲ್ಲಿ ನಾನು ಒಬ್ಬ ಅಧ್ಯಾಪಕನಾಗಿದ್ದೆ. ಆ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮದ್ರಾಸ್ ಸರ್ಕಾರದ ಆಳ್ವಿಕೆಯಲ್ಲಿ ಇತ್ತು. ಅಂಥ ವೇಳೆಯಲ್ಲಿ ಮದ್ರಾಸ್

ಸರ್ಕಾರದವರು ಹಳ್ಳಿಯ ಜನರಿಗೆ ಅನುಕೂಲವಾಗುವಂಥ, ಶಾಲಾ ಮಕ್ಕಳಿಗೆ ಮಧ್ಯಾಹ್ನ ಊಟ ಒದಗಿಸುವಂಥ ಯೋಜನೆಗಳನ್ನು ಹಾಕಿಕೊಂಡಿತ್ತು.

ಮೀನುಗಾರಿಕೆ ಶಾಲೆಗಳಲ್ಲಿ, ಕಾರ್ಮಿಕ ಶಾಲೆಗಳಲ್ಲಿ ಒಂದರಿಂದ ಎಂಟರವರೆಗೆ ಕಲಿಯುವಂಥ ಮಕ್ಕಳಿಗೆ ಮಧ್ಯಾಹ್ನ ಊಟ ಒದಗಿಸುತ್ತಿದ್ದರು. ಬಡ ಮಕ್ಕಳು ಆ ಶಾಲೆಗೆ ಬಂದು ಊಟ ಮಾಡಿ ಜೊತೆಯಲ್ಲಿ ಪಾಠವನ್ನು ಕಲಿಯುವಂಥ ಸಂದರ್ಭ ಇತ್ತು.

## 4.15 ಪಿ.ಎಂ.

ಏಕೆಂದರೆ ಮಧ್ಯಾಹ್ನ ಹೊಟ್ಟೆಗೆ ಆಹಾರ ಇಲ್ಲದ ಶಾಲೆಯಲ್ಲಿ ಬಂದು ಕಲಿಯುವಾಗ ಎಷ್ಟು ಪಾಠ ಅವರಿಗೆ ಅರ್ಥವಾದೀತು? ಅವರು ವಿದ್ಯಾಭ್ಯಾಸವನ್ನು ಎಷ್ಟು ಸುಸೂತ್ರವಾಗಿ ನಡೆಸಿಯಾರು? ಇಂದು ಕೆಲವು ಹಳ್ಳಿ ಶಾಲೆಗಳಿಗೆ ಹೋದಾಗ ಈ ಚಿತ್ರವನ್ನು ಕಾಣಬಹುದು. ಮಧ್ಯಾಹ್ನ ಊಟ ಮಾಡದೆ ಬರೀ ನೀರನ್ನು ಕುಡಿದು ಉಪವಾಸ ಇದ್ದು ಪಾಠವನ್ನು ಕಲಿಯುವಂಥ ಮಕ್ಕಳಿಗೆ ಪಾಠ ಬೋಧನೆ ಆಗುವಾಗ ಆ ಪಾಠ ಎಷ್ಟು ಅರ್ಥವಾದೀತು? ಸ್ವಾಭಾವಿಕವಾಗಿ ಬಡಜನರ, ಬಡಮಕ್ಕಳ ಅಭ್ಯುದಯಕ್ಕಾಗಿ ಈ ಉತ್ತಮವಾದಂಥ ಅಕ್ಷಯ ಯೋಜನೆ ತಂದಿದ್ದರು. ತಮಿಳುನಾಡು ಸರ್ಕಾರ, ಎಂ. ಜಿ. ಆರ್. ಸರ್ಕಾರ ಈ ಯೋಜನೆಯನ್ನು ಅನುಷ್ಠಾನಕ್ಕೆ ತಂದಾಗ ಹಳ್ಳಿಯ ಮಕ್ಕಳ ಒಂದು ಭಾಗ್ಯದ ಬಾಗಿಲು ತೆರೆದಿದೆ ಎಂಬ ಭಾವನೆ ಮೂಡಿ ದೇಶದಲ್ಲಿ ಮಕ್ಕಳಿಗಾಗಿ ಒಳ್ಳೆಯ ಯೋಜನೆಯನ್ನು ತಯಾರಿಸಿದ ತಮಿಳುನಾಡು ಸರ್ಕಾರವನ್ನು ಎಲ್ಲಾ ಅಧ್ಯಾಪಕ ವೃಂದದವರು ಅಭಿನಂದಿಸಿದರು. ಪುಣ್ಯವಶಾತ್ ಕಳೆದ ವರ್ಷ ಈ ಅಕ್ಷಯ ಯೋಜನೆಯಲ್ಲಿ ಮಧ್ಯಾಹ್ನ ಮಕ್ಕಳಿಗೆ ಊಟವನ್ನು ಕೊಡುವ ಯೋಜನೆ ತರುವಾಗ ನಮ್ಮ ರಾಜ್ಯದ ಹಲವಾರು ಕಡೆ ಇದಕ್ಕೆ ತರಹ ತರಹದ ಅಪವಾದ ಬರುವಂಥ ತೊಂದರೆಗಳು ಬಂದವು.

ಮಧ್ಯಾಹ್ನ ಊಟವನ್ನು ಶಾಲೆಯಲ್ಲಿ ತಯಾರು ಮಾಡದಂಥ ಪರಿಸ್ಥಿತಿ ಒದಗಿದ್ದು ನಿಜವಾಗಿ ಕರ್ನಾಟಕದ ಈ ಬಡಮಕ್ಕಳ ದೌರ್ಭಾಗ್ಯ ಎಂದು ಹೇಳಿದರೆ ಹೆಚ್ಚಾಗಲಾರದು. ಏಕೆಂದರೆ ನಾನು ಅಧ್ಯಾಪಕನಾಗಿದ್ದಾಗ ಈ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿ ಅಡಿಗೆಯನ್ನು ತಯಾರಿಸಿ ಮಕ್ಕಳಿಗೆ ಸಾಮೂಹಿಕವಾಗಿ ನಾವೆಲ್ಲರೂ ಒಂದೇ ಎಂಬ ಭಾವನೆಯಿಂದ ಒಟ್ಟಾಗಿ ಕುಳಿತು ಊಟ ಮಾಡಿ ಅವರು ಸಂತೃಪ್ತಿಯ ತೇಗನ್ನು ತೇಗುವಾಗ ನಿಜವಾಗಿ ಒಂದು ಒಳ್ಳೆಯ ವಾತಾವರಣ ಶಾಲೆಯಲ್ಲಿ ಮೂಡುತ್ತಿತ್ತು. ದುರಾದೃಷ್ಟವಶಾತ್ ನಮ್ಮ ಶಾಲಾ ಅಧ್ಯಾಪಕರ ಹಾಗೂ ಊರಿನವರಿಂದ ಅದಕ್ಕೆ ಬೇಕಾದಂಥ ಬೆಂಬಲ ಸಿಗದೆ ಈ ಅತ್ಯುತ್ತಮವಾದ ಯೋಜನೆ ಕುಂಠಿತಗೊಂಡರೂ ಮುಖ್ಯಮಂತ್ರಿಗಳು ನಿರಾಶರಾಗದೆ ಬಡಮಕ್ಕಳಿಗೆ ಯಾವುದಾದರೂ ರೀತಿಯಲ್ಲಿ ಸಹಾಯ ಮಾಡಲೇಬೇಕೆಂದು ಕಂಕಣಬದ್ಧರಾಗಿ ಒಂದೊಂದು ರೂಪಾಯಿಯಂತೆ ಪ್ರತಿ ಹಾಜರಿಗೆ ಹಣವನ್ನು ಕೊಟ್ಟು ಅದನ್ನು ತಾಯಂದಿರಿಗೆ ಕೊಡಬೇಕೆಂಬ ಒಂದು ದೃಢವಾದ ಒಂದು ಆಜ್ಞೆಯನ್ನು ಹೊರಡಿಸಿದರು. ಇಲ್ಲೂ ಬಡಮಕ್ಕಳ ದೌರ್ಭಾಗ್ಯ ಎಂದು ಹೇಳಬೇಕು. ಬ್ಯಾಂಕಿನವರು ಕೈ ಕೊಟ್ಟರು.

ಏಕೆಂದರೆ ನಮ್ಮಲ್ಲಿ ಸಾಕಷ್ಟು ಉದ್ಯೋಗಿಗಳಿಲ್ಲ, ಇಷ್ಟು ಸಾವಿರ ಅಕೌಂಟ್ ಮಾಡಲಿಕ್ಕೆ ನಮಗೆ ಸಾಧ್ಯವಿಲ್ಲ ಎಂದು ಬಡಮಕ್ಕಳ ಹೊಟ್ಟೆಗೆ ಪೆಟ್ಟಾಗುವಂಥ ಒಂದು ಸಂದರ್ಭ ಬಂದಿದ್ದು ನಿಜವಾಗಿ ದೊಡ್ಡ ದೌರ್ಭಾಗ್ಯ ಎಂದು ನಾವು ಹೇಳಬೇಕಾಗಿದೆ.

ಅದಕ್ಕಾಗಿ ಅವರು ಚಿಂತಿಸದೆ ಕಟ್ಟಕಡೆಗೆ ಒಟ್ಟು ಮಾಡಿಯಾದರೂ ಈ ಹಣವನ್ನು ಹೆತ್ತವರಿಗೆ ಕೊಟ್ಟು ಆ ಮಕ್ಕಳ ಲಾಲನೆ ಪಾಲನೆ ಮಾಡಿ ಆ ಮಕ್ಕಳು ಉತ್ತಮವಾದ ಒಳ್ಳೆಯ ವಿದ್ಯಾಭ್ಯಾಸ ಪಡೆಯುವಂಥ ಆ ಮಕ್ಕಳಿಗೆ ಮಧ್ಯಾಹ್ನ ಊಟ ಮಾಡುವ ಲಂಪ್‌ಸಮ್ ಅಮೌಂಟನ್ನು ಕೊಡುವಂಥ ಯೋಜನೆಯನ್ನು ದೃಢಸಂಕಲ್ಪದಲ್ಲಿ ಮುಂದುವರೆಸಿದಂಥ ಬಂಗಾರಪ್ಪನವರ ದೃಢಸಂಕಲ್ಪವನ್ನು ಅಧ್ಯಾಪಕನಾಗಿದ್ದ ನಾನು ಹಳ್ಳಿಗಳಲ್ಲಿ ಬಂದಂಥ ವಿದ್ಯಾರ್ಥಿಗಳ ಪರವಾಗಿ ಈ ಸಂದರ್ಭದಲ್ಲಿ ತುಂಬು ಹೃದಯದಿಂದ ಅವರನ್ನು ಅಭಿನಂದಿಸುತ್ತೇನೆ. ಮುಂದಿನ ವರ್ಷವೂ ಸಹ ಇದನ್ನು ಅನುಷ್ಠಾನಗೊಳಿಸುತ್ತೇನೆ ಎಂದು ಹೇಳಿ ಕಾರ್ಯತತ್ಪರರಾಗಿದ್ದಾರೆ. ಪ್ರಾಯಶಃ ಬಾಕಿ ಕಡೆಯಲ್ಲಿ ತೊಂದರೆ ಬಂದರೂ ಮುಂದಿನ ವರ್ಷ ದಕ್ಷಿಣ ಕನ್ನಡ ಜಿಲ್ಲೆಯಲ್ಲಾದರೂ ಮಧ್ಯಾಹ್ನ ಊಟ ತಯಾರಿಸಿ ಆ ಮಕ್ಕಳಿಗೆ ಊಟ ಬಡಿಸುವಂಥ ಮದ್ರಾಸ್ ರಾಜ್ಯದ 1956 ರ ತನಕ ಅವಿಭ ಕರ್ನಾಟಕ ಆಗುವತನಕ ಯಾವ ಯೋಜನೆ ಇತ್ತೋ ಆ ಯೋಜನೆಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನುಷ್ಠಾನ ಮಾಡುವಂಥ ಒಂದು ಸಂದರ್ಭ ಒದಗಲಿ, ಈ ಪ್ರಯೋಜನವನ್ನು ಮಧ್ಯಾಹ್ನ ಊಟವಿಲ್ಲದೆ ಹೊಟ್ಟೆಗೆ ಬಟ್ಟೆ ಕಟ್ಟಿಕೊಂಡು ಕಷ್ಟಪಡುತ್ತಿರುವ

ಮಕ್ಕಳಿಗೆ ಊಟ ಕೊಡುವಂಥ ಒಂದು ಸಂದರ್ಭ ಒದಗಲಿ ಎಂದು ನಾನು ಈ ಸಂದರ್ಭದಲ್ಲಿ ಆಶಿಸುತ್ತೇನೆ. ಈ ಒಳ್ಳೆಯ ಯೋಜನೆ ಬಡಮಕ್ಕಳ ಮುಂದಿನ ಪೀಳಿಗೆಯ ಉತ್ತಮವಿದ್ಯಾಭ್ಯಾಸಕ್ಕೆ ಒಂದು ಉತ್ತಮ ಆಕರವಾಗಿದೆ ಎಂದು ಈ ಸಂಪರ್ಭದಲ್ಲಿ ಅಭಿನಂದಿಸಬಯಸುತ್ತೇನೆ.

ಎರಡನೆಯದು ಆಶ್ರಯ ಯೋಜನೆ. ಇದರಷ್ಟು ಉತ್ತಮವಾದಂಥ ಯೋಜನೆ ಯಾವ ಕಾಲದಲ್ಲೂ ಬರಲಿಲ್ಲ. ಕೇವಲ ಎರಡು ತಿಂಗಳಲ್ಲಿ ಪ್ರತಿಯೊಂದು ಕಾನ್ಸ್ಟಿಟುಯೆನ್ಸಿಯಲ್ಲಿ ಸಾವಿರಾರು ಮನೆಗಳನ್ನು ಕಟ್ಟಲಿಕ್ಕೆ ನೆರವನ್ನು ಕೊಡುವಂಥ ಒಂದು ಅಚ್ಚುಕಟ್ಟುತನದ ದೃಢ ಸಂಕಲ್ಪ, ಈ ಕಾನೂನು ಒಂದು ಕ್ರಾಂತಿಯನ್ನೇ ಮಾಡಿದೆ ಎಂದು ನಾನು ಖಂಡಿತ ಹೇಳಬಲ್ಲೆ.

ಹಲವಾರು ವರ್ಷಗಳಿಂದ ಹಣ ಕೊಟ್ಟು ಹಣ ಪಾವತಿ ಮಾಡುತ್ತೇವೆಂದರೂ ಕೂಡ ಸಾಕಷ್ಟು ನಿವೇಶನ ಬಡವರಿಗೆ ಸಿಗಲಿಲ್ಲ. ಶ್ರೀಮಂತ ವರ್ಗದವರ, ಧಣಿ ವರ್ಗದ ಒತ್ತಡ ಇದ್ದು ಈ ಬಡವರಿಗೆ ಮನೆ ನಿವೇಶನ ಸಿಕ್ಕುತ್ತಿರಲಿಲ್ಲ. ನಮ್ಮ ಜಿಲ್ಲೆಯಲ್ಲಿ ಇನ್ನೂ ಸಹ ಎಂತಹ ಭಾವನೆ ಉಂಟು ಎಂದು ಹೇಳಿದರೆ, ಧಣಿಯ ಅಡಿಯಾಳಾಗಿ, ಊಳಗದ ಕೂಲಿಯಾಗಿ, ಅವನ ಭೂಮಿಯಲ್ಲೇ, ಮನೆ ಮಠ ಇಲ್ಲದೇ ಇವನ ಚಾಕರಿ ಮಾಡುತ್ತಿರುವ ಈ ಬಡವರಿಗೆ ಇದು ಒಂದು ಆಶ್ರಯ ಯೋಜನೆ ಒಳ್ಳೆಯ ಆಶ್ರಯವನ್ನು ಕೊಟ್ಟಿದೆ. ನನ್ನ ಒಂದು ಕ್ಷೇತ್ರದಲ್ಲಿ ಈ 2/3 ತಿಂಗಳಲ್ಲಿ 3 ಸಾವಿರಕ್ಕೂ ಹೆಚ್ಚು ನಿವೇಶನ ಕೊಡಿಸಿ, ಈ ಆಶ್ರಯ ಇಲ್ಲದ ಇನ್ನೊಬ್ಬನ ಹಂಗಿನ ಕೂಳಿನಲ್ಲಿ ಈ ಜನಗಳು ಬೆಳೆವ ದಿನಗಳು ಇಲ್ಲದಹಾಗೆ ಕುಣಿದಾಡಬೇಕಾದ ಆ ಪಾಪದ ಜನರನ್ನು ಮೇಲಕ್ಕೆ ಎತ್ತುವ, ಅವರ ಕಾಲಮೇಲೆ ನಿಂತು ತಲೆ ಎತ್ತಿ ನಡೆಯುವ ಒಂದು ಉತ್ತಮವಾದ ಸ್ವಾತಂತ್ರ್ಯವನ್ನು ಕೊಟ್ಟ ನಮ್ಮ ಮುಖ್ಯಮಂತ್ರಿಯವರ ಈ ಯೋಜನೆ ನಿಜಕ್ಕೂ ಅಭಿನಂದನೀಯವಾಗಿದೆ. ಒಂದು ದೃಷ್ಟಿಯಲ್ಲಿ ಇದು ಕರ್ನಾಟಕದಲ್ಲಿ ಕ್ರಾಂತಿಕಾರಿಯಾಗಿದೆ ಎಂದು ಹೇಳಬಹುದು. ಲಕ್ಷಗಟ್ಟಲೆ ನಿವೇಶನವನ್ನು ಧರ್ಮಾರ್ಥವಾಗಿ ನಮ್ಮ ಮುಖ್ಯ ಮಂತ್ರಿಗಳು ಕೊಡುವ ದೃಢ ಸಂಕಲ್ಪ ಮಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಪುನರಪಿ ಅವರಲ್ಲಿ ವಿನಂತಿಸುತ್ತೇನೆ.

ಹಳ್ಳಿ ವಲಯದಲ್ಲಿ, ಮಂಡಲದಲ್ಲಿ ಹೇಗೆ ಧರ್ಮಾರ್ಥವಾಗಿ ಈ ನಿವೇಶನವನ್ನು ಕೊಟ್ಟಿದ್ದಾರೆ ಅದೇ ರೀತಿ ಪುರಸಭೆ ವ್ಯಾಪ್ತಿಯಲ್ಲಿ ಕೂಡ ಈ ನಿವೇಶನವನ್ನು ಧರ್ಮಾರ್ಥವಾಗಿ ಕೊಡಬೇಕು. ಏಕೆಂದರೆ ನನ್ನ ಮೂಡಬಿದರೆ ಕ್ಷೇತ್ರದಲ್ಲಿ ನಾನು ಈ ಯೋಜನೆಯನ್ನು ಬಹಳ ಯಶಸ್ವಿಯಾಗಿ ಮಾಡಬೇಕೆಂದು ಕಾತುರನಾಗಿ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಒತ್ತಡ ಮಾಡುತ್ತಿದ್ದರೂ ಆ ಫೈಲ್‌ಗಳ ಹಿಂದೆ ಇದ್ದರು ಕೂಡ ಕಳೆದ ಏಳು ವರ್ಷಗಳಿಂದ ಮೂಡಬಿದ್ರಿಯ ಈ ಪುರಸಭೆ ವ್ಯಾಪ್ತಿಯಲ್ಲಿ ಈ ನಿವೇಶನಗಳನ್ನು ಕೊಡುವುದಕ್ಕೆ ಆಗಿರಲಿಲ್ಲ. ದೊಡ್ಡ ದೊಡ್ಡ ಶ್ರೀಮಂತರು ಭೂಮಿಯನ್ನು ತಮ್ಮ ವಶದಲ್ಲಿ ಇಟ್ಟುಕೊಂಡು ಬೇಲಿ ಹಾಕಿಕೊಂಡು ಸರ್ಕಾರಕ್ಕೆ ತೆರಿಗೆಯನ್ನೂ ಕಟ್ಟದೇ ಸುಖಭೋಗಿಸುತ್ತಿದ್ದಾರೆ.

ಆದರೆ ಬಡವರು ತಮಗೆ ಮನೆ ಇಲ್ಲದೇ ಕಷ್ಟಪಡುತ್ತಿರುವ ದುರ್ಭರ ಒಂದು ವಾತಾವರಣ ಇಂದು ಮೂಡಬಿದ್ರಿಯಲ್ಲಿ ಉಂಟು. ಆದುದರಿಂದ ನಮ್ಮ ಫೈಲ್ ಮೂಡಬಿದ್ರಿ ವಿಲೇಜ್ ಅಕೌಂಟೆಂಟ್‌ನಿಂದ. ಅಲ್ಲಿಯ ರೆವಿನ್ಯೂ ಇನ್ಸ್‌ಪೆಕ್ಟರಿಗೆ ಹೋಗಬೇಕು. ಅಲ್ಲಿಂದ ಡೆಪ್ಯೂಟಿ ತಹಶೀಲ್ದಾರರಿಗೆ ಹೋಗಿ ಅಲ್ಲಿಂದ ಕಾರ್ಕಳದ ತಾಲ್ಲೂಕ್ ಆಫೀಸಿಗೆ ಹೋಗಬೇಕು. ಅಲ್ಲಿಂದ ಕುಂದಾಪುರದ ಅಸಿಸ್ಟೆಂಟ್ ಕಮೀಷನರ್ ಆಫೀಸಿಗೆ ಹೋಗಬೇಕು. ಅಲ್ಲಿಂದ ಪುನಃ ಮಂಗಳೂರಿನ ಡಿ. ಸಿ. ಆಫೀಸಿಗೆ ಹೋಗಬೇಕು. ಹೀಗೆ ಉತ್ತರ ಧ್ರುವದಿಂದ ದಕ್ಷಿಣ ಧ್ರುವದವರೆಗೆ ನಮ್ಮ ಜಿಲ್ಲೆಯ ನಾಲ್ಕು ಮೂಲೆಗಳಿಗೆ ಫೈಲ್ ಓಡಾಡಿ ಒಂದೊಂದು ಆಫೀಸಿನಲ್ಲಿ ಒಂದೊಂದು, ಎರಡೆರಡು ತಿಂಗಳು ಪ್ರಾಯಶಃ 6 ತಿಂಗಳು ಉಳಿದಿದ್ದು ಆಗಿದೆ. ಇದರ ಮಧ್ಯದಲ್ಲಿ ಅಧಿಕಾರವರ್ಗದವರು ಕೊಕ್ಕೆ ಹಾಕಿ ಪುನಃ ಉತ್ತರ ಧ್ರುವದಿಂದ ದಕ್ಷಿಣಧ್ರುವಕ್ಕೆ ಬರುವಾಗ ಈ ಯೋಜನೆಯಲ್ಲಿ ಬಡವರಿಗೆ ನಿವೇಶನ ಕೊಡುವುದಕ್ಕೆ ನನ್ನಿಂದಲೂ ಸಾಧ್ಯವಾಗದೇ ಇರುವ ವಾತಾವರಣ ಉಂಟಾಗಿದೆ. ಮೊನ್ನೆ ತಾನೇ ಈ ಅಸೆಂಬ್ಲಿಯಲ್ಲೂ ಈ ವಿಷಯ ಪ್ರಸ್ತಾಪಿಸಿದೆ. ಆದುದರಿಂದ ಯಾವ ಒಂದು ಹೊಸ ಯೋಜನೆಯಿಂದ ಬಡವರಿಗೆ ಮನೆ ನಿವೇಶನ ಕೊಡುವ ಈ ಕಾನೂನನ್ನು ಮಂಡಲಿಗೆ ಹೇಗೆ ಲಾಗು ಮಾಡಿದ್ದೀರೋ ಅದೇ ರೀತಿ ಪುರಸಭೆ ವ್ಯಾಪ್ತಿಗೂ ಕೂಡ ತಂದು ಟಾಸ್ಕ್ ಫೋರ್ಸ್ ಕಮಿಟಿ ಮೂಲಕ ಯಾವುದೇ ಹಣವನ್ನು ಪಡೆಯದೇ ಧರ್ಮಾರ್ಥವಾಗಿ ನಿವೇಶನವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತೇನೆ. ಇನ್ನು ಮುಖ್ಯವಾಗಿ ಹುಡ್ಕೋ ಮನೆಗಳ ಯೋಜನೆ. ಇದು ಒಂದು ಒಳ್ಳೆಯ ಯೋಜನೆಯನ್ನು ಮಾಡಿದ್ದೀರಿ, ಬಹಳ ಸಂತೋಷ. ನನ್ನ ಒಂದು ಮುಲ್ಕಿ ಪುರಸಭೆ ವ್ಯಾಪ್ತಿಯಲ್ಲಿ ಬಿಜಾಪುರದ ಗುಲ್ಬರ್ಗಾದ ಜನರು ಮಂಗಳೂರು ಬಂದರಿಗ ಕೆಲಸಕ್ಕೆ ಬಂದವರನ್ನೆಲ್ಲಾ ಹಿಂದಿನ ಸರ್ಕಾರ ರಾತ್ರಿ ಬೆಳಗಾಗುವುದರೊಳಗೆ ಲಾರಿಯಲ್ಲಿ ತುಂಬಿಸಿ ತಂದು ನಮ್ಮ ಮುಲ್ಕಿ ಕ್ಷೇತ್ರದಲ್ಲಿ ಹಾಕಿತು.

ನಿಮ್ಮಷ್ಟಕ್ಕೆ ನೀವು ಇರಿ. ಮಂಗಳೂರು ವಾತಾವರಣ ಚೆನ್ನಾಗಿದೆ ಇರಿ ಎಂದು ಇಲ್ಲಿಗೆ ತಂದು ಹಾಕಿದರು. ಯಾರು ಬಂದರೂ ಕೂಡಲೇ ನೋಡಿದರೆ ಹೇಸಿಗೆಯಾಗುತ್ತದೆ. ಆ ಹೇಸಿಗೆ ತಪ್ಪಿಸಲು ಕಾಡಿನಲ್ಲಿ ಇರಿ ಎಂದು ಹೇಳಿ ನನ್ನ ಕ್ಷೇತ್ರದ ಲಿಂಗಪ್ಪ ಪೈ ಕಾಡಿನಲ್ಲಿ ಹಾಕಿದರು. ಆದರೆ ಈ ಸರ್ಕಾರ ಬಂದ ನಂತರ ಆದಷ್ಟು ಪ್ರಯೋಜನವನ್ನು ಅವರು ಪಡೆದರು. ನನ್ನ ಮುಲ್ಕಿ ಪುರಸಭೆ ವ್ಯಾಪ್ತಿಯಲ್ಲಿ ಸುಮಾರು 500 ಜನರಿಗೆ 11 ಸಾವಿರ, 22 ಸಾವಿರದವರೆಗೆ ಸಾಲವನ್ನು ಕೊಟ್ಟು ಇಲಾಖೆಯಿಂದ ನಾವು ಆ ಲಿಂಗಪ್ಪ ಪೈ ಕಾಡಿಗೆ ಆ ಊರಿನಲ್ಲಿ ಹುಟ್ಟಿದ ಕರ್ನಾಡ್ ಸದಾಶಿವ ರಾಯರ ಹೆಸರನ್ನು ಇಟ್ಟು ಕರ್ನಾಡ್ ಸದಾಶಿವನಗರ ಎಂದು ಹೇಳಿ, ಮಾಡಿದ್ದೇವೆ. ಈಗ ಅಲ್ಲಿ ಕರ್ನಾಟಕದ ಹಲವಾರು ಕಡೆಗಳಿಂದ ಬಂದಂಥ ಜನರಿಗೆ ಹೆಂಚಿನ ಮಾಡು, ಕಲ್ಲಿನ ಗೋಡೆ ಸಿಮೆಂಟ್ ಹಾಕಿದ ನೆಲದಲ್ಲಿ ಸಂತೋಷದಿಂದ ಇರುವಂತಹ ಸುಂದರ ವಾತಾವರಣವನ್ನು ಕಾಣಬಹುದು. ಈ ಯೋಜನೆಯನ್ನು ತಂದ ನಮ್ಮ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳ ಧೀಮಂತ ಸಾಹಸದ ಫಲವೆಂದು ನಾನು ಹೇಳುತ್ತಿದ್ದೇನೆ. ಇದೇ ಪ್ರಕಾರ ಪ್ರತಿ ಕ್ಷೇತ್ರದಲ್ಲೂ ಒಂದು ಸಾವಿರ ಮನೆಗಳನ್ನು ಕಟ್ಟುವಂಥ ಉತ್ತಮ ಯೋಜನೆಯನ್ನು ರಚಿಸಿದ್ದಾರೆ. ಕೆಲವರು ಹೇಳುತ್ತಾರೆ, ಇದನ್ನು ಕಂಟ್ರಾಕ್ಟ್ ಕೊಡುವ ಕಾರಣ ಇದರ ಗುಣಮಟ್ಟ ಹಾಳಾಗುವುದು ಎಂಬ ಸಂಶಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಹಿಂದೆ ಗ್ರಾಮಗಳಲ್ಲಿ ಮನೆಗಳನ್ನು ಕಟ್ಟುವಾಗ ಏನಾಗುತ್ತಿತ್ತು? ಬಡವರಿಗೆ ಮನೆಗಳನ್ನು ಕಟ್ಟಲಿಕ್ಕೆ ಬಹಳ ಕಷ್ಟವಾಗುತ್ತಾ ಇತ್ತು. ಅವರು ಸ್ವಂತ ಹಣದಲ್ಲಿ ಫೌಂಡೇಶನ್ ಹಾಕಿದ ಮೇಲೆ ಹುಡ್ಕೋದಿಂದ ಹಣ ಬರುತ್ತಾ ಇತ್ತು. ಕಟ್ಟಡ ಆದನಂತರ ಇಂಜಿನಿಯರ್ ಬಂದು ನೋಡಿ ಹಣವನ್ನು ಕೊಡುತ್ತಾ ಇದ್ದರು. ಪೂರ್ತಾ ಕಟ್ಟಡ ಕಟ್ಟಿ ಮುಗಿಸಿದ ನಂತರ ಇನ್ನೇ ಕಂತಿನ ಹಣವನ್ನು ಕೊಡುತ್ತಾ ಇದ್ದರು. ಅಡ್ವಾನ್ಸ್ ಆಗಿ ಹಣವನ್ನು ಹಾಕಿ ಮನೆಯನ್ನು ಕಟ್ಟಬೇಕಾಗಿತ್ತು. ಈಗ ಮನೆ ಕಟ್ಟಲಿಕ್ಕೆ ಕಷ್ಟವೇನೂ ಇಲ್ಲ. ಹಿಂದೆ ಮನೆಗಳು ಅರ್ಧದಲ್ಲಿ ನಿಂತು ಹೋಗುತ್ತಾ ಇದ್ದವು. ಎಷ್ಟೋ ಮನೆಗಳು ಮಳೆಯ ನೀರಿನಿಂದ ಬಿದ್ದು ಹಾಳಾಗಿ ಹೋಗುವಂತಹ, ತೊಂದರೆಗೆ ಸಿಕ್ಕಿದಂತಹ ಅನೇಕ ಉದಾಹರಣೆಗಳು ಇವೆ.

ಇಂತಹ ವಾತಾವರಣದಲ್ಲಿ ನಮ್ಮ ಸರ್ಕಾರದವರು ಅವರುಗಳಿಗೆ ಮನೆಗಳನ್ನು ಕಟ್ಟಿಸಿ ಕೊಟ್ಟು ಒಳ್ಳೆಯ ಕೆಲಸ ಮಾಡಿದ್ದಾರೆ. ಇದರಿಂದ ಬಡವರಿಗೆ ಯಾವುದೇ ಚಿಂತೆಯಿಲ್ಲ. 15 ಸಾವಿರ ರೂಪಾಯಿಗಳ ಮನೆಯನ್ನು ಕಟ್ಟಿ 5 ಸಾವಿರ ರೂಪಾಯಿ ಸಹಾಯ ಧನವನ್ನು ಕೊಟ್ಟು 10 ಸಾವಿರ ರೂಪಾಯಿ ಸಾಲವನ್ನು ಕೊಡುವಂಥ ಈ ಉದಾತ್ತ ಧ್ಯೇಯವುಳ್ಳಂತಹ ಈ ಯೋಜನೆ ನಿಜವಾಗಿಯೂ ಬಹಳ ಸಂತೋಷದ ವಾತಾವರಣವನ್ನು ಉಂಟು ಮಾಡಿದೆ. ಹಿಂದೆ ಕರ್ನಾಟಕ ರಾಜ್ಯದಲ್ಲಿ ಯಾವ ಕಡೆಗೆ ಹೋದರೂ ಬಡವರ ಮನೆಗಳಿಗೆ ಮಾಡು ಇಲ್ಲ ಗೋಡೆಯಿಲ್ಲ, ನೆಲಕ್ಕೆ ಸಿಮೆಂಟ್ ಇಲ್ಲದಂತಹ ಅವರ ಗೋಳನ್ನು ಅವರ ಗೋಳಿನ ಬಾಳನ್ನು ದೂರೀಕರಿಸುವಂತಹ ಒಂದು ಸಂದರ್ಭವನ್ನು ಉಂಟುಮಾಡಿರುವ ಮಾನ್ಯ ಮುಖ್ಯಮಂತ್ರಿಗಳು ಒಂದು ದೃಢ ಸಂಕಲ್ಪ ಮಾಡಿ ಒಳ್ಳೆಯ ಕೆಲಸ ಮಾಡಿದ್ದಾರೆ. ಅದಕ್ಕಾಗಿ ಬಹಳಷ್ಟು ಅಭಿನಂದನೀಯ. ಇನ್ನು ಮೂರನೆಯದಾಗಿ 'ಆರಾಧನಾ' ಸ್ಕೀಮ್. ಇಷ್ಟರವರೆಗೆ ನಮ್ಮ ಸರ್ಕಾರ ದೊಡ್ಡ ದೊಡ್ಡ ದೇವಾಲಯಗಳಿಗೆ ಸಹಾಯ ಮಾಡುತ್ತಾ ಇತ್ತು. ದೊಡ್ಡ ದೊಡ್ಡವರ ದೇವಾಲಯಗಳ ಭೋಜನಶಾಲೆಗಳನ್ನು ಕಟ್ಟಲಿಕ್ಕೆ, ದೇವಾಲಯಗಳ ಗೋಪುರಗಳನ್ನು ನಿರ್ಮಾಣ ಮಾಡಲಿಕ್ಕೆ ಸಹಾಯ ಮಾಡುತ್ತಾ ಇದ್ದರು.

ಈ ಪಾಪದ ಜನರಿಗೆ ಹರಿಜನರಿಗೆ ದೀನ ದಲಿತರಿಗೆ, ಅಸ್ಪೃಶ್ಯರಿಗೆ ಹಿಂದೆ ದೇವಾಲಯಗಳಿಗೆ ಪ್ರವೇಶವಿರಲಿಲ್ಲ. ಇಂದು ಸಹ ಬಹಳಷ್ಟು ಸಂಖ್ಯೆಯಲ್ಲಿ ಈ ಜನರು ಹಿಂದುಳಿದವರು ಹರಿಜನರು, ದೇವಾಲಯದೊಳಗೆ ಹೋಗುವ ಹಾಗೆ ಇಲ್ಲ. ಸಮಾನತೆ ಈಗಲೂ ಕಂಡುಬರುತ್ತಿಲ್ಲ. ಬಯಲುಗಳಲ್ಲಿ ಈ ಜನರು ತಮ್ಮದೇ ಆದ ದೈವಗಳನ್ನು ಆರಾಧಿಸುತ್ತಾ ಬರುತ್ತಿದ್ದರು. ಆದರೆ ಇವರ ದೈವಗಳ ಪರಿಸ್ಥಿತಿ ಏನಿತ್ತು ಅಂದರೆ ವರ್ಷಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಬಂದು ಪೂಜೆ ಮಾಡಿಕೊಂಡು ಹೋಗುತ್ತಿದ್ದರು. ಅವರ ಗುಡಿಗೋಪುರಗಳಿಗೆ ಸರಿಯಾದ ವ್ಯವಸ್ಥೆ ಇಲ್ಲದ ಕಾರಣ ಅವರು ಪೂಜಿಸಿದ ದೇವರುಗಳನ್ನು ಕಡೆಗೆ ನರಿ, ನಾಯಿ, ದನಗಳು ಬಂದು ಅದನ್ನು ಹಾಳುಮಾಡುವಂಥ ಪರಿಸ್ಥಿತಿ ಬಂದಿತ್ತು. ನಮ್ಮ ಸರ್ಕಾರ ಪಾಪದವರ ದೇವರುಗಳಿಗೆ ಒಳ್ಳೆಯದನ್ನು ಮಾಡಬೇಕೆಂದು ಅದರ ಬಗ್ಗೆ ಆಲೋಚನೆ ಮಾಡಿ ಪಾಪದವರಿಗೆ ಸಹಾಯಮಾಡಿದ್ದರಿಂದ ಇಂದು ಹಳ್ಳಿಹಳ್ಳಿಗಳಲ್ಲಿ ಜನರು ಅರ್ಜಿಗಳನ್ನು ಕೊಡುತ್ತಿದ್ದಾರೆ. ನಮ್ಮ ಗುಡಿ ಮಂದಿರಗಳು ಕೂಡ ಜೀರ್ಣೋದ್ಧಾರವಾಗಬೇಕು. ನಮಗೂ ಸಹ ಸಹಾಯ ಕೊಡಿಯೆಂದು ನಮಗೂ ಗುಡಿ ಗೋಪುರಗಳುಂಟು, ನಮ್ಮ ಪಾಪದ ದೇವರುಗಳು ಸಹ ನಿಮ್ಮ ಹಾಗೆ ಸ್ವತಂತ್ರವಾಗಬೇಕು ಎನ್ನುವುದು ಆ ಜನರ ತಲೆಯಲ್ಲಿ ಬಂದಿದೆ. ಉತ್ತಮ ಗುಡಿಗಳು, ದೇವಾಲಯಗಳನ್ನು ನಿರ್ಮಾಣ ಮಾಡುವಂತಹ ಒಂದು ಅವಕಾಶವನ್ನು ನಮ್ಮ ಮುಖ್ಯಮಂತ್ರಿಗಳು ಆಲೋಚಿಸಿ ಆರಾಧನಾ ಸ್ಕೀಮ್‌ನ್ನು ಹಾಕಿಕೊಂಡು ಇಂತಹ ಒಂದು

ಉತ್ಕೃಷ್ಟ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ನನ್ನ ಕ್ಷೇತ್ರದ ಹಳ್ಳಿಗಳಲ್ಲಿ ಯಾವ ಕಡೆಗೆ ಹೋದರೂ ನಾವು ಸಹ ನಮ್ಮ ಕೈಲಾದ ಹಣವನ್ನು ಸಂಗ್ರಹ ಮಾಡುತ್ತಿದ್ದೇವೆ. ಆರಾಧನಾ ಸ್ಕೀಮ್‌ನಲ್ಲಿ ನಮಗೆ ಸ್ವಲ್ಪ ಹಣವನ್ನು ಕೊಟ್ಟು ನಮ್ಮ ದೇವರುಗಳನ್ನು ನರಿ ನಾಯಿ ಮುಟ್ಟದ ಹಾಗೆ ಮಾಡಿಯೆಂದು ಹೇಳುತ್ತಿದ್ದಾರೆ.

ಈಗ ಜನರು ಜಾಗೃತರಾಗಿದ್ದಾರೆ. ಅವನ್ನು ನಾವು ಸ್ಪಷ್ಟವಾಗಿ ತಿಳಿಯಬೇಕು. ಇನ್ನೊಂದು ಯೋಜನೆ "ಶುಶ್ರೂಷಾ" ಯೋಜನೆ. ನಿಮಗೆ ಎಲ್ಲರಿಗೂ ಗೊತ್ತುಂಟು ಪಟ್ಟಣ ಪ್ರದೇಶಗಳಲ್ಲಿ ಒಂದು ಸಣ್ಣ ಕಾಯಿಲೆ ಬಂದರೂ ಡಾಕ್ಟರ ಹತ್ತಿರ ಹೋಗುತ್ತಾರೆ. ಡಾಕ್ಟರ ಹತ್ತಿರ ಹೋಗಿ ಕಾಯಿಲೆಗೆ ಕೂಡಲೇ ಮದ್ದು ಪಡೆಯುತ್ತಾರೆ. ಅಂತಹ ಒಂದು ಚಿಕಿತ್ಸೆಯನ್ನು ಹಳ್ಳಿಗಳಲ್ಲಿ ನಮ್ಮ ಸರ್ಕಾರ ಮಾಡಲಿಕ್ಕೆ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿದೆ. ಇಂದು ಎಷ್ಟೋ ಹಳ್ಳಿಗಳಲ್ಲಿ ಆಸ್ಪತ್ರೆಗಳು ಇಲ್ಲ. ಆಸ್ಪತ್ರೆಗಳು ಇದ್ದರೂ ಅಲ್ಲಿ ಡಾಕ್ಟರುಗಳು ಇರುವುದಿಲ್ಲ. ಅವರು ಪೇಟೆಗಳಲ್ಲಿ ವಾಸ ಮಾಡುತ್ತಿರುತ್ತಾರೆ. ಅವರು ಹಳ್ಳಿಗಳಿಗೆ ಹೋಗುವುದು ಸಂಬಳದ ಆಸೆಯಿಂದ. ಕೆಲವು ಡಾಕ್ಟರುಗಳು ಹಳ್ಳಿಗೆ ಹೋದರೂ ಅವರ ಪೂರ್ಣ ಮನಸ್ಸು ಅಲ್ಲಿರುವುದಿಲ್ಲ. ನನ್ನನ್ನು ಇಲ್ಲಿಂದ ಬೇಗ ಓಡಿಸಿಯೆಂದು ಹೇಳುತ್ತಾರೆ. ಅವರು ಆ ರೀತಿ ಕೆಲಸ ಮಾಡುತ್ತಿರುತ್ತಾರೆ. ಇಂತಹ ಸಂದರ್ಭದಲ್ಲಿ ಹಳ್ಳಿಯ ಜನರು ಏನು ಮಾಡುತ್ತಾರೆಂದರೆ ಹಳ್ಳಿಯಲ್ಲಿ ಯಾವುದೋ ಮದ್ದನ್ನು ಉಪಯೋಗಿಸಿ ಕಾಯಿಲೆಗೆ ತಕ್ಕ ಚಿಕಿತ್ಸೆಯನ್ನು ಪಡೆಯಲಾಗದೆ ಕಾಯಿಲೆಯನ್ನು ಉಲ್ಬಣ ಮಾಡಿಕೊಂಡು ಕಡೆಗೆ ಅದಕ್ಕೆ ಚಿಕಿತ್ಸೆಯನ್ನು ಮಾಡಲಾಗದೆ ಅಂತಹ ಒಂದು ಪರಿಸ್ಥಿತಿಗೆ ಜನರು ಬಂದು ತಮ್ಮ ಪ್ರಾಣವನ್ನು ಕಳೆದುಕೊಳ್ಳುವ ಪ್ರಮೇಯ ಬಂದಿದೆ.

ಇನ್ನು ಕುರುಡುತನ ನಮ್ಮಲ್ಲಿ ಬರುವುದಿದ್ದರೆ ಇದಕ್ಕೆ ಮುಖ್ಯ ಕಾರಣ, ಆರಂಭದಲ್ಲಿ ಬೇಕಾದಂಥ ಚಿಕಿತ್ಸೆ ಮಾಡದೇ ಇರುವುದು. ಅಥವಾ ಕಣ್ಣಿಗೆ ಬೇಕಾದಂಥ ಶಸ್ತ್ರ ಚಿಕಿತ್ಸೆ ಮಾಡಿಸಿ ಆ ಕಾಯಿಲೆಯನ್ನು ಗುಣಪಡಿಸದೇ ಇರುವುದೇ ಕಾರಣ. ಕ್ಯಾನ್ಸರ್ ಇಂತಹ ಕಾಯಿಲೆಗಳು ಇದ್ದರೆ ಆರಂಭದ ಹಂತದಲ್ಲೇ ನಾವು ಬೇಕಾದಂಥ ಚಿಕಿತ್ಸೆ ಮಾಡಿದರೆ ನಿಜವಾಗಿಯೂ ಉಲ್ಬಣವಾಗುವಂಥ ಸ್ಥಿತಿಗೆ ಹೋಗಿ ಜೀವಕ್ಕೆ ಅಪಾಯವಾಗುವ ಸ್ಥಿತಿ ಖಂಡಿತ ಬರುವುದಿಲ್ಲ. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಡಾಕ್ಟರ್‌ಗಳ ಸೆಟ್‌ನ್ನು ತಯಾರುಮಾಡಿಕೊಂಡು ಒಂದು ಹಳ್ಳಿಗಳಿಗೆ ಈ ಡಾಕ್ಟರ್‌ಗಳು ಹೋಗಿ ಜನರ ಪರೀಕ್ಷೆ ಮಾಡುತ್ತಿದ್ದಾರೆ. ಇಂತಹ ಕಾಯಿಲೆಗಳು ಇರುವ ಜನರನ್ನು ಪರೀಕ್ಷಿಸಿ ಬೇರೆ ಚಿಕಿತ್ಸೆ ಮಾಡಿಸುವಂಥ ಸಂದರ್ಭವನ್ನು ಕಲ್ಪಿಸಿದ್ದಾರೆ. ನಾನು ಅಭಿಪ್ರಾಯ ಪಡುತ್ತಿದ್ದೇನೆ ಏನೆಂದರೆ ಈ ಶುಶ್ರೂಷಾ- ಇದರ ಪ್ರಯೋಜನ ಜನರಿಗೆ ತಲುಪಬೇಕಾದರೆ, ಇದು ಪರಿಣಾಮಕಾರಿಯಾಗಿ ಆಗಬೇಕಾದರೆ ಇದು ವರ್ಷಕ್ಕೆ ಒಂದು ಸಾರಿ ಮಾಡಿದರೆ ಸಾಲದು. ಕನಿಷ್ಟಪಕ್ಷ ಮೂರು ತಿಂಗಳಿಗೊಮ್ಮೆ ಈ ಶುಶ್ರೂಷಾ ಸ್ಕೀಮ್‌ನ್ನು ಜಾರಿಗೆ ತಂದು ಹಳ್ಳಿಹಳ್ಳಿಗಳಿಗೆ ಹೋಗಿ ಜನರನ್ನು ಪರೀಕ್ಷಿಸಿ ಅವರನ್ನು ಎಚ್ಚರಿಸಿ, ಇದನ್ನು ಪರಿಣಾಮಕಾರಿಯಾಗಿ ಮಾಡುವುದಕ್ಕೆ ಮುಂದಿನ ವರ್ಷ ಸಹ ಈ ಸ್ಕೀಮ್‌ನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ಆಡಳಿತ ವಿಚಾರದ ಬಗ್ಗೆ ಹೇಳುವುದಾದರೆ ಪಂಚ ಸೂತ್ರವನ್ನು ನಮ್ಮ ಮುಖ್ಯಮಂತ್ರಿಗಳು ಕಾರ್ಯಗತಗೊಳಿಸುವಂಥ ದೃಢ ಸಂಕಲ್ಪ ಮಾಡಿದ್ದಾರೆ. ಈಗ ಏನಾಗಿದೆ ಎಂದರೆ ನಾವೆಲ್ಲ ಪೇಪರ್‌ನಲ್ಲಿ ಬ್ಯೂರೋಕ್ರಸಿ ಎಂದು ಹೇಳುತ್ತಾ ಇದ್ದೇವೆ. ಇದು ಇಂಗ್ಲೀಷರ ಕಾಲದಿಂದಲೂ ನಡೆದುಕೊಂಡು ಬಂದಂಥ ಈ ಫೈಲುಗಳ ಓಡಾಟ ಪದ್ಧತಿ ಇಂದೂ ಕೂಡ ಮುಂದುವರೆಯುತ್ತಿದೆ. ಇದಕ್ಕೆ ಒಂದು ಕ್ರಾಂತಿಕಾರಕ ಬದಲಾವಣೆ ಆಗದೇ ಇದ್ದರೆ, ಈ ಫೈಲುಗಳ ಓಡಾಟ ಹಳ್ಳಿಯಿಂದ ಬೆಂಗಳೂರಿಗೆ ಕೆಲವೊಮ್ಮೆ ಡೆಲ್ಲಿಯ ತನಕ ಹೋಗುವಾಗ ನ್ಯಾಯವಾಗಿ ಯಾರು ಅರ್ಜಿಹಾಕಿದ್ದಾರೆ, ಅವರು ನಿಜವಾದ ಪ್ರಯೋಜನ ಪಡೆಯುವುದಕ್ಕೆ ಸಾಧ್ಯವಿಲ್ಲ. ಮಾತ್ರವಲ್ಲ ಇಂದು ಅಧಿಕಾರಿಗಳಿಗೆ ಏನಾಗಿದೆ ಅಂದರೆ ಸ್ವಂತ ಜವಾಬ್ದಾರಿ ಅವರಲ್ಲಿ ಇರುವುದಿಲ್ಲ. ಏಕೆಂದರೆ ಒಂದು ವೇಳೆ ತಪ್ಪಾಗಿದ್ದರೂ ಅವರು ಅದಕ್ಕೆ ಬದ್ಧರಾಗಿರುವುದಿಲ್ಲ. ಆದ್ದರಿಂದ ಈ ಪಂಚಸೂತ್ರವನ್ನು ಜಾರಿಗೆತಂದು ಉತ್ತಮವಾದ ಆಡಳಿತವನ್ನು ಕೊಡುವಂಥ ದೃಢಸಂಕಲ್ಪ ಇದೆ. ಇದನ್ನು ಕಾರ್ಯಗತಗೊಳಿಸುವುದಕ್ಕೆ ನಾವೆಲ್ಲರೂ ಬೆಂಬಲಿಸಬೇಕು. ಇದು ಕಾರ್ಯಗತವಾದರೆ ಎಲ್ಲ ಜನರಿಗೆ ಪ್ರಯೋಜನವಾಗುತ್ತದೆ ಎಂಬ ಮಾತನ್ನು ನಾನು ಹೇಳುತ್ತೇನೆ. ಮತ್ತೊಂದು ವಿಚಾರ. ಪಟ್ಟಣಗಳಲ್ಲಿ ವಾಸಿಸುವ ಜನರಿಗೆ ಏನು ಮಾಡುತ್ತಿದ್ದಾರೆ ಎಂದರೆ ಹೌಸ್‌ರೆಂಟ್ ಅಲೋಯನ್ಸ್ ಅಂತ ಕೊಡುತ್ತಿದ್ದಾರೆ. ಹಳ್ಳಿಯ ಜನರಿಗೆ ನಿಜವಾಗಿಯೂ ಬಹಳ ಕಷ್ಟ ಇದೆ. ಹಳ್ಳಿಗೆ ಒಬ್ಬ ಡಾಕ್ಟರನ್ನು ನೇಮಕ ಮಾಡಿದರೆ ಅವನ ಸಂಬಳ 700-800 ರೂಪಾಯಿ ಕಡಿಮೆ ಆಗುತ್ತದೆ. ಅವನ ಮಕ್ಕಳು ಪೇಟೆಯಲ್ಲಿ ಕಲಿಯಬೇಕಾಗುತ್ತದೆ. ಆದ್ದರಿಂದ ಯಾರನ್ನಾದರೂ ಹಳ್ಳಿಗಳಿಗೆ ಟ್ರಾನ್ಸ್‌ಫರ್ ಮಾಡಿದರೆ, ಅವರು ಹೆಚ್ಚು ಸಮಯ ಅಲ್ಲಿ ಉಳಿಯುವುದಿಲ್ಲ. ಅವರು ಆದಷ್ಟು ಬೇಗ ಪೇಟೆಗಳಿಗೆ ಬರಲಿಕ್ಕೆ ಪ್ರಯತ್ನಮಾಡುತ್ತಾರೆ. ಆದ್ದರಿಂದ ಪೇಟೆಯಲ್ಲಿ ಏನು ಹೆಚ್.ಆರ್.ಎ. ಅಂತ ಕೊಡುತ್ತೀರಿ, ಹಾಗೆ ರೂರಲ್ ಅಲೋಯನ್ಸ್ ಅಂತ ಅವರಿಗೆ ಕೊಡಿ. ಬೇಕಾದರೆ ಪೇಟೆಯವರಿಗಿಂತ ಹೆಚ್ಚು

ಅವರಿಗೆ ಕೊಟ್ಟು ಅವರ ಸಂಬಳನ್ನು ಆಕರ್ಷಿಸಿ ಅವರು ಹಳ್ಳಿಗಳಲ್ಲಿ ನೆಲೆಸುವಂತೆ ಮಾಡಬೇಕಾದುದು ಬಹಳ ಅವಶ್ಯಕವೆಂದು ನಾನು ಹೇಳುತ್ತೇನೆ. ಅದೇ ಪ್ರಕಾರ ರೇಷನ್‌ನಲ್ಲಿಯೂ ಸಹ ಪೇಟೆಯವರಿಗೆ ಈ ಹಳ್ಳಿಯವರಿಗೆ ಕಡಿಮೆ ಕೊಡುವಂಥ ತಾರತಮ್ಯ ಇದೆ. ಇವರಿಗೆ ಕೊಡುವ ಸೀಮೆಎಣ್ಣೆ ಕಡಿಮೆ, ಅಕ್ಕಿ ಕಡಿಮೆ, ಮಾತ್ರವಲ್ಲ ಸರ್ಕಾರದಿಂದ ಒದಗಿಸುವಂಥ ಪ್ರತಿಯೊಂದು ಸವಲತ್ತು ಕೂಡ ಕಡಿಮೆ ಇರುತ್ತದೆ. ಈ ಎಲ್ಲಾ ಕಾರಣಗಳಿಂದ ನಮ್ಮ ಅಧಿಕಾರಿಗಳು ಹಳ್ಳಿಗಳ ಕಡೆಗೆ ಹೋಗುವುದಕ್ಕೆ ಇಷ್ಟಪಡದೆ, ಸ್ವಾಭಾವಿಕವಾಗಿ ಪಟ್ಟಣದ ಕಡೆಗೆ ಆಕರ್ಷಿಸಲ್ಪಡುವುದಕ್ಕೆ ಇದು ಮುಖ್ಯ ಕಾರಣ. ಆದ್ದರಿಂದ ಈ ದ್ವಂದ್ವ ನೀತಿಯನ್ನು ಬಿಟ್ಟು ಸರ್ಕಾರಿ ಉದ್ಯೋಗಸ್ಥರು ಪೇಟೆಯಲ್ಲೇ ಇರಲಿ, ಹಳ್ಳಿಗಳಲ್ಲೇ ಇರಲಿ, ಸಮಾನ ಸೌಲಭ್ಯ ಸಮಾನ ವೇತನ ಸಿಗುವಂತೆ ಮಾಡಬೇಕು ಮತ್ತು ಅದನ್ನು ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು, ಸರ್ಕಾರ ಅಭಿವೃದ್ಧಿ ಕಾರ್ಯಗಳ ಕಡೆಗೆ ಬಹಳಷ್ಟು ಗಮನವನ್ನು ಕೊಡುತ್ತಿದೆ. ಇನ್ನು ಈ ವಿಶ್ವ ಯೋಜನೆಯನ್ನು ನಮ್ಮ ಸರ್ಕಾರ ಕಾರ್ಯಗತಗೊಳಿಸಿದೆ. ಮಹಾತ್ಮಾಗಾಂಧೀಜಿಯವರು ತಮ್ಮ 13 ರಚನಾತ್ಮಕವಾದ ಸಲಹೆಗಳಲ್ಲಿ ಗುಡಿಕೈಗಾರಿಕೆಗಳಿಗೆ ಬಹಳಷ್ಟು ಪ್ರೋತ್ಸಾಹ ಕೊಡುತ್ತಿದ್ದರು. ಗುಡಿಕೈಗಾರಿಕೆಗಳು ಹೆಚ್ಚು ಆಗಬೇಕು, ಆಗ ಮಾತ್ರ ನಮ್ಮ ದೇಶದ ಬಡತನ ದೂರವಾಗುತ್ತದೆ. ಹಳ್ಳಿಯ ದುಡಿಯುವ ಜನರಿಗೆ ಕೈಕೆಲಸ ಇಲ್ಲದಿದ್ದರೆ, ಅವರ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಪೂಜ್ಯ ಗಾಂಧೀಜಿಯವರು ಹೇಳುತ್ತಿದ್ದರು.

ಆದ್ದರಿಂದ ಇಂತಹ ತತ್ವವನ್ನು ಅನುಸರಿಸಿಕೊಂಡು ವಿಶ್ವ ಯೋಜನೆಯನ್ನು ನಮ್ಮ ಸರ್ಕಾರ ಇಂದು ಜಾರಿಗೆ ತಂದಿದೆ. ನನ್ನ ಕ್ಷೇತ್ರದಲ್ಲಿಯೂ ಎರಡು ಕಡೆ ಈ ಯೋಜನೆಗಳು ಜಾರಿಯಾದಾಗ, ಅನೇಕ ನಿರುದ್ಯೋಗಿಗಳು, ಕುಶಲಕರ್ಮಿಗಳು ಇದರ ಪ್ರಯೋಜನವನ್ನು ಪಡೆದು, ತರಬೇತಿಯನ್ನು ಪಡೆದು, ಇದರ ಯಶಸ್ವಿಗಾಗಿ ದುಡಿಯುತ್ತಿದ್ದಾರೆ. ಪ್ರಾಯಶಃ ಯುವಕರಲ್ಲಿ ನಿರುದ್ಯೋಗಿತನದ ಪೆಡಂಭೂತ ಯಾವುದಿದೆ, ಅವರಿಗೆ ಹಲವಾರು ದುಷ್ಚಟಗಳು ಏನಿವೆ ಅವುಗಳನ್ನು ದೂರ ಮಾಡುವಂಥ ಸಂದರ್ಭ ಬಂದಿದೆ. ನಮ್ಮ ಯುವಕರಿಗೆ ಯೋಗ್ಯ ತರಬೇತಿಯನ್ನು ಕೊಟ್ಟು, ಅವರ ಕೈಗಳಿಗೆ ಕೆಲಸಗಳನ್ನು ಕೊಟ್ಟು ಅವರು ಸ್ವತಂತ್ರವಾಗಿ ಬಾಳುವಂಥ ವಾತಾವರಣವನ್ನು ಕಲ್ಪಿಸಿದರೆ, ಸ್ವಾಭಾವಿಕವಾಗಿ ನಮ್ಮ ದೇಶದಲ್ಲಿ ಯಾವ ಯುವಕರಲ್ಲಿ ಅಶಿಸ್ತು ಇದೆ, ನಮ್ಮ ಯುವಕರು ಟೆರರಿಸ್ಟ್ ಆಗುವಂಥ ಸಂದರ್ಭ ಇದೆ, ಅದು ಮಾಯವಾಗಿ ಶಾಂತಿಯ ವಾತಾವರಣ ನೆಲೆಸುವುದಕ್ಕೆ ಸಾಧ್ಯ ಉಂಟು. ಅಂತಹ ಯೋಜನೆ ಉತ್ತಮವಾಗಿ ಪರಿಣಾಮಕಾರಿಯಾಗಿ ಅನುಷ್ಠಾನವಾಗಿ ಕರ್ನಾಟಕದಲ್ಲಿ ಯಶಸ್ವಿಯಾಗುತ್ತದೆ ಎಂದು ದೇಶದ ಮೂಲೆಮೂಲೆಗಳಿಂದ ಜನರು ಕಾತುರತೆಯಿಂದ ಕಾಯುತ್ತಿದ್ದಾರೆ. ಇದಕ್ಕೆ ಒದಗಿಸಿರತಕ್ಕ ಹಣ ಸಾಲದು, ಇನ್ನೂ ಹೆಚ್ಚು ಹಣ ಒದಗಿಸಿ ಈ ವಿಶ್ವ ಯೋಜನೆಯನ್ನು ವಿಶ್ವಪರ್ಯಂತ, ಕರ್ನಾಟಕಕ್ಕೆ ಹೆಸರು ತರುವಂತೆ, ಕೈಗಾರಿಕಾ ಕೇಂದ್ರವಾಗಿ ಮಾಡುವಂಥ ಕೆಲಸ ಆಗಲಿ ಎಂದು ನಾನು ಈ ಸಂದರ್ಭದಲ್ಲಿ ಆಶಿಸುತ್ತೇನೆ. ಇನ್ನೂ ಸರ್ಕಾರದವರು ಮಳೆ, ನೆರೆ ನೀರಿನಿಂದ ನೊಂದವರಿಗೆ ಪರಿಹಾರ ಒದಗಿಸುವುದಕ್ಕೆ ಸಾಕಷ್ಟು ಹಣವನ್ನು ಬಜೆಟ್‌ನಲ್ಲಿ ಒದಗಿಸಿದ್ದಾರೆ. ಏಕೆಂದರೆ, ರಸ್ತೆಗಳು ವಾಹನಗಳ ಹೆಚ್ಚಿನ ಓಡಾಟದಿಂದ ಪಕ್ಕನೆ ಹಾಳಾಗುತ್ತವೆ. ಹಾಳಾದಂಥ ರಸ್ತೆಗಳಿಗೆ, ಮಳೆ ನೀರಿನಿಂದ ಹಾಳಾಗತಕ್ಕ ಸಮಯದಲ್ಲಿ ರಸ್ತೆಗಳ ರಿಪೇರಿ ಆಗದಿದ್ದರೆ, ಎರಡರಷ್ಟು ನಷ್ಟವಾಗತಕ್ಕ ಪರಿಸ್ಥಿತಿ ಬಂದಿದೆ. ಆದ್ದರಿಂದ ಮಲೆನಾಡು ಅಭಿವೃದ್ಧಿ ಯೋಜನೆಯನ್ನು, ಮಳೆ ಹೆಚ್ಚು ಬೀಳುವಂಥ ಕರಾವಳಿ ಪ್ರದೇಶದಲ್ಲಿ ಹಾಗೂ ಮಲೆನಾಡು ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಗಾಗಿ ನಿಧಿಯನ್ನು ನಮ್ಮ ಸರ್ಕಾರ ಮಲೆನಾಡು ಅಭಿವೃದ್ಧಿ ಯೋಜನೆ ಮೂಲಕ ಆರ್ಥಿಕ ಸೌಲಭ್ಯವನ್ನು ಒದಗಿಸಿದೆ. ಇದರಿಂದಾಗಿ ಹಳ್ಳಿಗಳಲ್ಲಿ ನವಚೈತನ್ಯ ಮೂಡುವಂಥದ್ದು ಖಂಡಿತ ಕಂಡುಬರುತ್ತಿದೆ ಎಂದು ಆಶಿಸುತ್ತೇನೆ. ಇಂತಹ ಒಳ್ಳೆಯ ಬಜೆಟ್‌ನ್ನು ಕೊಟ್ಟಂಥ ಮುಖ್ಯಮಂತ್ರಿಗಳೂ ಹಾಗೂ ಅರ್ಥಮಂತ್ರಿಗಳಾದ ಶ್ರೀ ಬಂಗಾರಪ್ಪನವರನ್ನು ಹಳ್ಳಿಯ ಜನತೆಯ ಪರವಾಗಿ ಅಭಿನಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಈಗ ಸಭೆಯನ್ನು ಮುಂದೂಡಿ, ನಾಳೆ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು, ಸಾಯಂಕಾಲ 4 ಗಂಟೆ 38 ನಿಮಿಷಕ್ಕೆ ಮುಕ್ತಾಯವಾಗಿ, ಮತ್ತೆ ದಿನಾಂಕ; 6-3-92 ನೇ ಶುಕ್ರವಾರ, ಬೆಳಿಗ್ಗೆ 11ಗಂಟೆಗೆ ಸೇರಲು ನಿಶ್ಚಯಿಸಿತು.)

---

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)